24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 118 | ನವದೆಹಲಿ | ಬೆಲೆ ₹10 | ಅಕ್ಟೋಬರ್, 24, 2026, ಶನಿವಾರ


## ಪ್ರೀತಿಯ ದೆಹಲಿ ಕನ್ನಡ ಬಾಂಧವರೇ,



ದಿನಾಂಕ 25/10/2026 ಭಾನುವಾರ
ಸಂಜೆ 4:00 ಗಂಟೆಗೆ

ದೆಹಲಿ ಒಕ್ಕಲಿಗ ಗೌಡ ಸಂಘ,
ದೆಹಲಿ ಕರ್ನಾಟಕ ಸಂಘದ ಸಹಕಾರದಲ್ಲಿ

ದೆಹಲಿ ಕನ್ನಡಿಗರ ನೆಚ್ಚಿನ
ದೆಹಲಿ ಕರ್ನಾಟಕ ಸಂಘದ ಸಭಾಂಗಣ, ಆರ್.ಕೆ.ಪುರಂ,
ಸೆಕ್ಟರ್-12, ನವದೆಹಲಿ-110022 ಇಲ್ಲಿ ಆಯೋಜಿಸಿರುವ

# ನಾಡಪ್ರಭು ಕೆಂಪೇಗೌಡ ಉತ್ಸವಕ್ಕೆ ಆದರದ ಸುಸ್ವಾಗತ

### ದಿವ್ಯ ಸಾನಿಧ್ಯ ಹಾಗೂ ಆಶೀರ್ವಚನ



ಶ್ರೀಮನ್ನಿರಂಜನ ಪ್ರಣವ ಸ್ವರೂಪಿ
ಪರಮಪೂಜ್ಯ ಜಗದ್ಗುರು
**ಶ್ರೀ ಶ್ರೀ ಶ್ರೀ ಡಾ ॥ ನಿರ್ಮಲಾನಂದನಾಥ ಮಹಾಸ್ವಾಮೀಜಿ**
ಪೀಠಾಧ್ಯಕ್ಷ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



ಪರಮಪೂಜ್ಯ ಜಗದ್ಗುರು
**ಶ್ರೀ ಶ್ರೀ ಶ್ರೀ ನಂಜಾವದೂತ ಸ್ವಾಮೀಜಿ**
ಪೀಠಾಧ್ಯಕ್ಷರು
ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ

### ಉದ್ಘಾಟನೆ



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

### ಮುಖ್ಯ ಅತಿಥಿಗಳು



ನ್ಯಾಯಮೂರ್ತಿ
**ಶ್ರೀ ಎಸ್. ವೆಂಕಟನಾರಾಯಣ ಭಟ್ಟಿ**
ಗೌರವಾನ್ವಿತ ನ್ಯಾಯಾಧೀಶರು
ಭಾರತದ ಸರ್ವೋಚ್ಚ ನ್ಯಾಯಾಲಯ



**ಶ್ರೀ ಟಿ.ಬಿ. ಜಯಚಂದ್ರ**
ಬಿಎಸ್ಸಿ ಎಲ್ಎಲ್ಬಿ. ಮಾನ್ಯ ಶಾಸಕರು ಮತ್ತು ಕರ್ನಾಟಕ ಸರ್ಕಾರದ
ವಿಶೇಷ ಪ್ರತಿನಿಧಿಗಳು. ನವದೆಹಲಿ
(ಸಂಪುಟ ದರ್ಜೆ ಸಚಿವರ ಸ್ಥಾನಮಾನ)



**ಶ್ರೀ ಶ್ರೇಯಸ್ ಎಂ. ಪಟೇಲ್**
ಮಾನ್ಯ ಸಂಸದರು
ಹಾಸನ-ಲೋಕಸಭಾ ಕ್ಷೇತ್ರ



**ಶ್ರೀ ಎಂ. ಕೃಷ್ಣಪ್ಪ**
ಮಾನ್ಯ ಶಾಸಕರು
ವಿಜಯನಗರ, ಬೆಂಗಳೂರು
ಮಾಜಿ ಸಚಿವರು, ಕರ್ನಾಟಕ ಸರ್ಕಾರ



**ಶ್ರೀ ಪ್ರಿಯ ಕೃಷ್ಣ**
ಮಾನ್ಯ ಶಾಸಕರು
ಗೋವಿಂದರಾಜನಗರ, ಬೆಂಗಳೂರು

### ಗೌರವ ಅತಿಥಿಗಳು



ಡಾ. ಕೆ.ಎಸ್. ಸೋಮಶೇಖರ್
ಕಾರ್ಯದರ್ಶಿ,
ರಾಜ್ಯಸಭಾ ಸಚಿವಾಲಯ, ನವದೆಹಲಿ

### ಗೌರವ ಉಪಸ್ಥಿತಿ



ಶ್ರೀ ಅಭಿಜಿತ್ ಗೌಡ
ಸಮುದಾಯದ
ಯುವ ಪ್ರತಿಭೆ



ಶ್ರೀ ರೇಣುಕುಮಾರ್ ಆರ್.
ಅಧ್ಯಕ್ಷರು ।
ದೆಹಲಿ ಕರ್ನಾಟಕ ಸಂಘ, ನವದೆಹಲಿ

## ನಿತ್ಯ ಪಂಚಾಂಗ 24.10.2026 ಶನಿವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಶರದ್ ಋತು, ಚಾಂದ್ರಮಾನ ಶ್ರಾವಣ–ಆಶ್ವಯುಜ ಮಾಸ

ಆಶ್ವಯುಜ ಶುದ್ಧ, ತ್ರಯೋದಶಿ, ಉತ್ತರಾಬಾದ್ರಾ ನಕ್ಷತ್ರ, 4ನೇ ಶನಿವಾರ, ರಾಮತೀರ್ಥ ಆರಾಧನೆ, ವಿಶ್ವಸಂಸ್ಥೆ ದಿನ/ವಿಶ್ವ ಅಭಿವೃದ್ಧಿ ಮಾಹಿತಿ ದಿನ, ಚಾಮುಂಡೇಶ್ವರೀ ರಥೋತ್ಸವ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಭಾರತ್ ಜೋಡೋಗೆ ನೀಡಲು ಹಣವಿದೆ, ರೈತರ ಸಂಕಷ್ಟಕ್ಕಿಲ್ಲವೇ?

### ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನೆ



ಬೆಂಗಳೂರು, ಅ.23: ಭಾರತ್ ಜೋಡೊ ಹೆಸರಿನಲ್ಲಿ ಪಂಚಾಯಿತಿಗೆ 10 ಲಕ್ಷ ರೂ. ಗಳಂತೆ 1 ಸಾವಿರ ಕೋಟಿ ರೂ. ಖರ್ಚು ಮಾಡಲು ಹಣವಿದೆ. ರೈತರ ಸಂಕಷ್ಟಕ್ಕೆ ನೀಡಲು ಹಣವಿಲ್ಲವೇ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರಕ್ಕೆ ನೆರವು ಕೋರಿ ಪತ್ರ ಬರೆದರೆ ಸಾಕೇ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿ ಪರಿಸ್ಥಿತಿಯ ಮನವರಿಕೆ ಮಾಡಿಕೊಡಬೇಡವೇ ಎಂದರು.

ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಒಟ್ಟು 20,164 ಕೋಟಿ ರೂ. ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರಂತೆ. ನೇರವಾಗಿ ಕೇಂದ್ರ ಸಚಿವರನ್ನು ಭೇಟಿಯಾಗಬೇಕಲ್ಲವೇ, ಬರಕ್ಕೆ ಸಂಬಂಧಿಸಿದಂತೆ ನಾಲ್ಕು ರೀತಿಯ ಆರ್ಥಿಕ ನೆರವು ಕೇಳಿದರೆ ರಾಜ್ಯ ಯಾವ ರೀತಿ ಸಿದ್ಧತೆ ಮಾಡಿಕೊಂಡಿದೆ ಎಂದು ಭಾವಿಸುವುದಿಲ್ಲವೇ ಎಂದು ಹೇಳಿದರು.

ಪ್ರತೀ ರೈತರಿಗೆ 2500 ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ ರಾಜ್ಯಸರ್ಕಾರ ಇದುವರೆಗೂ ಯಾರಿಗೂ ಕೊಟ್ಟಿಲ್ಲ. ರಾಹಲ್‌ಗಾಂಧಿ ವಿದೇಶ ಪ್ರವಾಸ ಮುಗಿದ ಮೇಲೆ 500 ನಿರ್ದೇಶಕರನ್ನು ನಿಗಮ ಮತ್ತು ಮಂಡಳಿಗಳಿಗೆ ನೇಮಕ ಮಾಡಲು ನಿರ್ಧರಿಸಿ ಪಟ್ಟಿ ಸಿದ್ಧಪಡಿಸಿ ಕೊಂಡಿದ್ದಾರಂತೆ. ಈ ರೀತಿ ದುಂದುವೆಚ್ಚ ಏಕೆ ಮಾಡಬೇಕು ಎಂದು ಪ್ರಶ್ನಿಸಿದರು.

### ಸ್ಟಿಂಗ್ ಆಪರೇಷನ್: ಕಾಟಾಚಾರದ ವಿಚಾರಣೆ

ರಾಜಕೀಯ ಲಾಭಕ್ಕಾಗಿ ಜೆಡಿಎಸ್ ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ಸಂಚು ರೂಪಿಸಿದೆ ಎಂದು ಆರೋಪಿಸಿ ಮುಖ್ಯಮಂತ್ರಿ, ಗೃಹಮಂತ್ರಿ ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ವರದಿ ಒಪ್ಪಿಸಿ ಬಂದಿದ್ದಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಟ್ಟ ಹೆಸರು ತರಲು ಸ್ಟಿಂಗ್ ಆಪರೇಷನ್ ಮಾಡಿರುವುದು ನಮ್ಮ ಪಕ್ಷದವರೇ ಎಂದು ಹೇಳಿದ್ದಾರೆ. ಸ್ಟಿಂಗ್ ಆಪರೇಷನ್ ಮಾಡಿದ ವ್ಯಕ್ತಿಯನ್ನು ಬಂಧಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಇನ್ನೇನು ಆಧಾರ ಬೇಕು ಎಂದು ಪ್ರಶ್ನಿಸಿದರು.

ಸ್ಟಿಂಗ್ ಆಪರೇಷನ್ ಆರೋಪಿ ಜೊತೆ ಕೆಲಸ ಮಾಡುತ್ತಿದ್ದ ವಿಕ್ಕಿ ಎಂಬ ವ್ಯಕ್ತಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದ. ಈಗಿನ ಮುಖ್ಯಮಂತ್ರಿ ಯುಡಿಆರ್ ಕೇಸು ಮಾಡುವಂತೆ ಮಾಡಿ ಆ ಪ್ರಕರಣವನ್ನು ಮುಚ್ಚಿಹಾಕಿದ್ದಾರೆ ಎಂದು ಆರೋಪಿಸಿದರು. ಸರ್ಕಾರವೇ ಆ ವ್ಯಕ್ತಿ ಪರವಾಗಿದ್ದು, ನಿಷ್ಪಕ್ಷಪಾತ ತನಿಖೆ ನಡೆಯುವ ಬಗ್ಗೆ ಅನುಮಾನವಿದೆ. ಕಾಂಗ್ರೆಸ್ ಪಕ್ಷವನ್ನು ಉಳಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಹಾಳುಮಾಡಿ ಕಾಂಗ್ರೆಸ್ ಮುಗಿಸಲು ಹೊರಟಿದ್ದೀರಿ ಎಂದು ವಾಗ್ದಾಳಿ ನಡೆಸಿದರು.


**BANGALORE DEVELOPMENT AUTHORITY**

T. Chowdaiah Road, Kumara Park West, Bengaluru - 560 020

**CORRIGENDUM**

The following sites published by the Bangalore Development Authority (BDA) under E-Auction Notification No.: BDA/EM/E-Auction/T-15/2026-27 dated 03.10.2026 are hereby withdrawn from the e-auction process as they have been allotted:

| Sl. No. | Notification wise Sl. No. | Layout | Site No. |
|---|---|---|---|
| 1 | 7 | Anjanapura 6th Block | 552 |
| 2 | 8 | Anjanapura 6th Block | 553 |
| 3 | 26 | Banashankari 6th Stage, 5th Block, Hemmigepura | 1105 |
| 4 | 27 | Banashankari 6th Stage, 5th Block, Hemmigepura | 1129 |
| 5 | 53 | Further Extension of Banashankari 6th Stage, 4th 'B' Block, U.M. Kaval | 998 |
| 6 | 54 | Further Extension of Banashankari 6th Stage, 4th 'B' Block, U.M. Kaval | 1063 |
| 7 | 55 | Further Extension of Banashankari 6th Stage, 4th 'H' Block | 378 |
| 8 | 56 | Further Extension of Banashankari 6th Stage, 4th 'H' Block | 372/B |

In place of these withdrawn sites, the following replacement sites are hereby added:

| Sl. No. | Layout | Site No. | E-W ( In Mtrs) | N-S ( In Mtrs) | Total Area (in Sqm) | Rate per Sq.mtr. (Rs.) |
|---|---|---|---|---|---|---|
| 1 | Further Extension of Banashankari 6th Stage, 4th 'H' Block | 3481 | (4.0+5.41)/2 | (10.54+12.00)/2 | 52.00 | 70,000.00 |
| 2 | Banashankari 6th Stage, 10th Block, Hemmigepura | 853 | 24.00 | (12.30+20.30)/2 | 391.20 | 65,000.00 |
| 3 | Banashankari 6th Stage, 11th Block, Ganakallu | 317 | (7.30+1.50)/2 | 12.00 | 52.80 | 84,000.00 |
| 4 | Further Extension of Anjanapura 11 Block, Kembathalli | 1332 | 8.60 | 12.00 | 103.20 | 77,800.00 |
| 5 | Further Extension of Anjanapura 11 Block, Kembathalli | 1362 | 9.00 | 12.00 | 108.00 | 77,800.00 |
| 6 | Further Extension of Anjanapura 11 Block, Kembathalli | 1333 | 8.60 | 12.00 | 103.20 | 77,800.00 |
| 7 | Further Extension of Anjanapura 11 Block, Kembathalli | 271 | 12.00 | 6.20 | 74.40 | 77,800.00 |
| 8 | Further Extension of Anjanapura 11 Block, Kembathalli | 1363 | 9.00 | 12.00 | 108.00 | 77,800.00 |

Further, the area of Site No. 360 in J. P. Nagar, 9th Stage, 4th Block, Thippasandra Layout, mentioned at Sl. No. 77, shall be **read as 233.98 sq.m.** There are no changes in the other terms and conditions of the Auction Notice. BDA regrets for the inconvenience. Helpline / Whatsapp: 9483166622 (24x7) @BDAOfficialGok

**Sd/- Engineer Member**


# ಸೌದಿ ಅರೇಬಿಯಾದಲ್ಲಿ ಸಿಲುಕಿರುವ 600ಕ್ಕೂ ಹೆಚ್ಚು ಉಮ್ರಾ ಯಾತ್ರಿಕರ ರಕ್ಷಣೆಗೆ ಸಿಎಂ ಮನವಿ

### ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್‌ಗೆ ಡಿ.ಕೆ. ಶಿವಕುಮಾರ್ ಪತ್ರ

**ಬೆಂಗಳೂರು, ಅ.23:** ಮಧ್ಯಪ್ರಾಚ್ಯ ದೇಶಗಳ ಭದ್ರತಾ ಬಿಕ್ಕಟ್ಟು ಹಾಗೂ ಅದರಿಂದ ಉಟಾಗಿರುವ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಸೌದಿ ಅರೇಬಿಯಾದ ಮೆಕ್ಕಾ ಮತ್ತು ಮದೀನಾ ನಗರಗಳಲ್ಲಿ ಸಿಲುಕಿರುವ ಕರ್ನಾಟಕದ 600ಕ್ಕೂ ಅಧಿಕ ಉಮ್ರಾ ಯಾತ್ರಿಕರನ್ನು ಸುರಕ್ಷಿತವಾಗಿ ಶೀಘ್ರವೇ ರಾಜ್ಯಕ್ಕೆ ಕರೆತರಲು ತುರ್ತುಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರಿಗೆ ಶುಕ್ರವಾರ ಪತ್ರ ಬರೆದಿದ್ದು, ಸೌದಿ ಸರ್ಕಾರವು ಬೆಂಗಳೂರು ಹಾಗೂ ಭಾರತದ ಇತರ ಭಾಗಗಳಿಗೆ ಹಿಂದಿರುಗಬೇಕಿದ್ದ ವಿಮಾನಗಳ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವುದರಿಂದ, ಕರ್ನಾಟಕದ ಉಮ್ರಾ ಯಾತ್ರಿಕರು ಮೆಕ್ಕಾ ಹಾಗೂ ಮದೀನಾದಲ್ಲಿ ಅತಂತ್ರರಾಗಿದ್ದಾರೆ ಎಂದು ತಿಳಿಸಿದ್ದಾರೆ. ಇತ್ತೀಚೆಗೆ ಪವಿತ್ರ ಸ್ಥಳಗಳಿಗೆ ಭೇಟಿ ನೀಡಿದ್ದ ಕರ್ನಾಟಕ ರಾಜ್ಯ ಹಜ್ ಸಮಿತಿಯ ಅಧ್ಯಕ್ಷರು ಹಾಗೂ ಅವರ ತಂಡವು ವಸ್ತುಸ್ಥಿತಿಯ ಬಗ್ಗೆ ಮಾಹಿತಿ ನೀಡಿದ್ದು, ಯಾತ್ರಿಕರು ವಿಮಾನ ಸೇವೆಗಳ ವ್ಯತ್ಯಯದಿಂದ ತೀವ್ರ ಸಂಕಷ್ಟ ಎದುರಿಸುತ್ತಿರುವುದಲ್ಲದೇ, ಅನೇಕರ ಬಳಿ ಹಣವೂ ಖಾಲಿಯಾಗಿದೆ. ಆಹಾರ ಮತ್ತು ವಸತಿಗಾಗಿ ಪರದಾಡುವ ಪರಿಸ್ಥಿತಿ ಎದುರಾಗಿದೆ. ಜತೆಗೆ ಹೋಟೆಲ್ ಮಾಲೀಕರು ಯಾತ್ರಿಕರಿಗೆ ಕೊಠಡಿಗಳನ್ನು ಖಾಲಿ ಮಾಡುವಂತೆ ಒತ್ತಾಯಿಸುತ್ತಿದ್ದು, ವೃದ್ಧರು, ಮಹಿಳೆಯರು ಮತ್ತು ಮಕ್ಕಳಿಗೆ ದಿಕ್ಕು ತೋಚದಂತಾಗಿದೆ ಎಂದು ಹೇಳಿದ್ದಾರೆ.

ಸಂಕಷ್ಟದಲ್ಲಿ ಸಿಲುಕಿರುವ ಕರ್ನಾಟಕದ ಜನರ ಬಗ್ಗೆ ಮಾನವೀಯತೆ ದೃಷ್ಟಿಯಿಂದ ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಹಾಗೂ ಜೆಡ್ಡಾದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಕಚೇರಿ ಸೌದಿ ಅರೇಬಿಯಾ ಅಧಿಕಾರಿಗಳು, ವಿಮಾನಯಾನ ಸಂಸ್ಥೆಗಳು ಮತ್ತು ಇತರ ಸಂಬಂಧಿತ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸಿ ಯಾತ್ರಿಕರ ಸುರಕ್ಷಿತ ವಾಪಸಾತಿಗೆ ತಾವು ತುರ್ತು ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಎಲ್ಲ ರೀತಿಯ ನೆರವು ನೀಡಲು ರಾಜ್ಯ ಸರ್ಕಾರ ಸಿದ್ಧ**

ಅಗತ್ಯವಿರುವ ಕಡೆಗಳಲ್ಲಿ ಸಚಿವಾಲಯವು ವಿಶೇಷ ವಿಮಾನಗಳ ಓಡಾಟಕ್ಕೆ ವ್ಯವಸ್ಥೆ ಮಾಡಬೇಕು. ಯಾತ್ರಿಕರು ಸುರಕ್ಷಿತವಾಗಿ ಹಿಂತಿರುಗುವವರೆಗೂ ಅವರಿಗೆ ಅಗತ್ಯವಿರುವ ಎಲ್ಲರೀತಿಯ ನೆರವನ್ನು ನೀಡಬೇಕು. ಇದು ಅತ್ಯಂತ ಗಂಭೀರ ವಿಷಯವಾಗಿರುವುದರಿಂದ ಇದಕ್ಕೆ ಆದ್ಯತೆಯ ಮೇರೆಗೆ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು. ಯಾತ್ರಿಕರ ಸುರಕ್ಷಿತ ಮತ್ತು ಶೀಘ್ರ ವಾಪಸಾತಿಗೆ ಕರ್ನಾಟಕ ಸರ್ಕಾರ ಸಂಪೂರ್ಣ ಸಹಕಾರ ನೀಡಲು ಸಿದ್ಧವಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

# ಕಬ್ಬು ಬೆಳೆಗಾರರ ಸಂಕಷ್ಟ ಪರಿಹಾರಕ್ಕೆ ಕೇಂದ್ರದಿಂದ ಹಲವು ಕ್ರಮ

### ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ನುಣುಚಿಕೊಳ್ಳುವ ಯತ್ನ: ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿ



**ಬೆಂಗಳೂರು, ಅ. 23:** ರಾಜ್ಯದ ಕಬ್ಬು ಬೆಳೆಗಾರರ ಸಂಕಷ್ಟಗಳನ್ನು ಪರಿಹರಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಮಾತ್ರ ನುಣುಚಿಕೊಳ್ಳಲು ಯತ್ನಿಸುತ್ತಿದೆ. ಕೂಡಲೇ ರಾಜ್ಯ ಸರ್ಕಾರ ಕೂಡ ತನ್ನ ಪಾಲಿನ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, ರಾಜ್ಯದ ಕಬ್ಬು ಬೆಳೆಗಾರರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಹಲವೆಡೆ ರೈತ ಸಂಘಟನೆಗಳು ತೀವ್ರ ಪ್ರತಿಭಟನೆ ನಡೆಸಿವೆ. ಕಬ್ಬು ಬೆಳೆಯಲು ಬೀಜ, ರಸಗೊಬ್ಬರ, ಕೀಟನಾಶಕ, ಕಾರ್ಮಿಕರ ಕೂಲಿ, ನೀರಾವರಿ ಮತ್ತು ಸಾಗಣೆ ವೆಚ್ಚಗಳು ನಿರಂತರವಾಗಿ ಹೆಚ್ಚಾಗುತ್ತಿವೆ. ಈ ಬಾರಿ ಬರಗಾಲ ಇರುವುದರಿಂದ ನೀರಿನ ಸಮಸ್ಯೆ ಹಿಂದಿಗಿಂತಲೂ ತೀವ್ರವಾಗಿದೆ. ಆದರೆ ರೈತರು ಜೇಬಿನಿಂದ ಖರ್ಚು ಮಾಡುವ ಹಣಕ್ಕೆ ತಕ್ಕಂತೆ ಲಾಭ ದೊರೆಯುತ್ತಿಲ್ಲ. ಇದರಿಂದಾಗಿ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸಿದ ಕೂಡಲೇ ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ, ಸಾರ್ವಜನಿಕ ವಿತರಣೆ, ನವ ಮತ್ತು ನವೀಕೃತ ಇಂಧನ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಬೆಳೆಗಾರರ ಅಹವಾಲು ಆಲಿಸಿದ್ದಾರೆ ಎಂದು ಹೇಳಿದ್ದಾರೆ.

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವುದು ಕೇವಲ ಕೇಂದ್ರ ಸರ್ಕಾರದ ಕೆಲಸವಲ್ಲ. ರಾಜ್ಯ ಸರ್ಕಾರ ಕೂಡ ತನ್ನ ಜವಾಬ್ದಾರಿಯನ್ನು ಹೊರಬೇಕಿದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಎಲ್ಲ ಜವಾಬ್ದಾರಿಗಳಿವೆ ಎಂಬಂತೆ ಬಿಂಬಿಸಿ ತನ್ನದೇನೂ ಹೊಣೆ ಇಲ್ಲ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಸರ್ಕಾರ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬೇಕೆಂದು ಇಲ್ಲಿ ಮನವಿ ಮಾಡುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

**ಕೇಂದ್ರದಂತೆ ರಾಜ್ಯ ಸರ್ಕಾರವೂ ಜವಾಬ್ದಾರಿ ನಿಭಾಯಿಸಲಿ**

ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಕಾರ್ಯನಿರ್ವಹಿಸಿದರೆ ರೈತರಿಗೆ ಒಳಿತಾಗುತ್ತದೆ. ಈ ಸಮಯದಲ್ಲಿ ರೈತರ ಹಿತದೃಷ್ಟಿಯನ್ನು ನೋಡಬೇಕು. ಕೇವಲ ರಾಜಕೀಯ ಆರೋಪಗಳನ್ನು ಮಾಡುವುದರಿಂದ ರೈತರ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ಕೇಂದ್ರ ಸರ್ಕಾರ ಹೇಗೆ ತನ್ನ ಜವಾಬ್ದಾರಿಗಳನ್ನು ನಿಭಾಯಿಸುತ್ತಿದೆಯೋ, ಅದೇ ಮಾದರಿಯಲ್ಲಿ ರಾಜ್ಯ ಸರ್ಕಾರ ಕೂಡ ಜವಾಬ್ದಾರಿ ನಿಭಾಯಿಸಬೇಕೆಂದು ಮನವಿ ಮಾಡುತ್ತಿದ್ದೇನೆ. ಕಾಂಗ್ರೆಸ್ ಸರ್ಕಾರ ಈ ಕುರಿತು ಕ್ರಮ ಕೈಗೊಳ್ಳಲಿದೆ ಎಂದು ನಿರೀಕ್ಷಿಸುತ್ತೇನೆ ಎಂದು ಅಶೋಕ್ ಹೇಳಿದ್ದಾರೆ.

# ಯಾವ ಸಚಿವರಿಗೂ ಇಂತಹ ಪರಿಸ್ಥಿತಿ ಬರಬಾರದು: ಮಧು ಬಂಗಾರಪ್ಪ ಬೇಸರ

### ದಸರಾ ನಂದಿಧ್ವಜ ಪೂಜೆ ವೇಳೆ ಮೂವರು ಸಚಿವರನ್ನು ತಡೆದ ಪ್ರಕರಣ



ಬೆಂಗಳೂರು, ಅ.23: ಮೈಸೂರು ದಸರಾ ಸಂದರ್ಭದಲ್ಲಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ವೇಳೆ ಮೂವರು ಸಚಿವರನ್ನು ಮೈಸೂರು ಪೊಲೀಸ್ ವರಿಷ್ಠಾಧಿಕಾರಿಗಳು ತಡೆದಿದ್ದಾರೆ ಎಂಬ ಆರೋಪವನ್ನು ಸಚಿವ ಮಧು ಬಂಗಾರಪ್ಪ ನಿರಾಕರಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು,, ಬಿಜೆಪಿ ನಾಯಕರು ದಲಿತ ಸಚಿವರಿಗೆ ಪ್ರವೇಶ ನಿರಾಕರಿಸಲಾಗಿದೆ ಎಂದು ಆರೋಪಿಸುತ್ತಿದ್ದಾರೆ. ಸಚಿವರು ದಲಿತರಾಗಿರುವುದು ಕಾಕತಾಳೀಯ ವಾದರೂ, ಯಾವುದೇ ಸಚಿವರಿಗೂ ಇಂತಹ ಪರಿಸ್ಥಿತಿ ಎದುರಾಗಬಾರದು ಎಂಬುದು ನನ್ನ ಅಭಿಪ್ರಾಯ ಎಂದರು. ಈ ವಿಚಾರವಾಗಿ ಮುಖ್ಯಮಂತ್ರಿ ಅವರು ತನಿಖೆ ನಡೆಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಈ ಕುರಿತು ಹೆಚ್ಚಿನ ಪ್ರತಿಕ್ರಿಯೆ ನೀಡುವುದು ಸೂಕ್ತವಲ್ಲ ಎಂದು ತಿಳಿಸಿದರು.

**ಹೋರಾಟ ಮುಂದುವರಿಯುತ್ತದೆ**

ಭಾರತ್ ಜೋಡೋ 2.0 ಪಾದಯಾತ್ರೆ ಶಿಕಾರಿಪುರಕ್ಕೆ ಮಾತ್ರ ಸೀಮಿತವಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಮ್ಮ ಹೋರಾಟ ಯಾವಾಗಲೂ ಮುಂದುವರಿಯುತ್ತದೆ. ಮುಂದಿನ ಹೋರಾಟಗಳ ಕುರಿತು ಪಕ್ಷದ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಮಾಹಿತಿ ನೀಡಲಿದ್ದಾರೆ ಎಂದರು. ನಮ್ಮ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮತಗಳ್ಳತನದ ಆರೋಪದ ಕುರಿತು ದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ಮುಂದಿನ ತಿಂಗಳು ಬೃಹತ್ ಪ್ರತಿಭಟನೆಗೆ ಕರೆ ನೀಡಿದ್ದಾರೆ. ಈ ಪ್ರತಿಭಟನೆಯಲ್ಲಿ ನಾವೆಲ್ಲರೂ ಭಾಗವಹಿಸಲಿದ್ದೇವೆ ಎಂದು ಮಧು ಬಂಗಾರಪ್ಪ ತಿಳಿಸಿದರು.

**ಶಿವಮೊಗ್ಗ ದಸರಾ ಆನೆ ಘಟನೆ: ವೈಜ್ಞಾನಿಕ ವರದಿ ಬಳಿಕ ಕ್ರಮ**

ಶಿವಮೊಗ್ಗ ದಸರಾ ಮೆರವಣಿಗೆಯಲ್ಲಿ ಅಂಬಾರಿ ಹೊತ್ತಿದ್ದ ಸೋಮಣ್ಣ ಎಂಬ ಆನೆ ಗಾಬರಿಯಾಗಿ ಓಡಿದ ಘಟನೆಗೆ ಸಂಬಂಧಿಸಿದಂತೆ ಶನಿವಾರ ಜಿಲ್ಲಾಧಿಕಾರಿ, ಅರಣ್ಯಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು. ಆನೆ ಗಾಬರಿಯಾಗಿ ಓಡಲು ನಿಖರ ಕಾರಣ ತಿಳಿದುಬಂದಿಲ್ಲ. ಒಂದು ಕಡೆ ಬ್ಯಾಂಡ್ ವಾದ್ಯಗಳ ಶಬ್ದ, ಮತ್ತೊಂದೆಡೆ ಕಿಕ್ಕಿರಿದು ಸೇರಿದ್ದ ಜನರನ್ನು ಕಂಡು ಆನೆ ಬೆದರಿ ಓಡಿರಬಹುದು. ತಾಯಿ ಚಾಮುಂಡೇಶ್ವರಿಯ ಕೃಪೆಯಿಂದ ದೊಡ್ಡ ಅನಾಹುತ ತಪ್ಪಿದೆ ಎಂದು ಹೇಳಿದರು. ಘಟನೆಗೆ ಸಂಬಂಧಿಸಿದಂತೆ ವೈಜ್ಞಾನಿಕ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವರದಿ ಬಂದ ಬಳಿಕ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

# ಧರ್ಮಸ್ಥಳದಲ್ಲಿ ಛದ್ಮವೇಷ ಸ್ಪರ್ಧೆ: ವೈವಿಧ್ಯಮಯ ವೇಷಭೂಷಣಗಳೊಂದಿಗೆ ಗಮನ ಸೆಳೆದ ಸ್ಪರ್ಧಿಗಳು





**ಮುಂಬಯಿ, ಅ.23:** ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ, ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಪಟ್ಟಾಭಿಷೇಕದ 59ನೇ ವರ್ಧಂತ್ಯುತ್ಸವದ ಅಂಗವಾಗಿ ಧರ್ಮಸ್ಥಳದಲ್ಲಿ ಆಯೋಜಿಸಲಾದ ಛದ್ಮವೇಷ ಸ್ಪರ್ಧೆಯು ವೈವಿಧ್ಯಮಯ ವೇಷಭೂಷಣ ಹಾಗೂ ಆಕರ್ಷಕ ಅಭಿನಯಗಳೊಂದಿಗೆ ಗಮನ ಸೆಳೆಯಿತು. ಸ್ಪರ್ಧಿಗಳು ವಿಭಿನ್ನ ಪಾತ್ರಗಳಿಗೆ ಜೀವತುಂಬುವ ಮೂಲಕ ತಮ್ಮ ಸೃಜನಶೀಲತೆ, ಕಲಾತ್ಮಕ ಕೌಶಲ ಹಾಗೂ ಅಭಿನಯ ಪ್ರತಿಭೆಯನ್ನು ಅನಾವರಣಗೊಳಿಸಿದರು. ಸಾಂಪ್ರದಾಯಿಕ, ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಸಂದೇಶಗಳನ್ನು ಸಾರುವ ವೈವಿಧ್ಯಮಯ ವೇಷಗಳು ಸ್ಪರ್ಧೆಯ ಪ್ರಮುಖ ಆಕರ್ಷಣೆಯಾಗಿದ್ದವು.

ಛದ್ಮವೇಷ ಸ್ಪರ್ಧೆಯು ಕೇವಲ ಮನರಂಜನೆಗೆ ಸೀಮಿತವಾಗದೆ, ಸಮಾಜಕ್ಕೆ ಉತ್ತಮ ಸಂದೇಶಗಳನ್ನು ಸಾರುವ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವ ಅರ್ಥಪೂರ್ಣ ವೇದಿಕೆಯಾಗಿ ಮೂಡಿಬಂತು. ಸ್ಪರ್ಧಿಗಳ ಕಲ್ಪನಾಶಕ್ತಿ, ಕಲಾತ್ಮಕ ಅಭಿವ್ಯಕ್ತಿ ಹಾಗೂ ವಿಭಿನ್ನ ಪಾತ್ರಗಳನ್ನು ಜೀವಂತವಾಗಿ ಚಿತ್ರಿಸುವ ಪ್ರಯತ್ನಗಳು ಕಾರ್ಯಕ್ರಮದ ವಿಶೇಷವಾಗಿದ್ದವು.

ಸ್ಪರ್ಧೆಯ ವಿಜೇತರು ಪ್ರಾಥಮಿಕ ಶಾಲಾ ವಿಭಾಗ: ಪ್ರಥಮ ಸ್ಥಾನ: ನಿಹಿರಾ ಮತ್ತು ಬಳಗ; ದ್ವಿತೀಯ ಸ್ಥಾನ : ಅವನಿ ಎಸ್. ಶೆಟ್ಟಿ. ಪ್ರೌಢಶಾಲಾ ವಿಭಾಗ: ಪ್ರಥಮ ಸ್ಥಾನ :ಕೀರ್ತಿ ಮತ್ತು ಬಳಗ; ದ್ವಿತೀಯ ಸ್ಥಾನ: ಶ್ರಾವ್ಯ ಮತ್ತು ಬಳಗ. ಮಹಿಳಾ ವಿಭಾಗ: ಪ್ರಥಮ ಸ್ಥಾನ : ಖರ್ಚು ಉಗ್ರಾಣ ಮತ್ತು ಬಳಗ; ದ್ವಿತೀಯ ಸ್ಥಾನ : ಪ್ರೇರಣಾ ತಂಡ. ಸೀನಿಯರ್ ವಿಭಾಗ: ಪ್ರಥಮ ಸ್ಥಾನ : ಜನಾರ್ದನ ಮತ್ತು ಬಳಗ; ದ್ವಿತೀಯ ಸ್ಥಾನ: ಎಸ್.ಕೆ.ಡಿ.ಆರ್.ಡಿ.ಪಿ. ಬಳಗ. ಸೂಪರ್ ಸೀನಿಯರ್ ವಿಭಾಗ: ಪ್ರಥಮ ಸ್ಥಾನ : ರಂಗಶಿವ ಮತ್ತು ಬಳಗ; ದ್ವಿತೀಯ ಸ್ಥಾನ : ಸಾಮರ್‌ಸೆಟ್.

# ಶಿಕ್ಷಕರ ಕ್ಷೇತ್ರದಲ್ಲೂ ಮತಕ್ಕೆ ಹಣದ ಆಮಿಷ, ನೋವಿನ ಸಂಗತಿ: ಬಸವರಾಜ ಹೊರಟ್ಟಿ ವಿಷಾದ



ಹುಬ್ಬಳ್ಳಿ, ಅ.23: ಈ ಹಿಂದೆ ವಿಧಾನ ಪರಿಷತ್‌ಗೆ ಮುತ್ಸದ್ದಿಗಳು ಆಯ್ಕೆಯಾಗಿ ಬರುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಪರಿಷತ್ ಕೂಡ ವಿಧಾನಸಭೆಯಂತೆಯೇ ಆಗಿದೆ ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನಲೆಯಲ್ಲಿ ನಗರದ ಫಾತಿಮಾ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಶುಕ್ರವಾರ ಮತದಾನ ಮಾಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವ ಅಭ್ಯರ್ಥಿಗಳು ಕೂಡ ಹಣ ನೀಡಿ ಮತಗಳನ್ನು ಪಡೆದು ಆಯ್ಕೆಯಾಗುತ್ತಿರುವುದು ನೋವಿನ ಸಂಗತಿ. ಶಿಕ್ಷಕರು ಇಂತಹ ಆಮಿಷಗಳಿಂದ ದೂರವಿದ್ದು, ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಪ್ರತಿ ಬಾರಿ ಪದವೀಧರ ಕ್ಷೇತ್ರದ ಚುನಾವಣೆ ನಡೆಯುವಾಗ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ನೋಂದಾಯಿಸಿಕೊಳ್ಳುವ ಪ್ರಕ್ರಿಯೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟ ಅವರು, ಒಮ್ಮೆ ಪದವಿ ಪಡೆದವರು ಜೀವನಪೂರ್ತಿ ಪದವೀಧರರಾಗಿಯೇ ಇರುತ್ತಾರೆ. ಹೀಗಾಗಿ, ಚುನಾವಣೆಯ ಸಂದರ್ಭದಲ್ಲಿ ಹೊಸದಾಗಿ ಹೆಸರು ಸೇರ್ಪಡೆ ಮಾಡಿಕೊಳ್ಳುವ ಅವಕಾಶವಿರಬೇಕೇ ಹೊರತು, ಪ್ರತಿ ಬಾರಿಯೂ ಹೊಸದಾಗಿ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಇರಬಾರದು ಎಂದರು.

ಮಾಜಿ ಮುಖ್ಯಮಂತ್ರಿಗಳ ಆಡಳಿತವನ್ನು ಸ್ಮರಿಸಿದ ಹೊರಟ್ಟಿ, ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರಿನಲ್ಲಿ ವಿಧಾನಸೌಧ ನಿರ್ಮಿಸಿದರು. ರಾಮಕೃಷ್ಣ ಹೆಗಡೆ ಅವರು ಆಡಳಿತ ವಿಕೇಂದ್ರೀಕರಣಕ್ಕೆ ಒತ್ತು ನೀಡಿದರು. ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಸಿದರು. ಆದರೆ, ಈಗಿನ ಸರ್ಕಾರ ಸ್ಟಿಂಗ್ ಆಪರೇಷನ್ ನಡೆಸುತ್ತಿದೆ ಎಂದು ಹೊರಟ್ಟಿ ವ್ಯಂಗ್ಯವಾಡಿದರು.

# ಸಿದ್ದರಾಮಯ್ಯ ವಿರುದ್ಧ ಪಕ್ಷದವರಿಂದಲೇ ಸ್ಟಿಂಗ್ ಆಪರೇಷನ್: ಯತೀಂದ್ರ ಸ್ಫೋಟಕ ಹೇಳಿಕೆ



ಬೆಂಗಳೂರು, **ಅ.23:** ತಮ್ಮ ತಂದೆ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಾಂಗ್ರೆಸ್ ಪಕ್ಷದವರೇ ಸ್ಟಿಂಗ್ ಆಪರೇಷನ್ ಮಾಡಿದ್ದಾರೆ ಎಂದು ಪುತ್ರ ಹಾಗೂ ಸಚಿವ ಯತೀಂದ್ರ ಸಿದ್ದರಾಮಯ್ಯ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಸ್ಟಿಂಗ್ ಆಪರೇಷನ್ ವಿವಾದದ ಬಿರುಗಾಳಿ ಎಬ್ಬಿಸಿರುವ ಬೆನ್ನಲ್ಲೇ ಯತೀಂದ್ರ ಹೇಳಿಕೆ ಭಾರಿ ಮಹತ್ವ ಪಡೆದುಕೊಂಡಿದೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ತೇಜೋವಧೆ ಮಾಡಲು ಹಾಗೂ ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ಈ ಸಂಚು ರೂಪಿಸಲಾಗಿದೆ. ಈ ಸ್ಟಿಂಗ್ ಆಪರೇಷನ್‌ನಲ್ಲಿ ಕಾಂಗ್ರೆಸ್ ಪಕ್ಷದವರು ಶಾಮೀಲಾಗಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದು, ಈ ಬಗ್ಗೆ ಸಮಗ್ರ ತನಿಖೆಗೆ ಆಗ್ರಹಿಸಿದ್ದಾರೆ. ಸ್ಟಿಂಗ್ ವಿಡೀಯೋದಲ್ಲಿ ತಮ್ಮ ಪಕ್ಷದವರೇ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಓರ್ವ ಮಾಧ್ಯಮ ಮುಖ್ಯಸ್ಥರು ಕಾಣಿಸಿಕೊಂಡಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಒಬ್ಬ ವ್ಯಕ್ತಿ ಮಾಡಿದ ತಪ್ಪಿಗೆ ಇಡೀ ಪಕ್ಷವನ್ನು ದೂಷಿಸುವುದು ಸರಿಯಲ್ಲ. ರಾಜಕೀಯ ಲಾಭಕ್ಕಾಗಿ ಮತ್ತು ಸಿದ್ದರಾಮಯ್ಯ ಹೆಸರನ್ನು ಕೆಡಿಸಲು ಈ ರೀತಿ ಕೃತ್ಯಕ್ಕೆ ಮುಂದಾಗಿರುವುದು ಸ್ಪಷ್ಟವಾಗಿ ವಿಡೀಯೋದಲ್ಲಿ ಗೋಚರಿಸುತ್ತದೆ ಎಂದಿದ್ದಾರೆ.

ಇಂತಹ ಸುಳ್ಳು ಆರೋಪಗಳಿಂದ ಸಿದ್ದರಾಮಯ್ಯ ತೀವ್ರ ಬೇಸರಗೊಂಡಿದ್ದಾರೆ. 40 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಕಳಂಕಕ್ಕೆ ಗುರಿಯಾಗಿರಲಿಲ್ಲ. ತಮ್ಮ ರಾಜಕೀಯ ಬದುಕಿನ ಅಂತಿಮ ಹಂತದಲ್ಲಿ ಇಂತಹ ಗಂಭೀರ ಆರೋಪಗಳು ಕೇಳಿ ಬಂದಾಗ ಯಾರಿಗಾದರೂ ಬೇಸರವಾಗುವುದು ಸಹಜ ಎಂದಿದ್ದಾರೆ. ಸತ್ಯ ನಮ್ಮ ಪರವಾಗಿದೆ. ತನಿಖೆಯ ಮೂಲಕ ಸತ್ಯ ಹೊರಬಂದು ಅಂತಿಮವಾಗಿ ಸತ್ಯಕ್ಕೆ ಜಯ ಸಿಗಲಿದೆ ಎಂದು ಯತೀಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


Chief reporter : SANDEEP RENU 99728 72151 | Executive Editor : SHARAT JYOTSNA B.R 9886766483 vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಅಕ್ಟೋಬರ್, 24, 2026, ಶನಿವಾರ

## ಒಳಪುಟಗಳಲ್ಲಿ

ಟಿಬೆಟ್‌ನಲ್ಲಿ ಪ್ರಬಲ ಭೂಕಂಪ: ಕನಿಷ್ಠ 16 ಮಂದಿ ಸಾವು, ಧರೆಗುರುಳಿದ ಮನೆಗಳು - ಪು.8

ಪುಲಕೇಶಿನಗರ : ಕಟ್ಟಡದಲ್ಲಿ ಸ್ಫೋಟ ಪ್ರಕರಣ- ಸ್ಫೋಟಕ್ಕೂ ಮುನ್ನ ಭದ್ರತಾ ಸಿಬ್ಬಂದಿಗೆ ಕರೆಮಾಡಿದ ಪಾರ್ಸಲ್ ಕಳುಹಿಸಿದ ವ್ಯಕ್ತಿಗಾಗಿ ಶೋಧ - ಪು.5

## ಪ್ರತಿದಿನ 3 ಸಾವಿರ ಕ್ಯುಸೆಕ್‌ನಂತೆ 15 ದಿನ ತಮಿಳುನಾಡಿಗೆ ನೀರು



■ ಕಾವೇರಿ ನೀರು ನಿಯಂತ್ರಣ ಸಮಿತಿಯಿಂದ ಕರ್ನಾಟಕಕ್ಕೆ ಸೂಚನೆ

**ಬೆಂಗಳೂರು ಅ.23:** ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 3 ಸಾವಿರ ಕ್ಯುಸೆಕ್‌ನಂತೆ ಒಟ್ಟು 3 ಟಿಎಂಸಿ ಅಡಿ ನೀರನ್ನು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯು ಕರ್ನಾಟಕಕ್ಕೆ ಸೂಚನೆ ನೀಡಿದೆ. ಶುಕ್ರವಾರ ನಡೆದ ಸಮಿತಿಯ ಸಭೆಯಲ್ಲಿ ಉಭಯ ರಾಜ್ಯಗಳ ನೀರಿನ ಲಭ್ಯತೆ ಹಾಗೂ ಸ್ಥಿತಗತಿಯ ಕುರಿತು ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ಕರ್ನಾಟಕದ ಪ್ರತಿನಿಧಿಗಳು, "ರಾಜ್ಯದಲ್ಲಿ ಮಳೆ ಕೊರತೆ ಎದುರಾಗಿರುವುದರಿಂದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ತಗ್ಗಿದೆ. ಈಗಾಗಲೇ ರಾಜ್ಯದಿಂದ ಹೆಚ್ಚಿನ ಪ್ರಮಾಣದ ನೀರನ್ನು ಹರಿಸಲಾಗಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಮತ್ತಷ್ಟು ನೀರು ಬಿಡುವುದು ಕಷ್ಟ" ಎಂದು ತಮ್ಮ ಅಳಲು ತೋಡಿಕೊಂಡರು. ಆದರೆ, ಉಭಯ ರಾಜ್ಯಗಳ ವಾದ–ಪ್ರತಿವಾದಗಳನ್ನು ಆಲಿಸಿದ ಸಮಿತಿಯು, ತಮಿಳುನಾಡಿನ ಬೇಡಿಕೆಯಂತೆ ಮುಂದಿನ 15 ದಿನಗಳ ಅವಧಿಗೆ ಪ್ರತಿದಿನ 3 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿ ಆದೇಶ ಹೊರಡಿಸಿದೆ.

# ಪೋಲೆಂಡ್‌ನೊಂದಿಗೆ ದ್ವಿಪಕ್ಷೀಯ ಸಹಕಾರ ವೃದ್ಧಿಗೆ ಕರ್ನಾಟಕ ಉತ್ಸುಕ

## ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಜತೆ ಡಿ.ಕೆ. ಶಿವಕುಮಾರ್ ಚರ್ಚೆ

### ಸುಸ್ಥಿರ ಕೈಗಾರಿಕಾ ಅಭಿವೃದ್ಧಿಗೆ ಪೋಲಿಷ್ ಪರಿಣತಿ ಬಳಕೆ



**ಬೆಂಗಳೂರು, ಅ.23: ಕರ್ನಾಟಕದ ಗ್ಲೋಬಲ್ ಇನ್‌ವೆಸ್ಟರ್ ಮೀಟ್ 2027ರಲ್ಲಿ ಪೋಲೆಂಡ್ ದೇಶವನ್ನು ಪಾಲುದಾರ ರಾಷ್ಟ್ರವಾಗಿ ಭಾಗವಹಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಹ್ವಾನಿಸಿದರು.**

ನಗರದ ಖಾಸಗಿ ಹೋಟೇಲ್‌ನಲ್ಲಿ ಶುಕ್ರವಾರ ನಡೆದ ಭಾರತ–ಪೋಲೆಂಡ್ ವಾಣಿಜ್ಯ ಸಭೆಯಲ್ಲಿ ಮಾತನಾಡಿ, ತಂತ್ರಜ್ಞಾನ, ನಾವೀನ್ಯತೆ ಮತ್ತು ಉದ್ಯಮಶೀಲತೆಯ ಕರ್ನಾಟಕದ ಜಾಗತಿಕ ಕೇಂದ್ರವಾಗಿರುವ ಬೆಂಗಳೂರಿಗೆ ಪೋಲೆಂಡ್ ಪ್ರಧಾನಮಂತ್ರಿ ಡೊನಾಲ್ಡ್ ಟಸ್ಕ್ ಮತ್ತು ಅವರ ನೇತೃತ್ವದ ನಿಯೋಗವನ್ನು ಸ್ವಾಗತಿಸಲು ಸಂತೋಷವಾಗುತ್ತಿದೆ ಎಂದರು.

ಬೆಂಗಳೂರಿನ ತಂತ್ರಜ್ಞಾನ ಪರಿಸರ ವ್ಯವಸ್ಥೆ ಮತ್ತು ಸುಧಾರಿತ ಉತ್ಪಾದನೆ, ಕೃತಕ ಬುದ್ಧಿಮತ್ತೆ ಹಾಗೂ ಹಸಿರು ಇಂಧನದಲ್ಲಿ ಪೋಲೆಂಡಿನ ಪರಿಣತಿಯನ್ನು ಬಳಸಿಕೊಂಡು ಹೂಡಿಕೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ದ್ವಿಪಕ್ಷೀಯ ಸಹಕಾರವನ್ನು ಆಳವಾಗಿಸಲು ರಾಜ್ಯವು ಉತ್ಸುಕವಾಗಿದೆ ಎಂದು ಹೇಳಿದರು.

**ವೈದ್ಯಕೀಯ ಉತ್ಪನ್ನ, ಸುಧಾರಿತ ಉತ್ಪಾದನಾ ವಲಯಗಳಲ್ಲಿ ಅವಕಾಶ:** ವಿಶೇಷವಾಗಿ ವೈದ್ಯಕೀಯ ಉತ್ಪನ್ನಗಳು, ಆರೋಗ್ಯ ರಕ್ಷಣೆ ಮತ್ತು ಸುಧಾರಿತ ಉತ್ಪಾದನಾ ವಲಯಗಳಲ್ಲಿ ಸಾಕಷ್ಟು ಅವಕಾಶಗಳಿವೆ. ಹೊಸ ತಂತ್ರಜ್ಞಾನಗಳನ್ನು ತರುವ, ಸ್ಥಳೀಯ ಉದ್ಯಮಗಳನ್ನು ಬಲಪಡಿಸುವ, ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ರಫ್ತಿಗೆ ಬೆಂಬಲ ನೀಡುವ ಹೂಡಿಕೆಗಳನ್ನು ಆಕರ್ಷಿಸಲು ರಾಜ್ಯವು ಉತ್ಸುಕವಾಗಿದೆ. ಕೃತಕ ಬುದ್ಧಿಮತ್ತೆ, ಗೇಮಿಂಗ್ ಮತ್ತು ಡೀಪ್‌ಟೆಕ್ ನಾವೀನ್ಯತೆಗಳಲ್ಲಿ ಸಹಯೋಗವನ್ನು ಉತ್ತೇಜಿಸಲು ಕಟೋವಿಸ್ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯೊಂದಿಗೆ ಸಹಿ ಮಾಡಲಾದ ಒಪ್ಪಂದ ಪತ್ರವನ್ನು ಉಲ್ಲೇಖಿಸಿದರು. ಇದರಲ್ಲಿ ಪ್ರಸ್ತಾವಿತ 'ಕರ್ನಾಟಕ–ಕಟೋವಿಸ್ ಡಿಜಿಟಲ್ ಮತ್ತು ಗೇಮಿಂಗ್ ಕಾರಿಡಾರ್' ಸಹ ಸೇರಿದೆ. ಈ ಉಪಕ್ರಮವು ಉಭಯ ಕಡೆಯ ಸ್ಟಾರ್ಟ್‌ಅಪ್‌ಗಳು, ತಂತ್ರಜ್ಞಾನ ಕಂಪನಿಗಳು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಸಹಯೋಗ ನೀಡಲು, ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಮತ್ತು ಪರಸ್ಪರ ಮಾರುಕಟ್ಟೆಗಳಿಗೆ ವಿಸ್ತರಿಸಲು ಅವಕಾಶ ಸೃಷ್ಟಿಸುವ ನಿರೀಕ್ಷೆಯಿದೆ. ಈ ಕ್ಷೇತ್ರಗಳಲ್ಲಿ ಬೆಂಗಳೂರಿನ ಅವಕಾಶಗಳನ್ನು ಅನ್ವೇಷಿಸಲು ಪೋಲಿಷ್ ತಂತ್ರಜ್ಞಾನ ಕಂಪನಿಗಳಿಗೆ ಕರೆ ನೀಡಿದರು.

### ವಿದೇಶಿ ಹೂಡಿಕೆ ಸುಗಮ ಪ್ರಕ್ರಿಯೆಗೆ ಪ್ರತ್ಯೇಕ ಇಲಾಖೆ

**ಪೋಲಿಷ್ ಪ್ರಧಾನಮಂತ್ರಿಯವರ ಭೇಟಿಯು ಹೂಡಿಕೆ ಪ್ರಸ್ತಾವನೆಗಳಿಗೆ ದಾರಿ ಮಾಡಿಕೊಡುತ್ತದೆ ಮತ್ತು ನಿಯೋಗದ ಭೇಟಿಯ ನಂತರ ಉಭಯ ಕಡೆಯ ಅಧಿಕಾರಿಗಳು ಮತ್ತು ವ್ಯವಹಾರ ಪ್ರತಿನಿಧಿಗಳು ಇದನ್ನು ಮುಂದುವರಿಸಬಹುದು. ರಾಜ್ಯದಲ್ಲಿ ವಿದೇಶಿ ಹೂಡಿಕೆ ಪ್ರಕ್ರಿಯೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಜಾಗತಿಕ ಹೂಡಿಕೆ ಮತ್ತು ಸಾಗರೋತ್ತರ ವ್ಯವಹಾರಗಳ ಪ್ರತ್ಯೇಕ ಇಲಾಖೆಯನ್ನೇ ಪ್ರಾರಂಭಿಸಿರುವುದಾಗಿ ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.**

**ಸುಸ್ಥಿರ ಕೈಗಾರಿಕಾ ಅಭಿವೃದ್ಧಿಗೆ ಪೋಲಿಷ್ ಪರಿಣತಿ ಬಳಕೆ:** ಕರ್ನಾಟಕದ ಪರಿಸರ ಆದ್ಯತೆಗಳು ಮತ್ತು ಸುಸ್ಥಿರ ಕೈಗಾರಿಕಾ ಅಭಿವೃದ್ಧಿಯನ್ನು ಮುನ್ನಡೆಸಲು ಪೋಲಿಷ್ ಪರಿಣತಿಯನ್ನು ಬಳಸಿಕೊಂಡು ನವೀಕರಿಸಬಹುದಾದ ಇಂಧನ, ತ್ಯಾಜ್ಯದಿಂದ ಇಂಧನ ತಯಾರಿಕೆ, ಕೆಸರು ನಿರ್ವಹಣೆ, ತ್ಯಾಜ್ಯನೀರಿನ ಸಂಸ್ಕರಣೆ ಮತ್ತು ಆವರ್ತಿತ ಆರ್ಥಿಕತೆಯ ಪರಿಹಾರಗಳನ್ನು ಸಹಕಾರಕ್ಕಾಗಿ ಭರವಸೆಯ ಕ್ಷೇತ್ರಗಳಾಗಿವೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಪೋಲೆಂಡ್ ವಿತ್ತ ಸಚಿವ ಆಂಡ್ರೂಸ್ ಡೊಮ್ಯಾನ್ಸ್ಕಿ, ಪೋಲೆಂಡ್ ಸರ್ಕಾರದ ಹಿರಿಯ ಅಧಿಕಾರಿಗಳು, ಕರ್ನಾಟಕದ ಐಟಿ, ಬಿಟಿ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಪೋಲೆಂಡ್‌ನಲ್ಲಿ ಭಾರತದ ರಾಯಭಾರಿ ನೀತಾ ಭೂಷಣ್, ಭಾರತದಲ್ಲಿ ಪೋಲೆಂಡ್ ರಾಯಭಾರಿ ಡಾ. ಪೀಟರ್ ಆಂಟೋನಿ ಸ್ವಿಟಾಲ್ಕಿ, ಸಿಐಐ ಕರ್ನಾಟಕ ಘಟಕದ ಅಧ್ಯಕ್ಷ ಗುರುಪ್ರಸಾದ್ ಮುದ್ಲಾಪುರ ಮತ್ತು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್, ಐಟಿ ಬಿಟಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎನ್.ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.

### ಪೋಲೆಂಡ್-ಭಾರತ ಹೂಡಿಕೆಗೆ ಕರ್ನಾಟಕ ಹೆಬ್ಬಾಗಿಲು: ಡೊನಾಲ್ಡ್ ಟಸ್ಕ್ ಪ್ರಶಂಸೆ

ಪ್ರಧಾನಮಂತ್ರಿ ಡೊನಾಲ್ಡ್ ಟಸ್ಕ್ ಅವರು ಪೋಲೆಂಡ್ ಮತ್ತು ಭಾರತದ ನಡುವಿನ ಹೂಡಿಕೆಗೆ ಕರ್ನಾಟಕವು ಪ್ರಮುಖ ಹೆಬ್ಬಾಗಿಲಾಗಲಿದೆ ಎಂದು ಒತ್ತಿಹೇಳಿದರು. ಅವರು ಏರೋಸ್ಪೇಸ್ (ಬಾಹ್ಯಾಕಾಶ), ರಕ್ಷಣೆ ಮತ್ತು ಸುಧಾರಿತ ಉತ್ಪಾದನಾ ವಲಯಗಳಲ್ಲಿ ಆಸಕ್ತಿ ವ್ಯಕ್ತಪಡಿಸಿದರು ಹಾಗೂ ಹೆಚ್ಚಿನ ಹೂಡಿಕೆಗಳಿಗಾಗಿ ಕರ್ನಾಟಕ ಮತ್ತು ಪೋಲೆಂಡ್ ಈ ನಿರ್ದಿಷ್ಟ ವಲಯಗಳಲ್ಲಿ ಸಹಕರಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕರ್ನಾಟಕದಂತೆಯೇ ಪೋಲೆಂಡ್ ಕೂಡ ಕಿರಿಯ ವಯಸ್ಸಿನ ಕೆಲಸಗಾರರನ್ನು ಹೊಂದಿದ್ದು, ಕರ್ನಾಟಕ ಮತ್ತು ಪೋಲೆಂಡ್ ನಡುವಿನ ಸಹಕಾರವು ಎರಡೂ ಕಡೆಯವರಿಗೆ ಪರಸ್ಪರ ಪ್ರಯೋಜನಕಾರಿಯಾಗಲಿದೆ ಎಂದು ಅವರು ಹೇಳಿದರು.

### ವೇಮಗಲ್ ಬಳಿ 80 ಕೋಟಿ ಹೂಡಿಕೆ

ಕೋಲಾರ ಜಿಲ್ಲೆಯ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಐದು ಎಕರೆ ಪ್ರದೇಶದಲ್ಲಿ TZMO ಗ್ರೂಪ್ ಸುಮಾರು 80 ಕೋಟಿ ಮೊತ್ತದ ಹೂಡಿಕೆಯನ್ನು ಸ್ವಾಗತಿಸಿದ ಅವರು, ಯೋಜನೆಯು ಸುಮಾರು 1,000 ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಭಾರತದಲ್ಲಿ ಇದೇ ಮೊದಲ ಬಾರಿಗೆ 'ಸ್ಮಾರ್ಟ್ ಅಡಲ್ಟ್ ಇನ್ಕಾಂಟಿನೆನ್ಸ್ ಪ್ಯಾಡ್'ಗಳ ತಯಾರಿಕೆಯನ್ನು ಪರಿಚಯಿಸಲಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

# ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಕೊಟ್ಟಿದ್ದೇ ಕಾಂಗ್ರೆಸ್

■ ಇಡೀ ವಿಶ್ವವೇ ಎದುರು ನೋಡುತ್ತಿರುವ ನಾಯಕ ರಾಹುಲ್ ಗಾಂಧಿ: ಸಿಎಂ ಡಿ.ಕೆ. ಶಿವಕುಮಾರ್

ಬೆಂಗಳೂರು, ಅ.23: ಕಾಂಗ್ರೆಸ್ ಪಕ್ಷ ದೇಶಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಕೊಟ್ಟಿರುವುದರಿಂದಲೇ ಇಂದು ಪ್ರಧಾನಮಂತ್ರಿಗಳು ಆ ಸ್ಥಾನದಲ್ಲಿ ಕೂತಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಪೋಲೆಂಡ್ ಪ್ರಧಾನಿ ಭೇಟಿ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಇತಿಹಾಸವಿದೆ. ಕಾಂಗ್ರೆಸ್ ಇಲ್ಲದಿದ್ದರೆ ಈ ದೇಶ ಪ್ರಜಾಪ್ರಭುತ್ವ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಈ ವಿಚಾರ ಪ್ರಧಾನಿಗಳಿಗೂ ಗೊತ್ತು. ರಾಹುಲ್ ಗಾಂಧಿ ಅವರು ಪದೇಪದೇ ವಿದೇಶಕ್ಕೆ ಹೋಗಿ ಬರುತ್ತಿರುವುದರ ಬಗ್ಗೆ ಬಿಜೆಪಿ ಆರೋಪಗಳಿಗೆ ಪ್ರತಿಕ್ರಿಯಿಸಿ, ರಾಹುಲ್ ಗಾಂಧಿ ಅವರು ಪ್ರತಿಪಕ್ಷದ ನಾಯಕರು. ಅನೇಕ ದೇಶಗಳ ನಾಯಕರು, ವಿ.ವಿ.ಗಳು ರಾಹುಲ್ ಗಾಂಧಿಗೆ ಆಮಂತ್ರಣ ನೀಡುತ್ತಾರೆ. ಅವರು ಇಡೀ ವಿಶ್ವ ಎದುರು ನೋಡುತ್ತಿರುವ ನಾಯಕ ಎಂದು ತಿಳಿಸಿದರು.

# ಸ್ವೀಡನ್‌ನ ಎಐ ಮತ್ತು ಗ್ರೀನ್ ಎನರ್ಜಿ ಕ್ಷೇತ್ರ ಪರಿಣತಿ ಬಳಸಿಕೊಳ್ಳುವ ಅಗತ್ಯವಿದೆ




■ ಹೂಡಿಕೆ, ಉದ್ಯಮ ಮತ್ತು ತಂತ್ರಜ್ಞಾನ ಅವಕಾಶಗಳ ಬಗ್ಗೆ ಸ್ವೀಡನ್ ರಾಯಭಾರಿ ಪೆಟ್ರಾ ಮೆನಾಂಡರ್ ಜತೆ ಸಿಎಂ ಚರ್ಚೆ

**ಬೆಂಗಳೂರು, ಅ.23:** ಬೆಂಗಳೂರಿನ ಹೊರತಾಗಿ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಹೂಡಿಕೆ ಮಾಡಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಸ್ವೀಡನ್ ಉದ್ಯಮಿಗಳಿಗೆ ಕರೆ ನೀಡಿದರು. ವಿಧಾನಸೌಧದ ಕಚೇರಿಯಲ್ಲಿ ಭಾರತದಲ್ಲಿ ಸ್ವೀಡನ್ ರಾಯಭಾರಿ ಪೆಟ್ರಾ ಮೆನಾಂಡರ್ ನೇತೃತ್ವದ ನಿಯೋಗದೊಂದಿಗೆ ಹೂಡಿಕೆ, ಉದ್ಯಮ ಮತ್ತು ತಂತ್ರಜ್ಞಾನ ಅವಕಾಶಗಳ ಬಗ್ಗೆ ಶುಕ್ರವಾರ ಚರ್ಚೆ ನಡೆಸಿದರು.

ಬೆಂಗಳೂರಿನ ತಂತ್ರಜ್ಞಾನ ವ್ಯವಸ್ಥೆ (ಇಕೋಸಿಸ್ಟಮ್) ಹಾಗೂ ಸ್ವೀಡನ್‌ನ ಸುಧಾರಿತ ಉತ್ಪಾದನೆ, ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಮತ್ತು ಹಸಿರು ಇಂಧನ (ಗ್ರೀನ್ ಎನರ್ಜಿ) ಕ್ಷೇತ್ರದ ಪರಿಣಿತಿಯನ್ನು ಬಳಸಿಕೊಂಡು ಮುನ್ನಡೆಯುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಏಷ್ಯಾ ಬ್ರೌನ್ ಬೋವೇರಿ ಸಂಸ್ಥೆಯು ಕರ್ನಾಟಕದಲ್ಲಿ ಮಾಡಲು ಉದ್ದೇಶಿಸಿರುವ ಹೂಡಿಕೆಯನ್ನು ಸ್ವಾಗತಿಸಿದ ಸಿಎಂ, ಕರ್ನಾಟಕದಲ್ಲಿ ಸ್ವೀಡಿಷ್ ಉದ್ಯಮಗಳ ಪ್ರಬಲ ಅಸ್ತಿತ್ವವಿದೆ. ವೋಲ್ವೋ ಗ್ರೂಪ್ ಬೆಂಗಳೂರಿನ ಬಳಿ ಉತ್ಪಾದನಾ ಘಟಕಗಳನ್ನು ಹೊಂದಿದ್ದು, ನಗರದಲ್ಲಿ ಪ್ರಮುಖ ತಂತ್ರಜ್ಞಾನ, ಉತ್ಪನ್ನ ಅಭಿವೃದ್ಧಿ ಮತ್ತು ನಾವೀನ್ಯತೆ ಕಾರ್ಯಾಚರಣೆಗಳನ್ನು ನಡೆಸುತ್ತಿದೆ ಎಂದರು. ಆಸ್ಟ್ರಾಜೆನೆಕಾ, ಆಟೋಲಿವ್, ಎರಿಕ್ಸನ್, ಹಿಟಾಚಿ ಎನರ್ಜಿ, ಐಕಿಯಾ, ಸೆಕ್ಯುರಿಟಾಸ್, ಟ್ರೆಲ್ಲೆಬೋರ್ಗ್ ಮತ್ತು ವಿಇ ಕಮರ್ಷಿಯಲ್ ವೆಹಿಕಲ್ಸ್‌ನಂತಹ ಕಂಪನಿಗಳು, ಜೀವ ವಿಜ್ಞಾನ, ವಾಹನ ಸುರಕ್ಷತೆ, ದೂರಸಂಪರ್ಕ, ಇಂಧನ ತಂತ್ರಜ್ಞಾನ, ಚಿಲ್ಲರೆ ಮಾರಾಟ ಮತ್ತು ಕೈಗಾರಿಕಾ ಕಾರ್ಯಾಚರಣೆ ವಲಯಗಳಲ್ಲಿ ವಿಸ್ತರಿಸಿವೆ. ಕರ್ನಾಟಕದ ನೂತನ ವೈಮಾಂತರಿಕ್ಷ ಮತ್ತು ರಕ್ಷಣೆ (ಏರೋಸ್ಪೇಸ್ ಮತ್ತು ಡಿಫೆನ್ಸ್) ನೀತಿಯ ಬಗ್ಗೆ ಮಾಹಿತಿ ನೀಡಿದರು. ಜತೆಗೆ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಬಾಂಧವ್ಯವನ್ನು ಬಲಪಡಿಸಲು ವೇದಿಕೆಯನ್ನು ಒದಗಿಸುವ 'ಕರ್ನಾಟಕ ಜಾಗತಿಕ ಹೂಡಿಕೆದಾರರ ಸಮಾವೇಶ 2027'ರಲ್ಲಿ ಪಾಲುದಾರ ದೇಶವಾಗಿ ಭಾಗವಹಿಸಿ ಎಂದು ಆಹ್ವಾನ ನೀಡಿದರು.

ಗೃಹ, ಐಟಿ/ಬಿಟಿ ಹಾಗೂ ಇ–ಆಡಳಿತ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ತಂತ್ರಜ್ಞಾನ, ನಾವೀನ್ಯತೆ, ಸ್ಟಾರ್ಟ್‌ಅಪ್‌ಗಳು ಮತ್ತು ಉದಯೋನ್ಮುಖ ಕೈಗಾರಿಕೆಗಳಿಗೆ ಕರ್ನಾಟಕವನ್ನು ಪ್ರಮುಖ ತಾಣವಾಗಿ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಸ್ವೀಡಿಷ್ ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಹೂಡಿಕೆಗಳನ್ನು ವಿಸ್ತರಿಸಲು ಮತ್ತು ದ್ವಿಪಕ್ಷೀಯ ಆರ್ಥಿಕ ಸಹಕಾರವನ್ನು ಬಲಪಡಿಸಲು ಇರುವ ಅವಕಾಶಗಳನ್ನು ಒತ್ತಿ ಹೇಳಿದರು.

### ರಾಜ್ಯದಲ್ಲಿರುವ ಶೇ.61 ಸ್ವೀಡಿಷ್ ಸಂಸ್ಥೆಗಳು ಉದ್ಯಮ ವಿಸ್ತರಿಸಲು ಉತ್ಸುಕ

**ಭಾರತದಲ್ಲಿನ ಸ್ವೀಡನ್‌ನ ಒಟ್ಟು ಹೂಡಿಕೆಯಲ್ಲಿ ಶೇ.25ರಷ್ಟು ಕರ್ನಾಟಕದಲ್ಲಿದ್ದು, ಪ್ರಸ್ತುತ ಇರುವ ಸ್ವೀಡಿಷ್ ಕಂಪನಿಗಳ ಪೈಕಿ ಶೇ.61 ರಷ್ಟು ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಉದ್ಯಮವನ್ನು ವಿಸ್ತರಿಸಲು ಬಯಸಿವೆ. ಹೆಚ್ಚಿನ ಹೂಡಿಕೆಗಳಿಗಾಗಿ ಕರ್ನಾಟಕ ಮತ್ತು ಸ್ವೀಡನ್ ವಿವಿಧ ವಲಯಗಳಲ್ಲಿ ಸಹಕರಿಸಬಹುದು ಎಂದು ಪೆಟ್ರಾ ಮೆನಾಂಡರ್ ತಿಳಿಸಿದರು.**

# ರಾಷ್ಟ್ರ ಕಂಡ ಅಪ್ರತಿಮ ಮಹಿಳಾ ಸೇನಾನಿ ಕಿತ್ತೂರು ರಾಣಿ ಚೆನ್ನಮ್ಮ

## ಕೇಂದ್ರ ಸಚಿವ ವಿ. ಸೋಮಣ್ಣ ಬಣ್ಣನೆ: ಸಂಸತ್ ಆವರಣದ ಪ್ರೇರಣಾ ಸ್ಥಳದಲ್ಲಿ ರಾಣಿ ಚೆನ್ನಮ್ಮ ಜಯಂತಿ, 202ನೇ ವಿಜಯೋತ್ಸವ



**ನವದೆಹಲಿ, ಅ.23:** ಪ್ರತಿವರ್ಷದಂತೆ ನವದೆಹಲಿಯ ಸಂಸತ್ ಆವರಣದಲ್ಲಿನ ಪ್ರೇರಣಾ ಸ್ಥಳದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನವರ ಜನ್ಮ ಜಯಂತಿ ಮತ್ತು 202ನೇ ವಿಜಯೋತ್ಸವವನ್ನು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ಹಾಗೂ ತುಮಕೂರು ಸಂಸದ ವಿ.ಸೋಮಣ್ಣ ನೇತೃತ್ವದಲ್ಲಿ ಶುಕ್ರವಾರ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವ ವಿ. ಸೋಮಣ್ಣ ಅವರು, "ರಾಷ್ಟ್ರ ಕಂಡ ಅಪ್ರತಿಮ ಮಹಿಳಾ ಸೇನಾನಿ, ಕಿತ್ತೂರು ಮಹಾ ಸಂಸ್ಥಾನದ ವೀರವನಿತೆ ರಾಣಿ ಚೆನ್ನಮ್ಮನವರ ಜನ್ಮದಿನೋತ್ಸವ ಹಾಗೂ ಬ್ರಿಟಿಷರ ವಿರುದ್ಧದ ಅವರ 202ನೇ ವರ್ಷದ ವಿಜಯೋತ್ಸವದ ಸಂಭ್ರಮದಲ್ಲಿ ದೇಶದ ಜನತೆಗೆ ಹೃತ್ಪೂರ್ವಕ ಶುಭಾಶಯಗಳು" ಎಂದು ಕೋರಿದರು.

ಕಿತ್ತೂರು ರಾಣಿ ಚೆನ್ನಮ್ಮ ಕೇವಲ ಯುದ್ಧ ಮಾಡಿದ ರಾಣಿಯಲ್ಲ, ಅವರು ಒಂದು ಸಾಮ್ರಾಜ್ಯಶಾಹಿ ಶಕ್ತಿಗೆ ಸವಾಲೆಸೆದು, ಪ್ರತಿರೋಧದ ಅಮರ ಸಂಕೇತವಾಗಿ ಇತಿಹಾಸದಲ್ಲಿ ಉಳಿದ ವೀರ ಮಹಿಳೆ. ಇಂತಹ ವೀರ ಮಹಿಳೆಯ ಸಾಧನೆಯನ್ನು ಸಂಭ್ರಮಿಸುವ ಅವಕಾಶ ನಮಗೆ ಸಿಕ್ಕಿರುವುದು ಅತ್ಯಂತ ಸಂತೋಷದ ಸಂಗತಿ" ಎಂದು ಸಚಿವರು ನುಡಿದರು.

"ಭಾರತೀಯ ಸಂಸತ್ತಿನ ಈ ಪವಿತ್ರ ಸ್ಥಳದಲ್ಲಿ ವೀರವನಿತೆ ರಾಣಿ ಚೆನ್ನಮ್ಮನವರ ಶೌರ್ಯ, ಧೈರ್ಯ, ಕಿಚ್ಚು ಇಂದು ದೇಶ ಕಾಯುವ ವೀರರಿಗೆ ಸ್ಫೂರ್ತಿ. ನಾಡು–ನುಡಿ ಅಭಿಮಾನವುಳ್ಳ ನಮ್ಮ ನಿಮ್ಮೆಲ್ಲರಿಗೂ ಇದು ಕೀರ್ತಿ. ಪ್ರತಿವರ್ಷವೂ ನಾವು ನೀವೆಲ್ಲರೂ ಇಲ್ಲಿ ಸೇರೋಣ, ಇಂತಹ ಮಹನೀಯರನ್ನು ನೆನೆಯೋಣ" ಎಂದು ಕನ್ನಡಿಗರಲ್ಲಿ ಮನವಿ ಮಾಡಿದರು.

ರಾಣಿ ಚೆನ್ನಮ್ಮನ ಪ್ರತಿಮೆಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹಾಗೂ ಕೇಂದ್ರ ಜಲಶಕ್ತಿ ಸಚಿವ ಸಿ. ಆರ್. ಪಾಟೀಲ್ ಅವರು ಪುಷ್ಪನಮನ ಸಲ್ಲಿಸಿದರು.

ಸಂಸದ ಪಿ.ಸಿ. ಮೋಹನ್, ಡಾ.ಸುಧಾಕರ್, ಮಾಜಿ ಸಚಿವ ಮುರುಗೇಶ್ ನಿರಾಣಿ, ಬಸನಗೌಡ ಪಾಟೀಲ್ ಯತ್ನಾಳ್, ಕರ್ನಾಟಕ ರಾಜ್ಯದ ಮಾಜಿ ನವದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ್, ಕೂಡಲಸಂಗಮದ ಪೂಜ್ಯಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ, ಶಂಕರಾನಂದ ಸ್ವಾಮೀಜಿ, ಸಿದ್ಧಾರೂಢರ ಮಠ, ಆಳೂರು, ಬೀದರ್, ಆತ್ಮಾರಾಮ ಸ್ವಾಮೀಜಿ, ಗುರುದೇವ ಆಶ್ರಮ, ಕಕ್ಕಮರಿ, ವಿನಾಯಕ ಸ್ವಾಮೀಜಿ, ಸಿದ್ಧಾರೂಢ ಮಠ, ಚಳಕಾಪುರ ಹಾಗೂ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ಕನ್ನಡಿಗರು ಮತ್ತು ದೆಹಲಿಯ ಅಪಾರ ಸಂಖ್ಯೆಯ ಕನ್ನಡಿಗರು ಹಾಜರಿದ್ದರು.

### ಕಾರ್ಯಕ್ರಮಕ್ಕೆ ಸಹಕರಿಸಿದವರಿಗೆ ಧನ್ಯವಾದ

**ಪ್ರತಿವರ್ಷ ಈ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟು, ನಮಗೆಲ್ಲರಿಗೂ ಪ್ರೇರಣಾದಾಯಕ ಶಕ್ತಿಯಾಗಿರುವ ಪ್ರಧಾನಿ ನರೇಂದ್ರ ಮೋದಿ, ಕಾರ್ಯಕ್ರಮಕ್ಕೆ ಅನುಮತಿ ನೀಡಿ ಸಹಕರಿಸುತ್ತಿರುವ ಹೆಮ್ಮೆಯ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ, ಲೋಕಸಭೆ ಮತ್ತು ರೈಲ್ವೆ ಸಚಿವಾಲಯದ ಅಧಿಕಾರಿಗಳಿಗೆ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೂ ಸಹ ಅಭಿನಂದನೆ ಸಲ್ಲಿಸಿದರು. ಸಂಸತ್ತಿನ ಪ್ರೇರಣಾ ಸ್ಥಳದಲ್ಲಿ ಪ್ರತಿವರ್ಷ ಇಂತಹ ಕಾರ್ಯಕ್ರಮ ಆಯೋಜಿಸುತ್ತಿರುವ ವಿ. ಸೋಮಣ್ಣ ಅವರ ಕಾರ್ಯವೈಖರಿ ಬಗ್ಗೆ ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ ಅತ್ಯಂತ ಹರ್ಷ ವ್ಯಕ್ತಪಡಿಸಿದರು.**

ಇನ್ನಷ್ಟು ಚಿತ್ರ ಸುದ್ದಿಗಳು ಪುಟ 5ರಲ್ಲಿ

# ಮತ್ತೆ ಚುನಾವಣಾ ಆಯೋಗದ ಕಚೇರಿಗೆ ಮುತ್ತಿಗೆ ಯತ್ನ: ವಿವಿಧ ಸಂಘಟನೆಗಳಿಂದ ಪ್ರತಿಭಟನೆ

## ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹ




ನವದೆಹಲಿ, ಅ.23: ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ವಿರೋಧಿಸಿ ಹಾಗೂ ಉದ್ದೇಶಪೂರ್ವಕವಾಗಿ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗುತ್ತಿದೆ ಎಂದು ಆರೋಪಿಸಿ, ಪ್ರತಿಭಟನಾಕಾರರು ಶುಕ್ರವಾರ ನವದೆಹಲಿಯ ಚುನಾವಣಾ ಆಯೋಗದ ಕೇಂದ್ರ ಕಚೇರಿಯತ್ತ ಬೃಹತ್ ಮೆರವಣಿಗೆ ನಡೆಸಿದರು.

ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರ ವಿರುದ್ಧ ಧಿಕ್ಕಾರ ಕೂಗಿದ ಜನಸ್ತೋಮ, ಕೂಡಲೇ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿತು.

ಪೀಪಲ್ಸ್ ಅಗೇನಸ್ಟ್ ಎಸ್‌ಐಆರ್ ಎಂಬ ದೆಹಲಿ ಸಮನ್ವಯ ಸಮಿತಿಯು ಕರೆ ನೀಡಿದ್ದ ಈ ಬೃಹತ್ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು, ಯುವಜನರು, ರೈತರು ಮತ್ತು ಹೋರಾಟಗಾರರು ರಾಷ್ಟ್ರಧ್ವಜ ಹಾಗೂ ಬ್ಯಾನರ್‌ಗಳನ್ನು ಹಿಡಿದು ಪಾಲ್ಗೊಂಡಿದ್ದರು. ಕ್ರಾಂತಿಕಾರಿ ಯುವ ಸಂಘಟನೆ (ಕೆವೈಎಸ್) ಮತ್ತು ಭಾರತೀಯ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್‌ಐ) ಬೆಂಬಲದೊಂದಿಗೆ, ದೆಹಲಿ, ಹರಿಯಾಣ ಹಾಗೂ ಪಶ್ಚಿಮ ಉತ್ತರ ಪ್ರದೇಶದ ನೂರಾರು ಕಾರ್ಯಕರ್ತರು ಈ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಗ್ಯಾನೇಶ್ ಕುಮಾರ್ ರಾಜೀನಾಮೆ ನೀಡಿ, ಎಸ್‌ಐಆರ್ ಪ್ರಕ್ರಿಯೆ ತಕ್ಷಣ ನಿಲ್ಲಿಸಿ ಮತ್ತು ಮತ ಕಳ್ಳತನವನ್ನು ಸಹಿಸುವುದಿಲ್ಲ ಎಂಬ ಘೋಷಣೆಗಳು ಮೆರವಣಿಗೆಯುದ್ದಕ್ಕೂ ಮೊಳಗಿದವು. ಸಿಪಿಐ(ಎಂ) ಹಿರಿಯ ನಾಯಕಿ ಬೃಂದಾ ಕಾರಟ್, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಮತ್ತು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳ ಪ್ರಮುಖರು ಈ ಹೋರಾಟಕ್ಕೆ ಜೊತೆ ನೀಡಿದರು.

ಗೋಲ್‌ಡಾಕ್ ಖಾನಾ ಬಳಿಯಿಂದ ಆರಂಭವಾದ ಮೆರವಣಿಗೆ ಆಯೋಗದ ಕಚೇರಿಯತ್ತ ಸಾಗುತ್ತಿದ್ದಂತೆ, ಪೊಲೀಸರು ಪ್ರತಿಭಟನಾಕಾರರನ್ನು ಮಾರ್ಗಮಧ್ಯೆಯೇ ತಡೆದರು. ಈ ವೇಳೆ ರಸ್ತೆಯಲ್ಲೇ ಕುಳಿತ ಪ್ರತಿಭಟನಾಕಾರರು, ಪೂರ್ವನಿಯೋಜಿತವಾಗಿ ಜನತಾ ಸಂಸತ್ ನಡೆಸಿದರು. ಜಂತರ್ ಮಂತರ್ ಅನ್ನು ಪ್ರತಿಭಟನಾ ತಾಣವಾಗಿ ರದ್ದುಗೊಳಿಸಿರಬಹುದು, ಆದರೆ ಪ್ರಜಾಪ್ರಭುತ್ವ ಉಳಿಸಲು ದೇಶದ ಪ್ರತಿಯೊಂದು ಬೀದಿಯೂ ಜಂತರ್ ಮಂತರ್ ಆಗಲಿದೆ ಎಂದು ಎಐಎಸ್‌ಎ ಸಂಘಟನೆ ಎಚ್ಚರಿಕೆ ನೀಡಿದೆ.

ಪ್ರತಿಭಟನೆ ಹಿನ್ನೆಲೆಯಲ್ಲಿ ನವದೆಹಲಿಯಾದ್ಯಂತ ಬಿಗಿ ಭದ್ರತೆ ಕೈಗೊಳ್ಳಲಾಗಿತ್ತು. ಮಧ್ಯಾಹ್ನ 1 ರಿಂದ ಸಂಜೆ 5 ರವರೆಗೆ ಸಂಚಾರ ಮಾರ್ಗಗಳಲ್ಲಿ ಬದಲಾವಣೆ ಮಾಡಿದ್ದರಿಂದ, ಬಾಂಗ್ಲಾ ಸಾಹಿಬ್ ಗುರುದ್ವಾರ, ಕನ್ನಾಟ್ ಪ್ಲೇಸ್, ಸಂಸತ್ ಮಾರ್ಗ ಹಾಗೂ ಜಂತರ್ ಮಂತರ್ ಸುತ್ತಮುತ್ತ ಭಾರಿ ವಾಹನ ದಟ್ಟಣೆ ಉಂಟಾಗಿತ್ತು.

ಶಾಂತಿಯುತವಾಗಿ ನಡೆದ ಈ ಮೆರವಣಿಗೆಯನ್ನು, ಅಂತಿಮವಾಗಿ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ಮತ್ತು ರಾಷ್ಟ್ರಗೀತೆ ಹಾಡುವ ಮೂಲಕ ಮುಕ್ತಾಯಗೊಳಿಸಲಾಯಿತು ಎಂದು ಸಂಘಟಕರು ತಿಳಿಸಿದ್ದಾರೆ.

### 18 ರಾಜ್ಯಗಳ 88 ನಗರಗಳಲ್ಲಿ ಪ್ರತಿಭಟನೆ

**ಈ ಹೋರಾಟ ಕೇವಲ ದೆಹಲಿಗೆ ಮಾತ್ರ ಸೀಮಿತವಾಗಿಲ್ಲ. ಪೀಪಲ್ಸ್ ಅಗೇನಸ್ಟ್ ಎಸ್‌ಐಆರ್ ಸಮಿತಿಯು ಬಿಡುಗಡೆ ಮಾಡಿರುವ ಮಾಹಿತಿಯಂತೆ, ದೇಶದ 18 ರಾಜ್ಯಗಳ ಒಟ್ಟು 88 ನಗರಗಳಲ್ಲಿ 145 ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆಗಳನ್ನು ಆಯೋಜಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ವಿರುದ್ಧದ ಈ ಅಭಿಯಾನವು ನವೆಂಬರ್ 1ರವರೆಗೆ ಮುಂದುವರಿಯಲಿದ್ದು, ಸಮಾಜದ ಎಲ್ಲಾ ವರ್ಗದ ಜನರು ರಾಷ್ಟ್ರಧ್ವಜದೊಂದಿಗೆ ಈ ಹೋರಾಟದಲ್ಲಿ ಕೈಜೋಡಿಸುವಂತೆ ಸಂಘಟಕರು ಕರೆ ನೀಡಿದ್ದಾರೆ.**

# ಚೀನಾ ವಿಚಾರದಲ್ಲಿ ಮೋದಿ ಮೌನ: ಕಾಂಗ್ರೆಸ್ ವಾಗ್ದಾಳಿ

**ನವದೆಹಲಿ, ಅ. 23:** ಅರುಣಾಚಲ ಪ್ರದೇಶದ ಗಡಿಯಲ್ಲಿ ಚೀನಾ ಸೇನೆಯೊಂದಿಗೆ ಮುಖಾಮುಖಿ ಸಂಘರ್ಷ ಮುಂದುವರಿದಿದೆ ಎಂದು ಇಂಡೋ-ಟಿಬೆಟ್ ಗಡಿ ಪೊಲೀಸ್ (ಐಟಿಬಿಪಿ) ಮಹಾನಿರ್ದೇಶಕರು ಅಧಿಕೃತವಾಗಿ ದೃಢಪಡಿಸಿರುವ ಬೆನ್ನಲ್ಲೇ, ಗಡಿಯ ಯಥಾಸ್ಥಿತಿ ಮತ್ತು ಚೀನಾದೊಂದಿಗೆ ಹೆಚ್ಚುತ್ತಿರುವ ದಾಖಲೆಯ ವ್ಯಾಪಾರ ಕೊರತೆಯನ್ನು ಮುನ್ನೆಲೆಗೆ ತಂದು ಕಾಂಗ್ರೆಸ್ ಹಿರಿಯ ನಾಯಕ ಜೈರಾಮ್ ರಮೇಶ್ ಅವರು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಈ ಕುರಿತ ಮೌನವನ್ನು ಅವರು ಕಟುವಾಗಿ ಪ್ರಶ್ನಿಸಿದ್ದಾರೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ, ಗಡಿಯ ಯಥಾಸ್ಥಿತಿ ಮತ್ತು ಆರ್ಥಿಕ ಅವಲಂಬನೆಯ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೌನವನ್ನು ಕಟುವಾಗಿ ಟೀಕಿಸಿದ್ದಾರೆ. ಚೀನಾ ವಿಚಾರದಲ್ಲಿ ಸರ್ಕಾರದ ನಿಲುವು, ಗಡಿ ಭದ್ರತೆ ಮತ್ತು ಆರ್ಥಿಕ ಅವಲಂಬನೆ ಕುರಿತು ಪ್ರಶ್ನಿಸಿರುವ ಅವರು, ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ದೇಶಕ್ಕೆ ಸ್ಪಷ್ಟ ಉತ್ತರ ನೀಡಬೇಕೆಂದು ಎಂದು ಆಗ್ರಹಿಸಿದ್ದಾರೆ.

ಅರುಣಾಚಲ ಪ್ರದೇಶದ ಗಡಿಯಲ್ಲಿ ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ



(ಪಿಎಲ್ಎ) ಜೊತೆಗಿನ ಸಂಘರ್ಷ ಮುಂದುವರಿದಿದೆ ಎಂದು ಐಟಿಬಿಪಿ ಮಹಾನಿರ್ದೇಶಕ ಶತ್ರುಜೀತ್ ಕಪೂರ್ ಸ್ಪಷ್ಟಪಡಿಸಿದ್ದಾರೆ. ಈ ವರ್ಷದ ಜುಲೈನಿಂದಲೇ ಈ ಮುಖಾಮುಖಿಗಳು ನಡೆಯುತ್ತಿದ್ದು, ತಕಾಸಿಂಗ್ ಪ್ರದೇಶದ ಎಲ್ಎಸಿ ಬಳಿ ಭಾರತೀಯ ಪಡೆಗಳಿಗೆ ಪ್ರಮುಖ ಗಸ್ತು ತಿರುಗುವ ಸ್ಥಳಗಳಿಗೆ ಪ್ರವೇಶ ನಿರಾಕರಿಸಲಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಇದು ಅತ್ಯಂತ ಮಹತ್ವದ ಅಧಿಕೃತ ದೃಢೀಕರಣವಾಗಿದೆ. ನವದೆಹಲಿಯಲ್ಲಿ ಚೀನಾ ಅಧ್ಯಕ್ಷ ಷಿ ಜಿನ್ಪಿಂಗ್ ಭಾಗವಹಿಸಿದ್ದ ಬ್ರಿಕ್ಸ್ ಶೃಂಗಸಭೆ ಸಂದರ್ಭದಲ್ಲೂ ಈ ಮಿಲಿಟರಿ ಘರ್ಷಣೆಗಳು ಮುಂದುವರಿದಿದ್ದವು ಎಂಬುದು ಗಮನಾರ್ಹ. ಆದಾಗ್ಯೂ, ಈ ಸಂಘರ್ಷದ ವೇಳೆ ನೂತನವಾಗಿ ರಚಿಸಲಾದ ಮತ್ತು ಉನ್ನತ ಪರ್ವತ ಯುದ್ಧಗಳಲ್ಲಿ ವಿಶೇಷ ನೈಪುಣ್ಯ ಹೊಂದಿರುವ ಶೌರ್ಯ ಕಮಾಂಡೋಗಳು ಅತ್ಯಂತ ಅಸಾಧಾರಣ ಹಾಗೂ ಮಾದರಿ ಕಾರ್ಯಕ್ಷಮತೆಯನ್ನು ತೋರಿದ್ದಾರೆ ಎಂದು ಡಿಜಿ ಶತ್ರುಜೀತ್ ಕಪೂರ್ ಪ್ರಶಂಸಿಸಿದ್ದಾರೆ. ಚೀನಾವೇ ಅತ್ಯಂತ ಕಷ್ಟಕರವಾದ ಮುಂಭಾಗದ ಗಡಿಯಾಗಿದ್ದು, ಗಾಲ್ವಾನ್ ಮಾದರಿಯ ಪರಿಸ್ಥಿತಿಗಳನ್ನು ಸಮರ್ಥವಾಗಿ ಎದುರಿಸಲು ಎಲ್ಲಾ ಗಡಿ ಘಟಕಗಳಲ್ಲಿ ಡ್ರೋನ್ ಪ್ಲೆಟೂನ್ ಗಳನ್ನು ಸಿದ್ಧಪಡಿಸಲಾಗಿದೆ ಹಾಗೂ ಭೂಗತ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಮೋದಿ ಮತ್ತು ಅವರ ಆಡಳಿತವು ಚೀನಾ ವಿಷಯದಲ್ಲಿ ಸಂಪೂರ್ಣ ಕಿವುಡು ಮೌನ ವಹಿಸಿದೆ ಎಂದು ಅವರು ಟೀಕಿಸಿದ್ದಾರೆ. ಶಾಂತಿ ಕಾಪಾಡುವ ಉದ್ದೇಶದಿಂದ ಸೆಪ್ಟೆಂಬರ್ನಲ್ಲಿ ನಡೆದ ಕಾರ್ಪ್ಸ್ ಕಮಾಂಡರ್ ಮಟ್ಟದ ಉನ್ನತ ಸಭೆಗಳ ಫಲಿತಾಂಶವೇನು ಎಂದು ಪ್ರಶ್ನಿಸಿರುವ ಅವರು, ಚೀನಾ ನಮ್ಮ ಅರುಣಾಚಲದ ಪಟ್ಟಣಗಳಿಗೆ ನಿರಂತರವಾಗಿ ಮರುನಾಮಕರಣ ಮಾಡುತ್ತಿರುವುದಲ್ಲದೆ, 60,000 ಮೆಗಾವ್ಯಾಟ್ ಸಾಮರ್ಥ್ಯದ ಬೃಹತ್ ಅಣೆಕಟ್ಟು ನಿರ್ಮಿಸುತ್ತಿರುವುದು ಭಾರತದ ಪರಿಸರ ಸಮತೋಲನ ಮತ್ತು ಜಲಸುರಕ್ಷತೆಗೆ ಭಾರಿ ಗಂಡಾಂತರ ತಂದೊಡ್ಡಿದೆ ಎಂದು ಎಚ್ಚರಿಸಿದ್ದಾರೆ.

ಆರ್ಥಿಕ ರಂಗದಲ್ಲೂ ಚೀನಾದ ಮೇಲಿನ ಅವಲಂಬನೆ ಹೆಚ್ಚುತ್ತಿರುವುದನ್ನು ಪ್ರಸ್ತಾಪಿಸಿರುವ ಅವರು, 2025?26ನೇ ಹಣಕಾಸು ವರ್ಷದಲ್ಲಿ ಚೀನಾದೊಂದಿಗಿನ ಭಾರತದ ವ್ಯಾಪಾರ ಕೊರತೆಯು ಬರೋಬ್ಬರಿ 112 ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ (ಹಿಂದಿನ ವರ್ಷ ಇದು 99 ಶತಕೋಟಿ ಡಾಲರ್ ಇತ್ತು). ಚೀನಾದಿಂದ ಹೆಚ್ಚುತ್ತಿರುವ ಸಗಟು ಆಮದುಗಳು ದೇಶದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಸರ್ಕಾರದ ಮೇಕ್ ಇನ್ ಇಂಡಿಯಾ ಅಭಿಯಾನವು ಪ್ರಾಯೋಗಿಕವಾಗಿ ಚೀನಾದಿಂದ ಆಮದು ಎಂಬ ಸ್ಥಿತಿಗೆ ತಲುಪಿದೆ ಎಂದು ಅವರು ವ್ಯಂಗ್ಯವಾಡಿದ್ದಾರೆ. ಇದು ದೇಶದ ಆರ್ಥಿಕ ಭದ್ರತೆಗೂ ಮಾರಕವಾಗಿದೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ಜೊತೆಗೆ, 2020ರ ಗಲ್ವಾನ್ ಸಂಘರ್ಷದ ಬಳಿಕ ಪ್ರಧಾನಿ ಮೋದಿ ನೀಡಿದ್ದ ಹೇಳಿಕೆ, ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಕುಂದ್ ನರವಣೆ ಅವರ ಒಳನುಸುಳುವಿಕೆ ಕುರಿತ ಹಿಂದಿನ ಇಕ್ಕಟ್ಟಿನ ಸೂಚನೆಗಳ ವಿಚಾರ ಹಾಗೂ ಆಪರೇಷನ್ ಸಿಂಧೂರ್ ಸಂದರ್ಭದಲ್ಲಿ ಸೇನಾಧಿಕಾರಿಗಳ ಹೇಳಿಕೆಗಳ ವಿವಾದವನ್ನು ಮುನ್ನೆಲೆಗೆ ತಂದಿರುವ ಜೈರಾಮ್ ರಮೇಶ್, ರಾಷ್ಟ್ರೀಯ ಭದ್ರತೆ ಮತ್ತು ಗಡಿ ನಿಯಂತ್ರಣದ ಪ್ರಶ್ನೆ ಬಂದಾಗ ಕೇಂದ್ರ ಸರ್ಕಾರವು ಮೌನ ಮುರಿದು ದೇಶಕ್ಕೆ ಸ್ಪಷ್ಟ ಉತ್ತರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

# ಎನ್‌ಡಿಎಗೆ ಮರಳುವ ಸುಳಿವು ನೀಡಿದ ಬಾದಲ್

**ಚಂಡೀಗಢ, ಅ. 23:** ಪಂಜಾಬ್ ರಾಜಕಾರಣದಲ್ಲಿ ಮತ್ತೊಮ್ಮೆ ದೊಡ್ಡಮಟ್ಟದ ರಾಜಕೀಯ ಧ್ರುವೀಕರಣದ ಮುನ್ಸೂಚನೆ ಸಿಕ್ಕಿದ್ದು, ಶಿರೋಮಣಿ ಅಕಾಲಿ ದಳದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಅವರು ಶುಕ್ರವಾರ ನೀಡಿರುವ ಹೇಳಿಕೆಯ ಪ್ರಕಾರ, ಮುಂಬರುವ ಪಂಜಾಬ್ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ತಮ್ಮ ಪಕ್ಷವು ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟಕ್ಕೆ ಮರಳಿ ಸೇರುವ ಸಾಧ್ಯತೆಯಿದೆ. ಪಂಜಾಬ್ ರಾಜ್ಯದ ಪ್ರಮುಖ ಪ್ರಾದೇಶಿಕ ಪಕ್ಷವಾಗಿರುವ ಅಕಾಲಿ ದಳದ ಈ ನಿಲುವು ರಾಜ್ಯ ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ಗ್ರಾಸವಾಗಿದೆ.

ಪಂಜಾಬ್‌ನ ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ ಅವರನ್ನು ಭೇಟಿಮಾಡಿ ಮಾತುಕತೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಸುಖಬೀರ್ ಸಿಂಗ್ ಬಾದಲ್, ಆಡಳಿತರೂಢ ಆಮ್ ಆದ್ಮಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಈ ಎರಡೂ ಪಕ್ಷಗಳೇ ರಾಜ್ಯದಲ್ಲಿ ತಮ್ಮ ಪ್ರಮುಖ ರಾಜಕೀಯ ವಿರೋಧಿಗಳು ಎಂದು ಕರೆದರು. ವಿಶೇಷವಾಗಿ, ಬಿಜೆಪಿ ಹೆಸರನ್ನು ನೇರವಾಗಿ ಪ್ರಸ್ತಾಪಿಸದಿದ್ದರೂ ಸಹ, ಪಂಜಾಬ್ ರಾಜ್ಯದ ಒಳಿತಿಗಾಗಿ ಮತ್ತು ಅಭಿವೃದ್ಧಿಗಾಗಿ ಸಮಾನ ಮನಸ್ಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ತಮ್ಮ ಪಕ್ಷವು ಸಂಪೂರ್ಣವಾಗಿ ಸಿದ್ಧವಿದೆ ಎಂದು ಬಾದಲ್ ತಿಳಿಸಿದರು. ಕಳೆದ ಕೆಲವು ತಿಂಗಳುಗಳಿಂದ ಅಕಾಲಿ ದಳವು ಎನ್‌ಡಿಎ ಮೈತ್ರಿಕೂಟಕ್ಕೆ ಮರಳಲಿದೆ ಎಂಬ ಗುಸುಗುಸು ರಾಜಕೀಯ ವಲಯದಲ್ಲಿ ಗಟ್ಟಿಯಾಗಿ ಕೇಳಿಬರುತ್ತಿತ್ತು. ಅದರಲ್ಲೂ ಕಳೆದ ಆಗಸ್ಟ್ ತಿಂಗಳಲ್ಲಿ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಕುರಿತು ಸುಖಬೀರ್ ಸಿಂಗ್ ಬಾದಲ್ ಚರ್ಚೆ ನಡೆಸಿದ್ದರು. ಈ ಬೆಳವಣಿಗೆಯಿಂದಾಗಿ ಬಿಜೆಪಿ ಜೊತೆ ಕೈಜೋಡಿಸುವ ಊಹಾಪೋಹಗಳಿಗೆ ಮತ್ತಷ್ಟು ಪುಷ್ಟಿ ಸಿಕ್ಕಿತ್ತು.

ಉಭಯ ಪಕ್ಷಗಳ ಹಿಂದಿನ ಮೈತ್ರಿ ಮುರಿದುಕೊಂಡಿದ್ದು ಮತ್ತು ಚುನಾವಣಾ ಫಲಿತಾಂಶಗಳ ಹಿನ್ನೆಲೆ ನೋಡುವುದಾದರೆ, ಬಿಜೆಪಿ ಮತ್ತು ಶಿರೋಮಣಿ ಅಕಾಲಿ ದಳವು ದೀರ್ಘಕಾಲದ ಮಿತ್ರಪಕ್ಷಗಳಾಗಿದ್ದವು. ಆದರೆ ಕೇಂದ್ರ ಸರ್ಕಾರದ ಮೂರು ವಿವಾದಾತ್ಮಕ ಕೃಷಿ ಕಾಯ್ದೆಗಳ ಕುರಿತಾದ ಭಿನ್ನಾಭಿಪ್ರಾಯಗಳಿಂದಾಗಿ 2020ರ ಸೆಪ್ಟೆಂಬರ್‌ನಲ್ಲಿ ಈ ಮೈತ್ರಿ ಅಧಿಕೃತವಾಗಿ ಮುರಿದುಬಿದ್ದಿತ್ತು. ನಂತರದ ದಿನಗಳಲ್ಲಿ ಕೇಂದ್ರ ಸರ್ಕಾರವು ರೈತರ ಬೃಹತ್ ಪ್ರತಿಭಟನೆಯ ಹಿನ್ನೆಲೆಯಲ್ಲಿ ಆ ಮೂರು ಕಾಯ್ದೆಗಳನ್ನು ಹಿಂಪಡೆದರೂ ಸಹ, ಅಕಾಲಿ ದಳವು ಎನ್ಡಿಎಗೆ ಮರಳಲು ಒಪ್ಪಿರಲಿಲ್ಲ.

2022ರ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಉಭಯ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದವು ಮತ್ತು ದಯನೀಯ ಸೋಲುಂಡವು. ಬಿಜೆಪಿ ಕೇವಲ ಎರಡು ಸ್ಥಾನಗಳನ್ನು ಗೆದ್ದುಕೊಂಡರೆ, ಅಕಾಲಿ ದಳವು ತನ್ನ ಇತಿಹಾಸದಲ್ಲೇ ಅತ್ಯಂತ ಕಳಪೆ ಪ್ರದರ್ಶನ ನೀಡಿ ಕೇವಲ ಮೂರು ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಿತು. ಅಷ್ಟೇ ಅಲ್ಲದೆ, 2024ರ ಲೋಕಸಭಾ ಚುನಾವಣೆಯಲ್ಲೂ ಒಟ್ಟಾಗಿ ಸ್ಪರ್ಧಿಸುತ್ತವೆ ಎಂಬ ಊಹಾಪೋಹಗಳಿದ್ದರೂ, ಕೊನೆಗೆ ಪ್ರತ್ಯೇಕವಾಗಿಯೇ ಕಣಕ್ಕಿಳಿದವು. ಈ ಚುನಾವಣೆಯಲ್ಲಿ ಅಕಾಲಿದಳ ಕೇವಲ ಒಂದೇ ಒಂದು ಸ್ಥಾನ (ಭಟಿಂಡಾ) ಗೆದ್ದುಕೊಂಡರೆ, ಬಿಜೆಪಿ ಪಂಜಾಬ್‌ನಲ್ಲಿ ಖಾತೆಯನ್ನೇ ತೆರೆಯುವಲ್ಲಿ ವಿಫಲವಾಯಿತು.

# ಮೋದಿ–ಅದಾನಿ ಸಾಕ್ಷ್ಯಚಿತ್ರ ಹಂಚಿಕೆ: ಎಕ್ಸ್ ಖಾತೆದಾರರಿಗೆ ನೋಟಿಸ್

**ಮುಂಬೈ, ಅ. 23:** ಪ್ರಧಾನಿ ನರೇಂದ್ರ ಮೋದಿ ಮತ್ತು ಉದ್ಯಮಿ ಗೌತಮ್ ಅದಾನಿ ಅವರನ್ನು ಕುರಿತ ಸಾಕ್ಷ್ಯಚಿತ್ರವೊಂದನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡ ಆರೋಪದ ಮೇಲೆ 24 ಖಾತೆದಾರರಿಗೆ ಮುಂಬೈ ಪೊಲೀಸರು ನೋಟಿಸ್ ನೀಡಿದ್ದಾರೆ. Hotmail ಸಹಸಂಸ್ಥಾಪಕ ಸಬೀರ್ ಭಾಟಿಯಾ ನಿರ್ದೇಶನದ ಈ ಸಾಕ್ಷ್ಯಚಿತ್ರದಲ್ಲಿ ಮೋದಿ ಹಾಗೂ ಅದಾನಿ ಅವರ ಮೇಲೆ ಸುಳ್ಳು ಹಾಗೂ ಮಾನಹಾನಿಕರ ಆರೋಪಗಳಿವೆ ಎಂಬ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ ಎಂದು ವರದಿಯಾಗಿದೆ.

How Adani and Modi Stole India? ಹೆಸರಿನ ಈ ಸಾಕ್ಷ್ಯಚಿತ್ರವು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಭಾರೀ ಗಮನ ಸೆಳೆಯುತ್ತಿದೆ. ನ್ಯಾಯಾಲಯದ ಆದೇಶಗಳ ಹಿನ್ನೆಲೆಯಲ್ಲಿ ಯೂಟ್ಯೂಬ್ ಮತ್ತು ಮೆಟಾ ಸೇರಿದಂತೆ ಆನ್ಲೈನ್ ವೇದಿಕೆಗಳಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ವಿಡಿಯೋವನ್ನು ತೆಗೆದುಹಾಕುವಂತೆ ಸೂಚನೆ ನೀಡಿದ ಬಳಿಕ ಈ ವಿಚಾರ ಮತ್ತಷ್ಟು ಚರ್ಚೆಗೆ ಬಂದಿತ್ತು. ಮುಂಬೈ ಪೊಲೀಸರ ಪಶ್ಚಿಮ ವಲಯದ ಸೈಬರ್ ವಿಭಾಗಕ್ಕೆ ಹಲವು ಎಕ್ಸ್ ಖಾತೆಗಳ ಮೂಲಕ ಪ್ರಮುಖ ಕಂಪನಿಯೊಂದನ್ನು ಗುರಿಯಾಗಿಸಿಕೊಂಡ ಆಕ್ಷೇಪಾರ್ಹ ವಿಷಯವನ್ನು ಪ್ರಕಟಿಸಿ ಹರಡಲಾಗುತ್ತಿದೆ ಎಂಬ ದೂರು ಬಂದಿತ್ತು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.



ಸಂಬಂಧಿತ ಪೋಸ್ಟ್‌ಗಳಲ್ಲಿ ಸುಳ್ಳು, ದಾರಿತಪ್ಪಿಸುವ ಹಾಗೂ ಮಾನಹಾನಿಕರ ಹೇಳಿಕೆಗಳು ಮತ್ತು ಆರೋಪಗಳಿವೆ. ಯಾವುದೇ ಸ್ಪಷ್ಟವಾದ ವಾಸ್ತವಿಕ ಅಥವಾ ಕಾನೂನುಬದ್ಧ ಆಧಾರವಿಲ್ಲದೆ ಇವುಗಳನ್ನು ವಿವಿಧ ಎಕ್ಸ್ ಖಾತೆಗಳ ಮೂಲಕ ಸಾರ್ವಜನಿಕವಾಗಿ ಹರಡಲಾಗುತ್ತಿದ್ದು, ಇದರಿಂದ ಕಂಪನಿಯ ಹೆಸರು, ವಿಶ್ವಾಸಾರ್ಹತೆ ಮತ್ತು ಸಾರ್ವಜನಿಕ ವರ್ಚಸ್ಸಿಗೆ ಗಂಭೀರ ಹಾನಿಯಾಗುತ್ತಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಭಾರತೀಯ ನ್ಯಾಯಸಂಹಿತೆ ಸೆಕ್ಷನ್ 352 ಮತ್ತು 356ರ ಅಡಿಯಲ್ಲಿ ಕ್ರಮ ಕೈಗೊಳ್ಳಬಹುದಾದ ಅಂಶಗಳನ್ನು ಪೊಲೀಸರು ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ. ಸೆಕ್ಷನ್ 352 ಉದ್ದೇಶಪೂರ್ವಕ ಅವಮಾನಕ್ಕೆ ಸಂಬಂಧಿಸಿದ್ದರೆ, ಸೆಕ್ಷನ್ 356 ಮಾನಹಾನಿಗೆ ಸಂಬಂಧಿಸಿದೆ. ವಿವಾದಿತ ಪೋಸ್ಟ್‌ಗಳನ್ನು ತುರ್ತಾಗಿ ಪರಿಶೀಲಿಸಿ, ಅನ್ವಯಿಸುವ ಕಾನೂನು ಮತ್ತು ಎಕ್ಸ್ ನೀತಿಗಳಿಗೆ ಅನುಗುಣವಾಗಿ ಅವುಗಳನ್ನು ತೆಗೆದುಹಾಕಲು ಅಥವಾ ಅವುಗಳಿಗೆ ಪ್ರವೇಶವನ್ನು ನಿಷ್ಕ್ರಿಯಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಕ್ಸ್ ಸಂಸ್ಥೆಯನ್ನು ಕೋರಿದ್ದಾರೆ.

ನೋಟಿಸ್ ಪಡೆದಿರುವ ಕೆಲವು ಎಕ್ಸ್ ಖಾತೆದಾರರು ಈಗಾಗಲೇ ವಿಡಿಯೋವನ್ನು ತೆಗೆದುಹಾಕಿದ್ದಾರೆ. ಇನ್ನು ಕೆಲವರು ಪೊಲೀಸರ ನೋಟಿಸ್‌ಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು, ಈ ಕ್ರಮ ಅನ್ಯಾಯಕರವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬೆಳವಣಿಗೆಯು ರಾಜಕೀಯವಾಗಿ ಸೂಕ್ಷ್ಮವಾದ ವಿಷಯಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನಹಾನಿ ಕಾನೂನುಗಳು ಮತ್ತು ಆನ್‌ಲೈನ್ ವಿಷಯಗಳ ನಿಯಂತ್ರಣದ ಕುರಿತು ಹೊಸ ಚರ್ಚೆಗೆ ಕಾರಣವಾಗಿದೆ. ಈ ವಿವಾದಿತ ಡಾಕ್ಯುಮೆಂಟರಿ ವಿಡಿಯೋವನ್ನು ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಸ್ಥಾಪಕ ರಾಜ್ ಠಾಕ್ರೆ, ಉದ್ಯಮಿ ಮೊಯಿನ್ ಖುರೇಷಿ, ಪತ್ರಕರ್ತರಾದ ಮೊಹಮ್ಮದ್ ಜುಬೇರ್ ಹಾಗೂ ಧನ್ಯಾ ರಾಜೇಂದ್ರನ್ ಸೇರಿದಂತೆ ಹಲವರು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ. ಆದರೆ ಇವರಿಗೂ ಮುಂಬೈ ಪೊಲೀಸರು ನೋಟಿಸ್ ನೀಡಿದ್ದಾರೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

# ರಾಹುಲ್ ಬಗ್ಗೆ ಬಿಜೆಪಿ ಎಚ್ಚೆತ್ತುಕೊಳ್ಳುವುದು ಒಳಿತು

**ನವದೆಹಲಿ, ಅ. 23:** ಕಾಂಗ್ರೆಸ್ ನಾಯಕ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ವಿಫಲ ಉತ್ಪನ್ನ ಎಂಬ ಪ್ರಧಾನಿ ಮೋದಿಯವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ರಾಹುಲ್ ಗಾಂಧಿ ಬಗ್ಗೆ ಬಿಜೆಪಿ ಎಚ್ಚೆತ್ತುಕೊಳ್ಳುವುದು ಒಳಿತು ಎಂದು ತಿರುಗೇಟು ನೀಡಿದ್ದಾರೆ. ಎನ್‌ಡಿಟಿವಿ ವರ್ಲ್ಡ್ ಸಮಿಟ್‌ನಲ್ಲಿ ಮಾತನಾಡಿದ ತರೂರ್, ಕಾಂಗ್ರೆಸ್ ಪದೇ ಪದೇ ವಿಫಲ ಉತ್ಪನ್ನವನ್ನು ಮಾರುಕಟ್ಟೆಗೆ ತರುತ್ತಿದೆ ಎಂಬ ಪ್ರಧಾನಿ ಹೇಳಿಕೆಯನ್ನು ತಳ್ಳಿ ಹಾಕಿದ್ದಾರೆ. ರಾಹುಲ್ ಗಾಂಧಿಯವರನ್ನು ಗಂಭೀರವಲ್ಲದ ರಾಜಕಾರಣಿ ಎಂದು ಬಿಂಬಿಸಲು, ಬಿಜೆಪಿ ಆಗಾಗ್ಗೆ ಅವರನ್ನು ವಿಫಲ ಉತ್ಪನ್ನ ಎಂದು ಬಿಂಬಿಸುತ್ತದೆ ಎಂದಿದ್ದಾರೆ.



ಆದರೆ, ರಾಹುಲ್ ಗಾಂಧಿ ಯುವ ಮತದಾರರಲ್ಲಿ ಹೊಸ ಉತ್ಸಾಹವನ್ನು ಮೂಡಿಸಿದ್ದಾರೆ ಎಂದು ಪ್ರತಿಪಾದಿಸಿರುವ ಅವರು, ಇದಕ್ಕೆ ವ್ಯತಿರಿಕ್ತವಾಗಿ, ಕಳೆದ ಕೆಲವು ತಿಂಗಳುಗಳಲ್ಲಿ ರಾಹುಲ್ ಗಾಂಧಿ ಅವರು ಯುವ ಮತದಾರರಲ್ಲಿ ವಿಶೇಷವಾಗಿ ಒಂದು ದೊಡ್ಡ ಉತ್ಸಾಹವನ್ನು ಹುಟ್ಟುಹಾಕಿದ್ದಾರೆ ಎಂದು ನಾನು ಹೇಳಬಲ್ಲೆ. ಬಿಜೆಪಿಯು ಈ ಬಗ್ಗೆ ಎಚ್ಚೆತ್ತುಕೊಂಡು ಗಮನ ಹರಿಸುವುದು ಅವರಿಗೆ ಒಳ್ಳೆಯದು ಎಂದು ಸಲಹೆ ನೀಡಿದ್ದಾರೆ.

ವಾಸ್ತವವಾಗಿ, ಬಿಜೆಪಿಯವರು ರಾಹುಲ್ ಗಾಂಧಿ ಅವರತ್ತ ಗಮನ ಹರಿಸಿರುವ ಕಾರಣದಿಂದಲೇ ಅವರನ್ನು ಈ ರೀತಿಯಲ್ಲಿ ರಾಕ್ಷಸರಂತೆ ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಇದೇ ಎನ್‌ಡಿಟಿವಿ ವರ್ಲ್ಡ್ ಸಮಿಟ್‌ನಲ್ಲಿ ಮಾತನಾಡಿದ್ದ ಪ್ರಧಾನಿ ಮೋದಿ ಅವರು, ಕಾಂಗ್ರೆಸ್ ಪಕ್ಷವು ಎಷ್ಟು ಕಾಲದವರೆಗೆ ಒಂದು ವಿಫಲ ಉತ್ಪನ್ನವನ್ನು ಮಾರುಕಟ್ಟೆಗೆ ತರಲು ಪ್ರಯತ್ನಿಸುತ್ತದೆ ಎಂದು ಪರೋಕ್ಷವಾಗಿ ರಾಹುಲ್ ಗಾಂಧಿ ವಿರುದ್ಧ ವ್ಯಂಗ್ಯವಾಡಿದ್ದರು. ಒಂದು ವರ್ಷದ ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರದಲ್ಲಿ ನಡೆಯುವ ಉಡಾವಣೆಗಳ ಸಂಖ್ಯೆಗಿಂತಲೂ, ಕಾಂಗ್ರೆಸ್ ಪಕ್ಷವು ತನ್ನ ನಾಯಕನನ್ನು (ರಾಜಕೀಯವಾಗಿ) ನೆಲೆಗೊಳಿಸಲು ವರ್ಷವಿಡೀ ನಡೆಸುವ ವಿಫಲ ಪ್ರಯತ್ನಗಳ ಸಂಖ್ಯೆಯೇ ಹೆಚ್ಚು ಎಂದು ಲೇವಡಿ ಮಾಡಿದ್ದರು.

# ಏಕನಾಥ ಶಿಂಧೆಗೆ 500 ಕೋಟಿ ಜಾರಂಗೆ ಆಡಿಯೋ ಕ್ಲಿಪ್ ಬಿಡುಗಡೆ

**ಮುಂಬೈ, ಅ. 23:** ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜಾರಂಗೆ ಬಿಡುಗಡೆ ಮಾಡಿರುವ ವಿವಾದಾತ್ಮಕ ಆಡಿಯೊ ಕ್ಲಿಪ್, ಮಹಾರಾಷ್ಟ್ರದ ಆಡಳಿತಾರೂಢ ಮಿತ್ರಪಕ್ಷಗಳಾದ ಬಿಜೆಪಿ ಮತ್ತು ಶಿವಸೇನೆ ನಡುವೆ ತೀವ್ರ ಬಿರುಕು ಮೂಡಿಸಿದೆ. ಜಾರಂಗೆ ಅವರನ್ನು ನಿಭಾಯಿಸಲು (ಮ್ಯಾನೇಜ್ ಮಾಡಲು) ಬಿಜೆಪಿಯು ಶಿವಸೇನಾ ನಾಯಕ ಏಕನಾಥ್ ಶಿಂಧೆ ಅವರಿಗೆ 500 ಕೋಟಿ ನೀಡಿದೆ ಎಂದು ಬಿಜೆಪಿ ಪದಾಧಿಕಾರಿಯೊಬ್ಬರು ಹೇಳಿರುವ ಮಾತುಗಳು ಈ ಆಡಿಯೊದಲ್ಲಿ ದಾಖಲಾಗಿವೆ ಎನ್ನಲಾಗಿದೆ.

2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನಡೆದಿದೆ ಎನ್ನಲಾದ ಈ ಆಡಿಯೊ ಸಂಭಾಷಣೆಯಲ್ಲಿ ಮಹಿಳಾ ಬಿಜೆಪಿ ಪದಾಧಿಕಾರಿಯೊಬ್ಬರ ಧ್ವನಿ ಇದೆ. ಚುನಾವಣಾ ಸಮಯದಲ್ಲಿ ಜಾರಂಗೆ ಅವರನ್ನು ನಿಭಾಯಿಸಲು ಏಕನಾಥ್ ಶಿಂಧೆ ಅವರ ಪುತ್ರ, ಸಂಸದ ಶ್ರೀಕಾಂತ್ ಶಿಂಧೆ 500 ಕೋಟಿ ನೀಡಿದ್ದರು ಮತ್ತು ಈ ಬೃಹತ್ ಮೊತ್ತವನ್ನು ದೆಹಲಿಯ ಬಿಜೆಪಿ ವರಿಷ್ಠರು ಕಳುಹಿಸಿದ್ದರು ಎಂದು ಆ ಮಹಿಳೆ ಆರೋಪಿಸಿರುವ ಅಂಶಗಳು ಕ್ಲಿಪ್‌ನಲ್ಲಿವೆ.



ಆರೋಪಗಳನ್ನು ತಳ್ಳಿಹಾಕಿರುವ ಮನೋಜ್ ಜಾರಂಗೆ, ತಾವು ಹಣ ಪಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಮರಾಠ ಮೀಸಲಾತಿ ಹೋರಾಟದ ವರ್ಚಸ್ಸಿಗೆ ಮಸಿ ಬಳಿಯುವ ದುರುದ್ದೇಶದಿಂದಲೇ ಆಡಿಯೊವನ್ನು ಸೃಷ್ಟಿಸಲಾಗಿದೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು ಮತ್ತು ಇದರ ಹಿಂದಿರುವ ನಾಯಕರನ್ನು ಪತ್ತೆಹಚ್ಚಬೇಕು ಎಂದು ಅವರು ಪಟ್ಟುಹಿಡಿದಿದ್ದಾರೆ.

ಈ ಆಡಿಯೊದಲ್ಲಿ ಮಾತನಾಡಿರುವವರು ಯಾರು ಎಂಬುದರ ಬಗ್ಗೆ ತನಿಖೆಯಾಗಬೇಕು. ಒಂದು ವೇಳೆ ತನಿಖೆ ನಡೆಸದೆ, ಆಡಿಯೊದಲ್ಲಿರುವ ವ್ಯಕ್ತಿಗಳನ್ನು ರಕ್ಷಿಸುವ ಪ್ರಯತ್ನ ನಡೆದರೆ, ಇದರ ಹಿಂದೆ ಖುದ್ದು ದೇವೇಂದ್ರ ಫಡ್ನವೀಸ್ ಕೈವಾಡವಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಜಾರಂಗೆ ಮಾಧ್ಯಮಗಳ ಮುಂದೆ ನೇರ ಆರೋಪ ಮಾಡಿದ್ದಾರೆ.

ಈ ವಿಚಾರದಲ್ಲಿ ಬಿಜೆಪಿ ಮತ್ತು ಶಿವಸೇನೆ ಭಿನ್ನ ನಿಲುವು ತಳೆದಿವೆ. ಬಿಜೆಪಿ ಇದು ಕೃತಕ ಬುದ್ಧಿಮತ್ತೆ ಸೃಷ್ಟಿತ ನಕಲಿ ಆಡಿಯೊ ಎಂದಿದ್ದರೆ, ಶಿವಸೇನಾ ಸಚಿವ ಉದಯ್ ಸಾಮಂತ್ ಆಡಿಯೊದ ವಿಧಿವಿಜ್ಞಾನ (ಫೊರೆನ್ಸಿಕ್) ತನಿಖೆಗೆ ಆಗ್ರಹಿಸಿದ್ದಾರೆ. ಮುಖ್ಯಮಂತ್ರಿ ಹಾಗೂ ರಾಜ್ಯಾಧ್ಯಕ್ಷರ ಗಮನಕ್ಕೆ ಬಾರದೆ ಪಕ್ಷದ ಪದಾಧಿಕಾರಿಗಳು ಮಿತ್ರಪಕ್ಷಗಳ ನಡುವೆ ಬಿರುಕು ಮೂಡಿಸಲು ಯತ್ನಿಸುತ್ತಿದ್ದಾರೆಯೇ ಆಡಿಯೊ ಅಸಲಿಯಾಗಿದ್ದರೆ ಆ ವ್ಯಕ್ತಿಯ ವಿರುದ್ಧ ಬಿಜೆಪಿ ಯಾವ ಕ್ರಮ ಕೈಗೊಳ್ಳಲಿದೆ ಎಂದು ಅವರು ಪ್ರಶ್ನಿಸಿದ್ದಾರೆ.

ಶಿವಸೇನೆ ನಾಯಕರು ಈ ವಿಚಾರವನ್ನು ಬಹಿರಂಗವಾಗಿ ಚರ್ಚಿಸುತ್ತಿರುವುದಕ್ಕೆ ಬಿಜೆಪಿ ಸಚಿವ ಆಶಿಶ್ ಶೆಲಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಇದು ಬೋಗಸ್ ಆಡಿಯೊ ಎಂದಿದ್ದಾರೆ. ಇನ್ನೊಂದೆಡೆ, ವಿಪಕ್ಷ ಕಾಂಗ್ರೆಸ್ ಕೂಡ ಈ ವಿವಾದಕ್ಕೆ ಧುಮುಕಿದ್ದು, ಏಕನಾಥ್ ಶಿಂಧೆ ಹಾಗೂ ಅವರ ಪುತ್ರನನ್ನು ತಕ್ಷಣವೇ ಬಂಧಿಸಿ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಬೇಕು ಎಂದು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಹರ್ಷವರ್ಧನ್ ಸಪ್ಕಾಲ್ ಆಗ್ರಹಿಸಿದ್ದಾರೆ.

### ಮಹಾ ಎಂಎಲ್ಎ ಹಾಸ್ಟೆಲ್‌ನಲ್ಲಿ ಜಯರಾಮ ಶೆಟ್ಟಿ ಇನ್ನ ಸಾರಥ್ಯದ ಶರನ್ನವರಾತ್ರಿ ಸಂಭ್ರಮ

# ಎಂಎಲ್ಎ ಹಾಸ್ಟೆಲ್‌ನ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿ

**ಮುಂಬಯಿ, ಅ.23:** ಬೃಹನ್ಮುಂಬಯಿ ಚರ್ಚ್‌ಗೇಟ್ ಇಲ್ಲಿನ ಶಾಸಕರ ವಸತಿಗೃಹದಲ್ಲಿ ಮಹಾನಗರದಲ್ಲಿನ ಹಿರಿಯ ಮತ್ತು ಪ್ರತಿಷ್ಠಿತ ಹೊಟೇಲು ಉದ್ಯಮಿ ಪದ್ಮಕರ್ ಗಂಭೀರ್ ಮುಂದಾಳುತ್ವದಲ್ಲಿ ಸ್ಥಾಪಿತ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿ ತನ್ನ 53ನೇ ವಾರ್ಷಿಕ ನವರಾತ್ರಿ ಮಹೋತ್ಸವವನ್ನು ಸಾಂಪ್ರದಾಯಿಕ ಮತ್ತು ವಿಧಿವತ್ತಾಗಿ ಆಚರಿಸಿತು. ವರ್ಷಂಪ್ರತಿಯಂತೆ ಈ ಬಾರಿಯೂ 2026ನೇ ಸಾಲಿನ ಶರನ್ನವರಾತ್ರಿಯನ್ನು ಮಹಾನಗರದ ಪ್ರತಿಷ್ಠಿತ ಹೊಟೇಲು ಉದ್ಯಮಿ,ಅಜಂತಾ ಕ್ಯಾಟರರ್ಸ್‌ನ ಮಾಲೀಕ, ಭಜನಾ ಮಂಡಳಿ ಗೌರವಾಧ್ಯಕ್ಷ ಜಯರಾಮ ಬಿ.ಶೆಟ್ಟಿ ಇನ್ನ ಸಾರಥ್ಯದಲ್ಲಿ ನೆರವೇರಿಸಲ್ಪಟ್ಟಿತು.

ನವರಾತ್ರಿಯ ಒಂಭತ್ತು ದಿನಗಳಲ್ಲಿ ಭಜನಾ ಮಂಡಳಿಯ ಶ್ರೀ ದುರ್ಗಾಂಬಿಕಾ ಸನ್ನಿಧಿಯಲ್ಲಿ ವಿದ್ವಾನ್ ಸುಬ್ರಹ್ಮಣ್ಯ ಭಟ್ ತನ್ನ ಪೌರೋಹಿತ್ಯದಲ್ಲಿ ಗಣಹೋಮ, ಇತರ ಪೂಜೆಗಳನ್ನು ವಿಧಿವತ್ತಾಗಿ ನೆರವೇರಿಸಿ ಅನುಗ್ರಹಿಸಿದರು. ವಾರ್ಷಿಕ ಶರನ್ನವರಾತ್ರಿ ಪ್ರಯುಕ್ತ ಸನ್ನಿಧಿಯಲ್ಲಿ ನಿತ್ಯಪೂಜೆ, ಶ್ರೀ ಅಣ್ಣಪ್ಪ ಪಂಜುರ್ಲಿ ದೈವದ ಪೂಜೆ, ಮಹಾಕಾಳಿ ಅಮ್ಮನವರ ಪೂಜೆ, ಭಜನೆ ಮತ್ತು ಮಂಗಳಾರತಿ ನೆರವೇರಿಸಲಾಯಿತು.

ವಿಜಯದಶಮಿ ದಿನ ಬೆಳಗ್ಗೆ ಕಳಸಪೂಜೆ, ಭಜನೆ, ಮಹಾಪೂಜೆ ಮತ್ತು ಪ್ರಸಾದ ವಿತರಣೆ,



ಅನ್ನಸಂತರ್ಪಣೆ, ಸಂಜೆ ಮೆರವಣಿಗೆಯೊಂದಿಗೆ ಚೌಪಾಟಿಯಲ್ಲಿ ಕಳಸ ವಿಸರ್ಜನೆ ನಡೆಸಲಾಗಿ ದಸರಾ ಮಹೋತ್ಸವದ ಆರಂಭೋತ್ಸವದ ದಿನ ಘಟಸ್ಥಾಪನೆಯೊಂದಿಗೆ ಆದಿಗೊಂಡ ನವರಾತ್ರಿ ಉತ್ಸವವು ವಿಜಯದಶಮಿದಿನ ಸಮಾಪನಗೊಂಡಿತು.

ಈ ಬಾರಿ ದಸರಾಪೂಜೆಗೆ ಮಹಾರಾಷ್ಟ್ರ ವಿಧಾನಸಭೆಯ ಸಭಾಪತಿ (ಸ್ಪೀಕರ್) ರಾಹುಲ್ ಸುರೇಶ್ ನಾರ್ವೇಕರ್ ಭೇಟಿನೀಡಿ ಇಲ್ಲಿ ಪ್ರತಿಷ್ಠಾಪಿಸಿ ಆರಾಧಿಸಲ್ಪಟ್ಟ ಮಾತೆಗೆ ನಮಿಸಿದ್ದು, ಮಂಡಳಿಯ ಗೌರವಾಧ್ಯಕ್ಷ ಜಯರಾಮ ಬಿ.ಶೆಟ್ಟಿ ಇನ್ನ, ಅಧ್ಯಕ್ಷ ಹರೀಶ್ ಎಸ್.ಖೇಡೇಕರ್, ಉಪಾಧ್ಯಕ್ಷ ನವೀನ್ ಕೆ.ಶೆಟ್ಟಿ ಮತ್ತು ಪದಾಧಿಕಾರಿಗಳು ಶಾಲು ಹೊದಿಸಿ ಪೂಜಾ ಪ್ರಸಾದವನ್ನಿತ್ತು ಭಕ್ತಿಪೂರ್ವಕವಾಗಿ ಗೌರವಿಸಿದರು.

ಶ್ರದ್ಧಾಭಕ್ತಿ ಹಾಗೂ ಸಂಭ್ರಮೋಲ್ಲಾಸದಿಂದ ನೆರವೇರಿಸಲ್ಪಟ್ಟ ವಾರ್ಷಿಕ ಪೂಜೆಯಲ್ಲಿ ಮಂಡಳಿಯ ಗೌ। ಪ್ರ। ಕಾರ್ಯದರ್ಶಿ ಸುರೇಶ್ ಶೆಟ್ಟಿ, ಕೋಶಾಧಿಕಾರಿ ಮಾಣಿಕ್ಯ ಕೋಟ್ಯಾನ್, ಜೊತೆ ಕಾರ್ಯದರ್ಶಿಗಳಾದ ಚಂದ್ರ ಮೋಗವೀರ, ಯೋಗೇಶ್ ಪುತ್ರನ್, ಮಾಧವ ಮೋಗವೀರ, ಯೋಗೇಶ್ ಬಂಗೇರ, ಮುಖ್ಯ ಸಲಹೆಗಾರ ವಿಠ್ಠಲ್ ಶೇರಿಗಾರ್ ಕಟಪಾಡಿ, ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿಯ ಸದಸ್ಯರು ಸೇರಿದಂತೆ ನಗರದ ನೂರಾರು ಗಣ್ಯರು, ಭಕ್ತರು ವಾರ್ಷಿಕ ದಸರೋತ್ಸವದಲ್ಲಿ ಪಾಲ್ಗೊಂಡು ಶ್ರೀ ದುರ್ಗಾಂಬಿಕೆ ಅಮ್ಮ, ಶ್ರೀ ಮಹಾಕಾಳಿ ಹಾಗೂ ಶ್ರೀ ಅಣ್ಣಪ್ಪ ಪಂಜುರ್ಲಿ ದೈವದ ಕೃಪೆಗೆ ಪಾತ್ರರಾದರು.

# ನ.1ರಿಂದ ಜಿಎಸ್‌ಟಿ ವಿನಾಯಿತಿ ಸಡಿಲಿಕೆ: ಏನು ಬದಲಾಗಬಹುದು?

**ನವದೆಹಲಿ, ಅ. 23:** ಸಣ್ಣ ಇ–ಕಾಮರ್ಸ್ ಮಾರಾಟಗಾರರಿಗೆ ಜಿಎಸ್‌ಟಿ ನೋಂದಣಿ ಸರಳಗೊಳಿಸುವುದು, ತೆರಿಗೆ ಮರುಪಾವತಿಯನ್ನು ತ್ವರಿತಗೊಳಿಸುವುದು ಹಾಗೂ ದಾಖಲೆಗಳ ಸಲ್ಲಿಕೆ ಪ್ರಕ್ರಿಯೆಯನ್ನು ಸುಗಮಗೊಳಿಸುವುದು ಸೇರಿದಂತೆ ಹಲವು ಸುಧಾರಣೆಗಳು ಇದೇ ನವೆಂಬರ್ 1 ರಿಂದ ಜಾರಿಗೆ ಬರುವ ನಿರೀಕ್ಷೆಯಿದೆ. ಅಕ್ಟೋಬರ್ 8ರಂದು ನಡೆದ 57ನೇ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ಸುಧಾರಣೆಗಳಿಗೆ ಅನುಮೋದನೆ ನೀಡಲಾಗಿದ್ದು, ಹಂತ ಹಂತವಾಗಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಆಡಳಿತಾತ್ಮಕ ಕ್ರಮಗಳ ಮೂಲಕ ಅನುಷ್ಠಾನಗೊಳಿಸಬಹುದಾದ ಸುಧಾರಣೆಗಳು 2026ರ ನವೆಂಬರ್ 1ರಿಂದ ಜಾರಿಗೆ ಬರುವ ಸಾಧ್ಯತೆಯಿದೆ. ಜಿಎಸ್ ಟಿ ಕಾಯ್ದೆಗೆ ತಿದ್ದುಪಡಿ ಅಗತ್ಯವಿರುವ ಕ್ರಮಗಳನ್ನು 2027ರ ಏ.1ರಿಂದ ಜಾರಿಗೊಳಿಸುವ ಉದ್ದೇಶವಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಸಂಬಂಧದ ಅಧಿಸೂಚನೆಗಳು ಮತ್ತು ಸುತ್ತೋಲೆಗಳಿಗೆ ಕಾನೂನು ವಿಭಾಗದ ಅನುಮೋದನೆ ದೊರೆತಿದ್ದು, ಶೀಘ್ರದಲ್ಲೇ ಪ್ರಕಟವಾಗುವ ನಿರೀಕ್ಷೆಯಿದೆ. ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇ–ಕಾಮರ್ಸ್ ವೇದಿಕೆಗಳ ಮೂಲಕ ಸರಕುಗಳನ್ನು ಮಾರಾಟ ಮಾಡುವ ಸಣ್ಣ ವ್ಯಾಪಾರಿಗಳಿಗೆ ಹೊಸ ನಿಯಮಗಳಿಂದ ಅನುಕೂಲವಾಗಲಿದೆ.

ಸರಕುಗಳನ್ನು ಸಂಗ್ರಹಿಸುವ ಪ್ರತಿಯೊಂದು ರಾಜ್ಯದಲ್ಲೂ ಸ್ವಂತ ಕಚೇರಿ ಹೊಂದಿರದ ಮಾರಾಟಗಾರರು, ನಿಗದಿತ ಷರತ್ತುಗಳ ಅಡಿಯಲ್ಲಿ ಇ–ಕಾಮರ್ಸ್ ಸಂಸ್ಥೆಯ ಗೋದಾಮನ್ನು ತಮ್ಮ ವ್ಯವಹಾರದ ಪ್ರಧಾನ ಸ್ಥಳವಾಗಿ ಘೋಷಿಸಬಹುದು. ಇದಕ್ಕಾಗಿ ತಿಂಗಳಿಗೆ ಗರಿಷ್ಠ 2.5 ಲಕ್ಷದವರೆಗಿನ ಇನ್ಪುಟ್ ಟ್ಯಾಕ್ಸ್‌ಕ್ರೆಡಿಟ್ ವರ್ಗಾವಣೆಗೆ ಸಂಬಂಧಿಸಿದ ಷರತ್ತು ಸೇರಿದಂತೆ ನಿಗದಿತ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮಾರಾಟಗಾರರು ತಾವು ನೋಂದಣಿ ಪಡೆಯುವ ಒಂದು ರಾಜ್ಯದಲ್ಲಿ ನೈಜ ವ್ಯವಹಾರಿಕ ಅಸ್ತಿತ್ವವನ್ನು ಹೊಂದಿರಬೇಕು.



ಆ ರಾಜ್ಯದಲ್ಲಿ ಭೌತಿಕ ಪರಿಶೀಲನೆ ಮತ್ತು ಆಧಾರ್ ದೃಢೀಕರಣ ಪೂರ್ಣಗೊಳಿಸಿದ ಬಳಿಕ, ಇ–ಕಾಮರ್ಸ್ ವೇದಿಕೆಯ ಒಪ್ಪಿಗೆಯೊಂದಿಗೆ ಇತರ ರಾಜ್ಯಗಳಲ್ಲಿ ನೋಂದಣಿ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ. ಇದಕ್ಕೆ ಪ್ರತಿ ರಾಜ್ಯದಲ್ಲೂ ತೆರಿಗೆ ಅಧಿಕಾರಿಗಳ ಪ್ರತ್ಯೇಕ ಹಸ್ತಕ್ಷೇಪದ ಅಗತ್ಯವನ್ನು ಕಡಿಮೆ ಮಾಡುವ ಉದ್ದೇಶವಿದೆ. ಈ ಕ್ರಮದಿಂದ ಸುಮಾರು 9.5 ಲಕ್ಷ ಸಣ್ಣ ಮಾರಾಟಗಾರರಿಗೆ ಪ್ರಯೋಜನವಾಗುವ ನಿರೀಕ್ಷೆಯಿದೆ. ಪ್ರತಿ ರಾಜ್ಯದಲ್ಲೂ ಕಚೇರಿ ಸ್ಥಾಪಿಸದೆ ದೇಶಾದ್ಯಂತ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಇದರಿಂದ ಅನುಕೂಲವಾಗಲಿದೆ.

ಜಿಎಸ್ ಟಿ ನೋಂದಣಿಗೆ ಅಗತ್ಯವಿರುವ ದಾಖಲೆಗಳು ಮತ್ತು ಮಾಹಿತಿಯ ಕುರಿತು ಸರ್ಕಾರ ಸಮಗ್ರ ಸುತ್ತೋಲೆ ಹೊರಡಿಸಲಿದೆ. ಜಿಎಸ್‌ಟಿ REG–01 ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಆಯ್ಕೆ ಮಾಡಿಕೊಳ್ಳಲು ಡ್ರಾಪ್‌ಡೌನ್ ಆಯ್ಕೆಗಳನ್ನು ಒದಗಿಸಲಾಗುತ್ತದೆ. ಜಿಎಸ್‌ಟಿ ಪೋರ್ಟಲ್‌ನಲ್ಲಿ ಸುಲಭವಾದ ನ್ಯಾವಿಗೇಷನ್, ಸ್ಪಷ್ಟ ಸೂಚನೆಗಳು ಮತ್ತು ಟೂಲ್ಟಿಪ್ಗಳನ್ನು ಪರಿಚಯಿಸುವ ಮೂಲಕ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಬಳಕೆದಾರ ಸ್ನೇಹಿಯಾಗಿಸಲು ಉದ್ದೇಶಿಸಲಾಗಿದೆ. ಇದರಿಂದ ಅಪೂರ್ಣ ದಾಖಲೆಗಳು ಅಥವಾ ತಪ್ಪು ಮಾಹಿತಿಯ ಕಾರಣಕ್ಕೆ ಅರ್ಜಿಗಳು ತಿರಸ್ಕೃತವಾಗುವುದು ಮತ್ತು ಹೆಚ್ಚುವರಿ ಸ್ಪಷ್ಟೀಕರಣ ಕೇಳುವ ಪ್ರಕರಣಗಳು ಕಡಿಮೆಯಾಗುವ ನಿರೀಕ್ಷೆಯಿದೆ. ನೋಂದಣಿ ಪ್ರಕ್ರಿಯೆಯೂ ವೇಗಗೊಳ್ಳಲಿದೆ.

ವ್ಯವಹಾರಗಳ ಬಂಡವಾಳದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಜಿಎಸ್‌ಟಿ ಮರುಪಾವತಿ ವ್ಯವಸ್ಥೆಯಲ್ಲೂ ಬದಲಾವಣೆಗಳನ್ನು ತರಲಾಗುತ್ತಿದೆ. ಎಲೆಕ್ಟ್ರಾನಿಕ್ ಕ್ಯಾಶ್ ಲೆಡ್ಜರ್‌ನಲ್ಲಿನ ಹೆಚ್ಚುವರಿ ಮೊತ್ತ: ಈ ಮೊತ್ತದ ಮರುಪಾವತಿಯನ್ನು ತೆರಿಗೆ ಅಧಿಕಾರಿಗಳ ಹಸ್ತಕ್ಷೇಪವಿಲ್ಲದೆ ಸ್ವಯಂಚಾಲಿತ ವ್ಯವಸ್ಥೆಯ ಮೂಲಕ ಮಂಜೂರು ಮಾಡುವ ಪ್ರಸ್ತಾವವಿದೆ. ಸ್ವೀಕೃತಿ ಅಥವಾ ಕೊರತೆ ಸೂಚನೆ: ಮರುಪಾವತಿ ಅರ್ಜಿಗೆ ಸಂಬಂಧಿಸಿದ ಸ್ವೀಕೃತಿ ಅಥವಾ ಕೊರತೆ ಮೆಮೊ ನೀಡಲು ಇರುವ ಕಾಲಮಿತಿಯನ್ನು 15 ದಿನಗಳಿಂದ 10 ದಿನಗಳಿಗೆ ಇಳಿಸಲಾಗುತ್ತದೆ. **ಶೂನ್ಯ ದರದ ಪೂರೈಕೆ ಮತ್ತು ಇನ್ವರ್ಟೆಡ್ ಡ್ಯೂಟಿ ಸ್ಟ್ರಕ್ಚರ್:** ಅಪಾಯ ಮೌಲ್ಯಮಾಪನದ ಆಧಾರದ ಮೇಲೆ, ಅರ್ಜಿಯಲ್ಲಿ ಕೋರಿದ ಮರುಪಾವತಿ ಮೊತ್ತದ ಶೇ.90ರಷ್ಟನ್ನು ಸ್ವಯಂಚಾಲಿತ ವ್ಯವಸ್ಥೆಯ ಮೂಲಕ ತಾತ್ಕಾಲಿಕವಾಗಿ ಮಂಜೂರು ಮಾಡುವ ಕ್ರಮವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ಕ್ರಮಗಳು ಮರುಪಾವತಿ ವಿಳಂಬವನ್ನು ತಗ್ಗಿಸಿ, ವ್ಯವಹಾರಗಳಿಗೆ ಹಣಕಾಸಿನ ಹರಿವು ಸುಧಾರಿಸಲು ನೆರವಾಗಲಿವೆ. ಜಿಎಸ್‌ಟಿ ವಿವಾದಗಳು ಮತ್ತು ಅನಗತ್ಯ ಕಾನೂನು ಪ್ರಕ್ರಿಯೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಶೋಕಾಸ್ ನೋಟಿಸ್‌ಗಳನ್ನು ನೀಡಲು ಕನಿಷ್ಠ 10,000 ಮಿತಿಯನ್ನು ಪರಿಚಯಿಸುವ ಪ್ರಸ್ತಾವವೂ ಇದೆ. ಈ ಕ್ರಮದ ಅನುಷ್ಠಾನವು ಸಂಬಂಧಿತ ಜಿಎಸ್ಟಿ ನಿಯಮಗಳು ಮತ್ತು ಕಾಯ್ದೆಗಳಲ್ಲಿ ಅಗತ್ಯವಿರುವ ಬದಲಾವಣೆಗಳ ಮೇಲೆ ಅವಲಂಬಿತವಾಗಿರಲಿದೆ. ಒಟ್ಟಾರೆ, ನೋಂದಣಿ, ರಿಟರ್ನ್ ಸಲ್ಲಿಕೆ, ಮರುಪಾವತಿ ಮತ್ತು ತೆರಿಗೆ ವಿವಾದಗಳ ನಿರ್ವಹಣೆಯಲ್ಲಿ ಸರಳತೆ ತರಲು ಈ ಸುಧಾರಣೆಗಳನ್ನು ರೂಪಿಸಲಾಗಿದೆ. ಸಣ್ಣ ವ್ಯಾಪಾರಿಗಳ ಅನುಸರಣೆ ವೆಚ್ಚ ಮತ್ತು ದಾಖಲೆಗಳ ಹೊರೆ ತಗ್ಗಿಸುವುದರ ಜೊತೆಗೆ, ತೆರಿಗೆ ಆಡಳಿತದ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಸರ್ಕಾರದ ಉದ್ದೇಶವಾಗಿದೆ.

# ಜಿಯೋ ಐಪಿಓ ಖರೀದಿಗೆ ಭಾರಿ ಬೇಡಿಕೆ: 1 ಕೋಟಿ ಅರ್ಜಿ

**ಮುಂಬೈ, ಅ. 23:** ಭಾರತೀಯ ಷೇರು ಮಾರುಕಟ್ಟೆಯಲ್ಲಿ ರಿಲಯನ್ಸ್ ಸಂಸ್ಥೆ ಮತ್ತೊಂದು ಅಚ್ಚರಿಯ ಇತಿಹಾಸ ಬರೆದಿದೆ. ಇಡೀ ಜಗತ್ತೇ ಭಾರತದತ್ತ ತಿರುಗಿ ನೋಡುವಂತೆ ಮಾಡಿರುವ ಜಿಯೋ ಪ್ಲಾಟ್‌ಫಾರ್ಮ್ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಬರೋಬ್ಬರಿ 1 ಕೋಟಿಗೂ ಅಧಿಕ ಅರ್ಜಿಗಳನ್ನು ಬಾಚಿಕೊಳ್ಳುವ ಮೂಲಕ ವಿಶ್ವದಾಖಲೆ ಬರೆದಿದೆ.

ಜಾಗತಿಕ ಹಂತದಲ್ಲಿ ಇದುವರೆಗೂ ಯಾವುದೇ ಕಂಪನಿಯ ಐಪಿಒ ಇಷ್ಟೊಂದು ಪ್ರಮಾಣದ ಅರ್ಜಿಗಳನ್ನು ಪಡೆದಿಲ್ಲ ಎನ್ನುವುದು ಗಮನಾರ್ಹವಾಗಿದೆ. ಈ ಐತಿಹಾಸಿಕ ದಾಖಲೆ ಹೊರಬೀಳುವ ಹೊತ್ತಿಗೆ ಬಿಡ್ಡಿಂಗ್ ಮುಗಿಯಲು ಇನ್ನೂ ಐದು ಗಂಟೆಗಳ ಕಾಲಾವಕಾಶ ಬಾಕಿ ಇತ್ತು. ಅಂತಿಮ ಹಂತದಲ್ಲಿ ಅರ್ಜಿಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಿದ್ದು, ದಲಾಲ್ ಸ್ಟ್ರೀಟ್‌ನಲ್ಲಿ ಜಿಯೋ ಹವಾ ಯಾವ ಮಟ್ಟದಲ್ಲಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಮಾರುಕಟ್ಟೆಯಲ್ಲಿ ಹಲವು ಬೃಹತ್ ಐಪಿಒಗಳು ಬಂದಿವೆ. ಈ ಹಿಂದೆ 'ವಾರಿ ಎನರ್ಜೀಸ್' ಸುಮಾರು 97 ಲಕ್ಷ ಅರ್ಜಿಗಳನ್ನು ಪಡೆಯುವ ಮೂಲಕ ಅತಿ ಹೆಚ್ಚು ಜನಪ್ರಿಯತೆ ಗಳಿಸಿದ ಐಪಿಒ ಎನಿಸಿಕೊಂಡಿತ್ತು. ಅದಕ್ಕೂ ಮೊದಲು ಬಜಾಜ್ ಹೌಸಿಂಗ್ ಫೈನಾನ್ಸ್ ಹಾಗೂ ಬಿಸಿಸಿಎಲ್ ತಲಾ ಸುಮಾರು 90 ಲಕ್ಷ ಅರ್ಜಿಗಳನ್ನು ಸೆಳೆದು ಸಂಚಲನ ಮೂಡಿಸಿದ್ದವು. ಆದರೆ ಈಗ ಜಿಯೋ ಪ್ಲಾಟ್‌ಫಾರ್ಮ್ ಎಲ್ಲಾ ಹಳೆಯ ಮೈಲಿಗಲ್ಲುಗಳನ್ನು ಸಲೀಸಾಗಿ ಹಿಂದಿಕ್ಕಿ, ಯಾರೂ ಮುಟ್ಟಲಾಗದ ಹೊಸ ಜಾಗತಿಕ ಮಾನದಂಡವನ್ನು ಸ್ಥಾಪಿಸಿದೆ.

ಬಿಡ್ಡಿಂಗ್‌ನ ಮೂರನೇ ದಿನದ ಮಧ್ಯಾಹ್ನದ ಹೊತ್ತಿಗಾಗಲೇ ಜಿಯೋ ಪ್ಲಾಟ್‌ಫಾರ್ಮ್ ಐಪಿಒ ಒಟ್ಟಾರೆಯಾಗಿ 7.41 ಪಟ್ಟು ಸಬ್‌ಸ್ಕ್ರೈಬ್ ಆಗಿದೆ. ಪ್ರತಿಯೊಂದು ವಿಭಾಗದಲ್ಲೂ ಹೂಡಿಕೆದಾರರು ಮುಗಿಬಿದ್ದು ಹಣ ಹೂಡಿದ್ದಾರೆ.

ಸಾಂಸ್ಥಿಕ ಖರೀದಿದಾರರು ತಮ್ಮ ಪಾಲಿನ ಬರೋಬ್ಬರಿ 15.95 ಪಟ್ಟು ಹೂಡಿಕೆ ಮಾಡಿ ಎಲ್ಲರ ಹುಬ್ಬೇರಿಸಿದ್ದಾರೆ. ಸಾಂಸ್ಥಿಕೇತರ ಹೂಡಿಕೆದಾರರ ವಿಭಾಗದಲ್ಲಿ 9.86 ಪಟ್ಟು ಸಬ್‌ಸ್ಕ್ರೈಬ್ ಆಗಿದೆ. ಚಿಲ್ಲರೆ ಹೂಡಿಕೆದಾರರ ಸಾಮಾನ್ಯ ಹೂಡಿಕೆದಾರರ ಕೋಟಾ 2.12 ಪಟ್ಟು ಭರ್ತಿಯಾಗಿದೆ.

ಪಿಒ ಮೂಲಕ ಸಂಗ್ರಹವಾಗುವ ಈ ಬೃಹತ್ ಮೊತ್ತವನ್ನು ಸುಮ್ಮನೆ ಕೂಡಿಡುವುದಿಲ್ಲ. ಜಿಯೋ ಪ್ಲಾಟ್‌ಫಾರ್ಮ್ ತನ್ನ ಪ್ರಮುಖ ಅಂಗಸಂಸ್ಥೆಯಾದ 'ರಿಲಯನ್ಸ್ ಜಿಯೋ ಇನ್ಫೋಕಾಮ್ ಲಿಮಿಟೆಡ್' ಹೊಂದಿರುವ ಸಾಲಗಳನ್ನು ತೀರಿಸಲು ಮೊದಲ ಆದ್ಯತೆ ನೀಡಿದೆ.

# ಅಂತು, ಇಂತೂ ಡಿ.30ರೊಳಗೆ ಜಿಬಿಎ 5 ಪಾಲಿಕೆಗಳಿಗೆ ಚುನಾವಣೆ?

**ಸಿದ್ಧತೆ ಚುರುಕುಗೊಳಿಸಿದ ರಾಜ್ಯ ಚುನಾವಣಾ ಆಯೋಗ**
**ಹೊಸ ಎಸ್‌ಐಆರ್ ಪಟ್ಟಿ ಆಧರಿಸಿ ಮತದಾನ**




**ಬೆಂಗಳೂರು, ಅ.23:** ಅಂತೂ ಇಂತೂ ಜಿಬಿಎಗೆ ಚುನಾವಣೆ ನಡೆಯುವುದು ಪಕ್ಕಾ ಎಂಬ ಮಾತುಗಳು ಕೇಳಿ ಬರುತ್ತಿರುವ ಸಂದರ್ಭದಲ್ಲೇ ಮತದಾನಕ್ಕೆ ಹೊಸ ಎಸ್‌ಐಆರ್ ಪಟ್ಟಿಯನ್ನೇ ಆಧರಿಸಿ ಚುನಾವಣೆ ನಡೆಸುವ ಸಾಧ್ಯತೆಗಳಿವೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಸುಪ್ರೀಂ ಕೋರ್ಟ್ ಸೂಚನೆಯಂತೆ ಡಿಸೆಂಬರ್ 30ರೊಳಗೆ ಐದು ನಗರ ಪಾಲಿಕೆಗಳ ಚುನಾವಣೆ ನಡೆಸಬೇಕಿರುವ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಸಿದ್ಧತೆಗಳನ್ನು ಚುರುಕುಗೊಳಿಸಿದೆ.

ಇದೇ ವೇಳೆ, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಇಂದಿಗೆ ಮುಕ್ತಾಯಗೊಳ್ಳಲಿದ್ದು, ಪರಿಷ್ಕೃತ ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 27ರಂದು ಪ್ರಕಟಿಸಲು ಸಿದ್ಧತೆ ನಡೆಸಲಾಗಿದೆ.ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಡೆಯಲಿರುವ ಮೊದಲ ಚುನಾವಣೆ ಜಿಬಿಎ ವ್ಯಾಪ್ತಿಯಲ್ಲಿ ನಡೆಯಲಿರುವುದರಿಂದ, ಈ ಬಾರಿಯ ಚುನಾವಣೆಯಲ್ಲಿ ಪರಿಷ್ಕೃತ ಮತದಾರರ ಪಟ್ಟಿಯೇ ನಿರ್ಣಾಯಕವಾಗಲಿದೆ ಎಂಬ ಗುಸು ಗುಸು ಆರಂಭವಾಗಿದೆ.

ಇದರಿಂದಾಗಿ ಹಳೆಯ ಮತದಾರರ ಪಟ್ಟಿಯ ಆಧಾರದಲ್ಲೇ ಚುನಾವಣೆ ನಡೆಯಬಹುದು ಎಂದು ನಿರೀಕ್ಷಿಸಿದ್ದ ರಾಜಕೀಯ ಪಕ್ಷಗಳಿಗೆ ಹೊಸ ಪಟ್ಟಿ ಸವಾಲಾಗಿ ಪರಿಣಮಿಸುವ ಸಾಧ್ಯತೆಯಿದೆ.

**1.04 ಕೋಟಿಯಿಂದ 60 ಲಕ್ಷಕ್ಕೆ ಇಳಿಕೆ**

ಹಳೆಯ ಮತದಾರರ ಪಟ್ಟಿಯಲ್ಲಿ ಜಿಬಿಎ ವ್ಯಾಪ್ತಿಯಲ್ಲಿ ಸುಮಾರು 1.04 ಕೋಟಿ ಮತದಾರರಿದ್ದರು ಎಂದು ಅಂದಾಜಿಸಲಾಗಿತ್ತು. ಆದರೆ, ಎಸ್‌ಐಆರ್ ಪ್ರಕ್ರಿಯೆಯ ಬಳಿಕ ಸಿದ್ಧಪಡಿಸಲಾಗಿರುವ ಹೊಸ ಪಟ್ಟಿಯಲ್ಲಿ ಸುಮಾರು 60 ಲಕ್ಷ ಮತದಾರರ ಹೆಸರುಗಳು ಮಾತ್ರ ಉಳಿದಿವೆ ಎಂದು ಅಧಿಕಾರಿಗಳ ಮಾಹಿತಿ ತಿಳಿಸಿದೆ. ಹಳೆಯ ಪಟ್ಟಿಗೆ ಹೋಲಿಸಿದರೆ ಮತದಾರರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಆದರೆ, ಮತದಾರರ ಸಂಖ್ಯೆಯಲ್ಲಿನ ಇಳಿಕೆಗೆ ಸಂಬಂಧಿಸಿದಂತೆ ಅಂತಿಮ ಪಟ್ಟಿಯಲ್ಲಿನ ಅಧಿಕೃತ ಅಂಕಿ–ಅಂಶಗಳೇ ಸ್ಪಷ್ಟ ಚಿತ್ರಣ ನೀಡಲಿವೆ. ಹೀಗಾಗಿ, ಅಕ್ಟೋಬರ್ 27ರಂದು ಪ್ರಕಟವಾಗಲಿರುವ ಅಂತಿಮ ಪಟ್ಟಿಯ ಮೇಲೆ ಎಲ್ಲರ ಗಮನ ನೆಟ್ಟಿದೆ.

**ರಾಜಕೀಯ ಪಕ್ಷಗಳಿಗೆ ಹೊಸ ಸವಾಲು**

ಹಳೆಯ ಮತದಾರರ ಪಟ್ಟಿಯನ್ನೇ ಆಧರಿಸಿ ಚುನಾವಣಾ ಲೆಕ್ಕಾಚಾರ ಹಾಕುತ್ತಿದ್ದ ರಾಜಕೀಯ ಪಕ್ಷಗಳಿಗೆ ಪರಿಷ್ಕೃತ ಪಟ್ಟಿ ಹೊಸ ಸವಾಲು ತಂದಿದೆ. ವಾರ್ಡ್‌ವಾರು ಮತದಾರರ ಸಂಖ್ಯೆಯಲ್ಲಿ ಆಗಿರುವ ಬದಲಾವಣೆ, ಹೆಸರುಗಳ ಸೇರ್ಪಡೆ ಮತ್ತು ಕೈಬಿಟ್ಟಿರುವ ವಿವರಗಳು ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ತಂತ್ರಗಾರಿಕೆಯ ಮೇಲೂ ಪರಿಣಾಮ ಬೀರಬಹುದು.

**ಹೊಸ ಪಟ್ಟಿಯೇ ಚುನಾವಣೆಗೆ ಆಧಾರ:**

ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಪ್ರಕಟವಾಗುವ ಅಂತಿಮ ಮತದಾರರ ಪಟ್ಟಿಯ ಅನ್ವಯವೇ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಅಧಿಕಾರಿಗಳ ಮೂಲಗಳು ತಿಳಿಸಿವೆ.ಹೀಗಾಗಿ, ಹೊಸ ಮತದಾರರ ಪಟ್ಟಿಯೇ ಈ ಬಾರಿಯ ಜಿಬಿಎ ಚುನಾವಣೆಯ ಪ್ರಮುಖ ಆಧಾರವಾಗಲಿದೆ.

ಒಟ್ಟಿನಲ್ಲಿ, ಚುನಾವಣೆ ನಡೆಸಲು ನ್ಯಾಯಾಲಯದ ಗಡುವು, ಚುನಾವಣಾ ಆಯೋಗದ ಸಿದ್ಧತೆ ಮತ್ತು ಮತದಾರರ ಪಟ್ಟಿಯಲ್ಲಿನ ಭಾರಿ ಬದಲಾವಣೆಗಳು ಜಿಬಿಎ ಚುನಾವಣೆಯನ್ನು ಮತ್ತಷ್ಟು ಕುತೂಹಲದ ಘಟ್ಟಕ್ಕೆ ಕೊಂಡೊಯ್ದಿವೆ. ಅಕ್ಟೋಬರ್ 27ರಂದು ಪ್ರಕಟವಾಗುವ ಅಂತಿಮ ಮತದಾರರ ಪಟ್ಟಿಯ ಬಳಿಕ ಚುನಾವಣಾ ಚಿತ್ರಣ ಇನ್ನಷ್ಟು ಸ್ಪಷ್ಟವಾಗಲಿದೆ.

# ನೈಸ್ ಟೋಲ್ ಸಂಗ್ರಹದಲ್ಲಿ ವ್ಯಾಪಕ ಅಕ್ರಮ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪ

**ಬೆಂಗಳೂರು ಅ.23:** ನೈಸ್ ರಸ್ತೆಯ ಕಲೆಕ್ಷನ್‌ನಲ್ಲಿ ನೈಸ್ ಕಂಪನಿ ವ್ಯಾಪಕ ಅಕ್ರಮಗಳನ್ನು ಎಸಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರ ಸ್ವಾಮಿ ಅವರು ಆರೋಪಿಸಿದರು.

ಜೆಡಿಎಸ್ ಪಕ್ಷದ ಕೇಂದ್ರ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ, ಕೇಂದ್ರ ಸಚಿವರು; ನೈಸ್ ಕುರಿತು ಬಂದಿರುವ ವರದಿಯನ್ನು ಆಧರಿಸಿ ಕೆಲ ಗಂಭೀರ ವಿಷಯಗಳನ್ನು ಉಲ್ಲೇಖಿಸಿದರು.

ನೈಸ್ ಸಂಸ್ಥೆಯ ಪೂರ್ಣ ಹೂಡಿಕೆಗೆ ಹೋಲಿಸಿದರೆ ಸುಮಾರು 40% ಮೊತ್ತವನ್ನಷ್ಟೇ ಹೂಡಿಕೆ ಮಾಡಲಾಗಿದೆ. ವಾರ್ಷಿಕ ಸುಮಾರು 730 ಕೋಟಿ ಮೊತ್ತವನ್ನು ಟೋಲ್ ರೂಪದಲ್ಲಿ ಸಂಗ್ರಹಿಸಲಾಗುತ್ತಿದೆ. ಈಗಾಗಲೇ ಸುಮಾರು 4,500 ಕೋಟಿ ಸಂಗ್ರಹಿಸಲಾಗಿದೆ. ಈ ಮೊತ್ತದಲ್ಲಿ ನಿರ್ವಹಣಾ ವೆಚ್ಚವೂ ಸೇರಿದೆ ಎಂದು ಕೆಲವರು ಹೇಳುತ್ತಾರೆ; ಆದರೆ ಒಪ್ಪಂದದ ಅವಧಿ 30 ವರ್ಷವಾಗಿದ್ದು, ನಿರ್ವಹಣೆಯೂ ಆ ಅವಧಿಯಲ್ಲಿ ನೈಸ್ ಕಂಪನಿಯ ಜವಾಬ್ದಾರಿ ಆಗಿರುತ್ತದೆ. ವರದಿ ಪ್ರಕಾರ ಆದಾಯವು ಹೂಡಿಕೆಯನ್ನು ಮೀರಿದೆ ಮತ್ತು ಹೂಡಿಕೆಗಿಂತ ಹೆಚ್ಚಿನ ಲಾಭ ಪಡೆದಿದ್ದಾರೆ ಎಂದು ಸಚಿವ ಕುಮಾರಸ್ವಾಮಿ ಅವರು ಆರೋಪಿಸಿದರು.

ಫಾಸ್ಟ್‌ಟ್ಯಾಗ್ ಅಳವಡಿಸುವ ಮೊದಲು ವಾರ್ಷಿಕ ಟೋಲ್ ಆದಾಯವನ್ನು 60–70 ಕೋಟಿ ಯಷ್ಟೆಂದು ಘೋಷಿಸಲಾಗುತ್ತಿತ್ತು.



2022ರಲ್ಲಿ ಫಾಸ್ಟ್‌ಟ್ಯಾಗ್ ಅಳವಡಿಸಿದ ಬಳಿಕ ಆ ಮೊತ್ತವು ಸುಮಾರು ರೂ.700 ಕೋಟಿಯೆಂದು ತೋರಿಸಲಾಗುತ್ತಿದೆ ಎಂದು ಈ ವರದಿ ಹೇಳುತ್ತದೆ. ಅಲ್ಲಿಗೆ ಫಾಸ್ಟ್‌ಟ್ಯಾಗ್ ಅಳವಡಿಕೆಗೆ ಮೊದಲು ಭಾರೀ ಪ್ರಮಾಣದ ಹಣ ಲೂಟಿಯಾಗಿದೆ ಎಂದೇ ಅರ್ಥ. ಈ ದೊಡ್ಡ ವ್ಯತ್ಯಾಸವು ಹಿಂದಿನ ಟೋಲ್ ಆದಾಯದ ಘೋಷಣೆ ಸುಳ್ಳು ಅಂಕಿ ಅಂಶಗಳಿಂದ ಕೂಡಿದೆ ಎಂಬುದು ತಿಳಿಯುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೂ ತಪ್ಪು ಮಾಹಿತಿ ನೀಡಲಾಗಿದೆ ಎಂಬುದು ಇದರಿಂದ ಸಾಬೀತಾಗುತ್ತದೆ ಎಂದು ಅವರು ದೂರಿದರು.

ಯೋಜನೆ ಒಳ್ಳೆಯದು, ದೇವೇಗೌಡರ ಕಾಲದಲ್ಲಿ ದೂರದೃಷ್ಟಿಯಿಂದ ಆರಂಭಿಸಿದ್ದು ಎಂದು ಹೇಳಿದ ಸಚಿವರು; ಮೈಸೂರುವರೆಗೆ ಕೆಲಸ ಮಾಡಲು ಯಾರು ತಡೆದರು ಎಂದು ಪ್ರಶ್ನಿಸಿದರು. ಒಪ್ಪಂದ ಮತ್ತು ಆದೇಶಗಳನ್ನು ಉಲ್ಲಂಘಿಸಿದ್ದು ಸರ್ಕಾರವೇ ಎಂದು ಆರೋಪಿಸಿದರು. ವರದಿಯ ಪ್ರಕಾರ, ನೇಮಕಾತಿ ದಿನಾಂಕದಿಂದ ಎಂಟು ವರ್ಷಗಳ ಅವಧಿಯಲ್ಲಿ ಕ್ಲೋವರ್ ಲೀಫ್‌ನಿಂದ ಬಿಡದಿವರೆಗಿನ ಎಕ್ಸ್‌ಪ್ರೆಸ್‌ವೇ ಕಾಮಗಾರಿಯಲ್ಲಿ ಕೇವಲ 20% ಕೆಲಸ ಪೂರ್ಣಗೊಂಡಿದೆ ಎಂದು ಅವರು ಹೇಳಿದರು. ಸರ್ಕಾರವೇ ನೇಮಿಸಿದ ಖಾಸಗಿ ಸಂಸ್ಥೆ ನೀಡಿರುವ ಈ ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು. ವರದಿ ಇರುವಾಗ ಸುಳ್ಳು ಹೇಳಿ ಜನರನ್ನು ಎಷ್ಟು ದಿನ ತಪ್ಪು ದಾರಿಗೆಳೆಯುತ್ತೀರಿ ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಈ ವಿಚಾರವನ್ನು ಮುಖ್ಯಮಂತ್ರಿ ಲಿಂಗಾಯತ ಸಮುದಾಯದ ವ್ಯಕ್ತಿಯೆಂಬ ಗುರುತಿನೊಂದಿಗೆ ಜೋಡಿಸಿ, ದೇವೇಗೌಡರು ಮತ್ತು ಕುಮಾರಸ್ವಾಮಿ ವಿರೋಧಿಸುತ್ತಿದ್ದಾರೆ ಎಂಬ ರೀತಿಯಲ್ಲಿ ಪ್ರಸ್ತಾಪಿಸಿರುವುದನ್ನು ಕೇಂದ್ರ ಸಚಿವರು ಟೀಕಿಸಿದರು.

ಯೋಜನೆ ಜಾರಿಗೆ ಸಂಬಂಧಿಸಿ ಜಾತಿ ಪ್ರಶ್ನೆಗೆ ಸಂಬಂಧಿಸಿದ್ದಲ್ಲ, ಒಪ್ಪಂದ ಮತ್ತು ಯೋಜನೆಯ ವಿಷಯಕ್ಕೆ ಸಂಬಂಧಿಸಿ ನಾನು ಪ್ರಸ್ತಾಪ ಮಾಡಿದ್ದೇನೆ. ಆದರೆ ನೈಸ್ ಗುತ್ತಿಗೆದಾರ ಜಾತಿಯ ಹೆಸರನ್ನು ಕವಚವಾಗಿ ಬಳಸುತ್ತಿದ್ದಾನೆ ಎಂದು ಅವರು ಹೇಳಿದರು.

ನೈಸ್ ಗುತ್ತಿಗೆದಾರ ಲಿಂಗಾಯತ ಸಮುದಾಯಕ್ಕೆ ಸೇರಿದವನು. ಅದಕ್ಕೆ ದೇವೇಗೌಡರು, ಕುಮಾರಸ್ವಾಮಿ ಸಹಿಸಲಿಲ್ಲ ಎಂದು ಮುಖ್ಯಮಂತ್ರಿ ಸೇರಿ ಕೆಲವರು ಹೇಳುತ್ತಿರುವುದು ಸರಿಯಲ್ಲ. ಅಕ್ರಮಗಳಿಗೂ ಜಾತಿಗೂ ಏನು ಸಂಬಂಧ ಎಂದು ಕೇಂದ್ರ ಸಚಿವರು ಪ್ರಶ್ನಿಸಿದರು.

# ಸ್ಟಿಂಗ್ ಆಪರೇಷನ್: ಖಾಸಗಿ ಸುದ್ದಿವಾಹಿನಿ ಮುಖ್ಯಸ್ಥನ ವಿಚಾರಣೆ

**ಬೆಂಗಳೂರು, ಅ.23:** ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ಸ್ಟಿಂಗ್ ಆಪರೇಷನ್ ಸಂಬಂಧ ಖಾಸಗಿ ಸುದ್ದಿವಾಹಿನಿಯ ಮುಖ್ಯಸ್ಥ ರಾಕೇಶ್ ಶೆಟ್ಟಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಟಿಂಗ್ ಕಾರ್ಯಾಚರಣೆ ಸಂಬಂಧ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸುತ್ತಿರುವ ಸಿಸಿಬಿಯ ಸೈಬರ್ ಅಪರಾಧ ಠಾಣೆ ಪೊಲೀಸರು ರಾಕೇಶ್ ಶೆಟ್ಟಿಯನ್ನು ನಿನ್ನೆ ವಿಚಾರಣೆ ನಡೆಸಿ ಮುಂದಿನ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೋಟೀಸ್ ಜಾರಿ ಮಾಡಿ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ.

ಈ ಬೆನ್ನಲ್ಲೇ ಬಂಧನ ಭೀತಿಯಿಂದ ರಾಕೇಶ್ ಶೆಟ್ಟಿ 66ನೇ ಸಿಸಿಎಚ್ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ನಿರೀಕ್ಷಣಾ ಜಾಮೀನು ಕುರಿತ ಆದೇಶ ಕಾಯ್ದಿರಿಸಲಾಗಿದೆ. ಸ್ಟಿಂಗ್ ಆಪರೇಷನ್ ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಮೈಸೂರಿನ ಖಾಸಗಿ ಹೋಟೆಲ್ ವೊಂದರಲ್ಲಿ ವಾಸ್ತವ್ಯ ಹೂಡಿದ್ದ ರಾಕೇಶ್‌ಶೆಟ್ಟಿ ಅವರನ್ನು ಪೊಲೀಸರು ಬುಧವಾರ ರಾತ್ರಿ ವಶಕ್ಕೆ ಪಡೆದು ನಿನ್ನೆ ಮುಂಜಾನೆ ನಗರಕ್ಕೆ ಕರೆತಂದು ವಿಚಾರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ.

ಪ್ರಕರಣ ಸಂಬಂಧ ಈಗಾಗಲೇ ಸೈಬರ್ ಠಾಣೆ ಪೊಲೀಸರು ಹಲವರನ್ನು ವಶಕ್ಕೆ ಪಡೆದು ವಿಚಾರಣೆ ಕೂಡಾ ನಡೆಸಿ ಮಾಹಿತಿಗಳನ್ನು ಕಲೆಹಾಕಿದ್ದಾರೆ. ವಿವಾದಾತಕ ಸ್ಟಿಂಗ್ ಕಾರ್ಯಾಚರಣೆ ವಿಡಿಯೋಗಳ ಹಿಂದೆ ದೊಡ್ಡ ರಾಜಕೀಯ ಪಿತೂರಿ ಇದೆ. ಸ್ಟಿಂಗ್ ಕಾರ್ಯಾಚರಣೆಯ ಪ್ರಮುಖ ಆರೋಪಿ ರಾಕೇಶ್ ಶೆಟ್ಟಿ ಬಂಧಿಸುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಗರ ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿ, ಪ್ರತಿಭಟನೆ ನಡೆಸಿ ಗಡುವು ಕೂಡಾ ನೀಡಿದ್ದರು. ವಿವಾದಿತ ವಿಡಿಯೋಗಳು ಹರಿದಾಡದಂತೆ ಬೆಂಗಳೂರು ನ್ಯಾಯಾಲಯ ಈಗಾಗಲೇ ಸುಮಾರು 42 ಮಾಧ್ಯಮ ಸಂಸ್ಥೆ ಹಾಗೂ ಡಿಜಿಟಲ್ ಫ್ಲ್ಯಾಟ್‌ಫಾರಂಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ.

# ಕೆಇಎ: ಇಂದಿನಿಂದ 27ರವರೆಗೆ ವಿವಿಧ ನೇಮಕಾತಿ ಪರೀಕ್ಷೆ, ಬಿಗಿ ಕ್ರಮ

**ಬೆಂಗಳೂರು,ಅ.23:** ಕಲ್ಯಾಣ ಕರ್ನಾಟಕ ವೃಂದದ ಭೂಮಾಪಕ, ಗ್ರಾಮ ಆಡಳಿತಾಧಿಕಾರಿ ಮತ್ತು ವಸತಿ ಶಾಲೆಗಳ ಶಿಕ್ಷಕರ ಹುದ್ದೆಗಳಿಗೆ ಅ.24 ಮತ್ತು 25 ಹಾಗೂ ಉಳಿಕೆ ಮೂಲ ವೃಂದದ ಇಎಸ್‌ಐ– ನರ್ಸಿಂಗ್ ಅಧಿಕಾರಿ, ಫಾರ್ಮಸಿ ಅಧಿಕಾರಿ ಸೇರಿದಂತೆ ಇತರ ಹುದ್ದೆಗಳ ಪರೀಕ್ಷೆಗಳನ್ನು ಅ.26 ಮತ್ತು 27ರಂದು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಇತರ ಎಲ್ಲ ನೇಮಕಾತಿ ಪರೀಕ್ಷೆಗಳಿಗೆ ಇರುವ ಹಾಗೆ ಈ ಪರೀಕ್ಷೆಗಳಿಗೂ ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ ಭೂಮಾಪಕ (190 ಹುದ್ದೆ), ಗ್ರಾಮ ಆಡಳಿತಾಧಿಕಾರಿ (67) ಹಾಗೂ ಸಮಾಜಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಶಿಕ್ಷಕ (40 ಹುದ್ದೆ), ಉಳಿಕ ಮೂಲ ವೃಂದದ ಇಎಸ್‌ಐ–ನರ್ಸಿಂಗ್ ಅಧಿಕಾರಿ (90), ಫಾರ್ಮಸಿ ಅಧಿಕಾರಿ (98), ವಸತಿ ಶಾಲೆಗಳ ಶಿಕ್ಷಕರ (100) ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಅವರು ವಿವರಿಸಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ ಪರೀಕ್ಷೆಗಳು ಬೆಂಗಳೂರು ಸೇರಿದಂತೆ ಎಂಟು ಜಿಲ್ಲೆಗಳ (ಬಳ್ಳಾರಿ, ಬೀದರ್, ಕಲ್ಬುರ್ಗಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ) ಒಟ್ಟು 237 ಕೇಂದ್ರಗಳಲ್ಲಿ ನಡೆಯಲಿವೆ. ಎಲ್ಲ ವಿವಿಧ ಪರೀಕ್ಷೆಗಳಿಗೂ ಸೇರಿ ಒಟ್ಟು 89,265 ಮಂದಿ ಪರೀಕ್ಷೆ ಬರೆಯಲಿದ್ದಾರೆ.

ಅ.26 ಮತ್ತು ಅ.27ರಂದು ನಡೆಯುವ ಉಳಿಕೆ ಮೂಲ ವೃಂದದ ಪರೀಕ್ಷೆಯನ್ನು ಬೆಂಗಳೂರು ಸೇರಿದಂತೆ ಬಳ್ಳಾರಿ, ಬೀದರ್, ಕಲ್ಬುರ್ಗಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ, ಧಾರವಾಡ ಮತ್ತು ದಾವಣಗೆರೆ ಜಿಲ್ಲೆಗಳ ಒಟ್ಟು 119 ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಎಲ್ಲ ಪರೀಕ್ಷೆಗೂ ಸೇರಿದಂತೆ ಒಟ್ಟು 48,767 ಮಂದಿ ಪರೀಕ್ಷೆ ಬರೆಯಲಿದ್ದಾರೆ ಎಂದು ಅವರು ವಿವರಿಸಿದ್ದಾರೆ.

ವೆಬ್ ಕಾಸ್ಟಿಂಗ್ ಮೂಲಕ ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪರೀಕ್ಷಾ ಉಸ್ತುವಾರಿಗಳಾಗಿರುತ್ತಾರೆ ಎಂದು ಅವರು ವಿವರಿಸಿದ್ದಾರೆ.

ಪರೀಕ್ಷಾ ಮುನ್ನಾ ದಿನವಾದ ಶುಕ್ರವಾರ ಕೆಇಎ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಮತ್ತು ಪರೀಕ್ಷಾ ನಿಯಂತ್ರಕಿ ಅರ್ಚನಾ ಅವರು ಎಲ್ಲ ಸಂಬಂಧಪಟ್ಟ ಜಿಲ್ಲೆಗಳ ಹೆಚ್ಚುವರಿ ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಿ ಪರೀಕ್ಷಾ ಸಿದ್ಧತೆಗಳನ್ನು ಪರಿಶೀಲಿಸಿದರು. ಅಕ್ರಮಗಳಿಗೆ ಅವಕಾಶ ಇಲ್ಲದಂತೆ ಪರೀಕ್ಷೆ ನಡೆಸಲು ಅವರು ಸೂಚನೆ ನೀಡಿದರು.



ಕಲಬುರಗಿಯಲ್ಲಿ ಶುಕ್ರವಾರ ನಡೆದ ವಿಧಾನ ಪರಿಷತ್‌ನ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸಿದರು.

**ಪುಲಕೇಶಿನಗರ ನಿರ್ಮಾಣ ಹಂತದ ಕಟ್ಟಡದಲ್ಲಿ ಸ್ಫೋಟ ಪ್ರಕರಣ**

# ಸ್ಫೋಟಕ್ಕೂ ಮುನ್ನ ಭದ್ರತಾ ಸಿಬ್ಬಂದಿಗೆ ಕರೆಮಾಡಿದ ಪಾರ್ಸಲ್ ಕಳುಹಿಸಿದ ವ್ಯಕ್ತಿಗಾಗಿ ಶೋಧ

**ಬೆಂಗಳೂರು, ಅ.23:** ಪುಲಕೇಶಿನಗರದ ನಿರ್ಮಾಣ ಹಂತದ ಕಟ್ಟಡದ ಸೆಕ್ಯೂರಿಟಿ ಗಾರ್ಡ್‌ಗೆ ಸ್ಫೋಟದ ಮುನ್ನ ಕರೆ ಮಾಡಿದ ಅನಾಮಧೇಯ ವ್ಯಕ್ತಿ ಹಾಗೂ ಸ್ಫೋಟಕಗಳನ್ನು ಪಾರ್ಸಲ್ ಕಳುಹಿಸಿದ ವ್ಯಕ್ತಿಗಾಗಿ ಪೂರ್ವ ವಿಭಾಗದ ಪೊಲೀಸರು ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಕಟ್ಟಡಕ್ಕೆ ಪಾರ್ಸಲ್ ಬಂದಿದೆ, ಅದನ್ನು ತೆಗೆದುನೋಡಿ ಎಂದು ಅನಾಮಧೇಯ ವ್ಯಕ್ತಿಯೊಬ್ಬ ಸೆಕ್ಯೂರಿಟಿ ಗಾರ್ಡ್‌ಗೆ ಕರೆ ಮಾಡಿ ತಿಳಿಸಿದ್ದಾನೆ.

ಅದರಂತೆ ಸೆಕ್ಯೂರ್ಯಿಟಿ ಗಾರ್ಡ್ ಮತ್ತು ಪೈಂಟರ್ ಪಾರ್ಸಲ್ ತೆರೆದಾಗ ಸ್ಫೋಟಗೊಂಡಿದೆ. ಪರಿಣಾಮ ಅವರಿಬ್ಬರೂ ಗಾಯಗೊಂಡಿದ್ದಾರೆ.

ಸೆಕ್ಯೂರಿಟಿ ಗಾರ್ಡ್‌ನನ್ನು ವಿಚಾರಣೆ ಗೊಳಪಡಿಸಿ ಕರೆ ಮಾಡಿದ ಅನಾಮಧೇಯ ವ್ಯಕ್ತಿ ಬಗ್ಗೆ ತಂಡವೊಂದು ಮಾಹಿತಿ ಪಡೆದು ಕೊಂಡು ಕಾರ್ಯಾಚರಣೇ ಕೈಗೊಂಡಿದೆ. ಮತ್ತೊಂದು ತಂಡ ಕಟ್ಟಡಕ್ಕೆ ಪಾರ್ಸಲ್ ಕಳುಹಿಸಿದ ವ್ಯಕ್ತಿಗಾಗಿ ತೀವ್ರ ಹುಡುಕಾಟ ನಡೆಸುತ್ತಿದೆ.



ಕರೆ ಮಾಡಿದ ಅನಾಮಧೇಯ ವ್ಯಕ್ತಿ, ಕಟ್ಟಡಕ್ಕೆ ಪಾರ್ಸಲ್ ಕಳುಹಿಸಿದ ವ್ಯಕ್ತಿ ಒಬ್ಬನೇ? ಅಥವಾ ಬೇರೆ ಬೇರೆ ಇದ್ದಾರೆಯೇ ಎಂಬ ಬಗ್ಗೆ ತಂಡಗಳು ಪರಿಶೀಲನೆ ನಡೆಸುತ್ತಿವೆ.

ಈ ಪ್ರಕರಣ ಭೇದಿಸಲು ರಚಿಸಲಾಗಿರುವ ಪೂರ್ವ ವಿಭಾಗದ ಐದು ವಿಶೇಷ ತಂಡಗಳು 100ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿ ಕಾರ್ಯಾಚರಣೆ ನಡೆಸಿದರೂ ನಿಖರ ಮಾಹಿತಿ ತಿಳಿದುಬಂದಿಲ್ಲ.

ಕಟ್ಟಡದ ಮಾಲೀಕ, ಗುತ್ತಿಗೆದಾರ ಅವರನ್ನೂ ಸಹ ವಿಶೇಷ ತಂಡಗಳು ವಿಚಾರಣೆ ಗೊಳಪಡಿಸಿ ಕೆಲವು ಮಾಹಿತಿ ಪಡೆದುಕೊಂಡಿದ್ದಾರೆ.

ಸ್ಫೋಟದಲ್ಲಿ ಯಾವ, ಯಾವ ರಾಸಾಯನಿಕ ವಸ್ತುಗಳನ್ನು ಬಳಸಲಾಗಿದೆ ಎಂಬುದರ ಬಗ್ಗೆ ತಿಳಿದುಕೊಳ್ಳಲು ಫ್ರೇಜರ್‌ಟೌನ್ ಠಾಣೆ ಪೊಲೀಸರು ಎಫ್‌ಎಸ್‌ಎಲ್ ವರದಿಗಾಗಿ ಕಾಯುತ್ತಿದ್ದಾರೆ. ಈ ಸ್ಫೋಟ ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಆಗಿದೆಯೇ ಅಥವಾ ದುಷ್ಕರ್ಮಿಗಳ ಕೃತ್ಯವೇ ಎಂಬಿತ್ಯಾದಿ ವಿವಿಧ ಆಯಾಮಗಳಲ್ಲಿ ತಂಡಗಳು ತನಿಖೆ ನಡೆಸುತ್ತಿವೆ.

# ಗೃಹಜ್ಯೋತಿ ಸಮೀಕ್ಷೆ ಪೂರ್ಣ ಗಡುವು ವಿಸ್ತರಣೆ ಸಾಧ್ಯತೆ ಇಲ್ಲ

**ಬೆಂಗಳೂರು, ಅ.23:** ಬೆಸ್ಕಾಂ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೃಹಜ್ಯೋತಿ ಫಲಾನುಭವಿಗಳ ಮನೆ–ಮನೆ ಸಮೀಕ್ಷೆಗೆ ನೀಡಿರುವ ಗಡುವು ಅಕ್ಟೋಬರ್ 31ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಗ್ರಾಹಕರು ಅಗತ್ಯ ದಾಖಲಾತಿಗಳನ್ನು ಬೆಸ್ಕಾಂ ಉಪ ವಿಭಾಗ ಕಚೇರಿಗೆ ಖುದ್ದಾಗಿ ತೆರಳಿ ಸಲ್ಲಿಸಲು ಬೆಸ್ಕಾಂ ವಿನಂತಿಸಿದೆ.

ಕಳೆದ ಮೂರುವರೆ ತಿಂಗಳಿನಿಂದ ನಡೆಯುತ್ತಿರುವ ಸಮೀಕ್ಷೆಯಲ್ಲಿ ಮನೆಗೆ ಬೀಗ ಹಾಕಿರುವ, ಮನೆ ಖಾಲಿ ಇರುವ ಹಾಗೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಗ್ರಾಹಕರಿಗೆ ಬೆಸ್ಕಾಂ ಕಚೇರಿಗೆ ತೆರಳಿ ದಾಖಲಾತಿ




ಸಲ್ಲಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದ್ದು, ಗಡುವಿನೊಳಗೆ ದಾಖಲಾತಿ ಸಲ್ಲಿಸಲು ಬೆಸ್ಕಾಂ ಮನವಿ ಮಾಡಿದ್ದು, ದಾಖಲಾತಿ ಸಲ್ಲಿಸಲು ಇದು ಕೊನೆಯ ಅವಕಾಶ ಎಂದು ಸ್ಪಷ್ಟಪಡಿಸಿದೆ.

ಬೆಸ್ಕಾಂನ 8 ಜಿಲ್ಲೆಗಳ ವ್ಯಾಪ್ತಿಯಲ್ಲಿ ಭಾಗ್ಯಜ್ಯೋತಿ, ಕುಟೀರಜ್ಯೋತಿ ಹಾಗೂ ಅಮೃತಜ್ಯೋತಿ ಯೋಜನೆಯ ಗ್ರಾಹಕರು ಸೇರಿದಂತೆ ಒಟ್ಟು 7429773 ಲಕ್ಷ ಗ್ರಾಹಕರು ಗೃಹ ಜ್ಯೋತಿ ಫಲಾನುಭವಿಗಳಿದ್ದು, ಈ ಪೈಕಿ 7317687 ಲಕ್ಷ ಗ್ರಾಹಕರ ಸಮೀಕ್ಷೆ (ಶೇ. 98.49) ಅಕ್ಟೋಬರ್ 22ಕ್ಕೆ ಪೂರ್ಣಗೊಂಡಿದೆ.

ಸಮೀಕ್ಷೆ ಸಂದರ್ಭದಲ್ಲಿ ಬೀಗ ಹಾಕಿರುವ, ಖಾಲಿ ಇರುವ ಮನೆಗಳಿಗೆ ಬೆಸ್ಕಾಂ ಸಿಬ್ಬಂದಿ ಮೂರು ಬಾರಿ ಭೇಟಿ ನೀಡಿದ್ದು, ಈ ವರ್ಗಗಳ ಗ್ರಾಹಕರ ಮೊಬೈಲ್‌ಗೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸಂದೇಶವನ್ನು ಕೂಡ ಕಳುಹಿಸಲಾಗಿತ್ತು. ಇಂತಹ ಗ್ರಾಹಕರಿಗೆ ದಾಖಲಾತಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನಾಂಕವಾಗಿದ್ದು, ಗಡುವು ವಿಸ್ತರಣೆ ಇಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

# ಎಸ್‌ಐಆರ್ ತಕ್ಷಣವೇ ರದ್ದುಗೊಳಿಸುವಂತೆ ಆಗ್ರಹಿಸಿ ವಿವಿಧ ಜನಪರ ಸಂಘಟನೆಗಳ ಹೋರಾಟ

**ಬೆಂಗಳೂರು,ಅ.23:** ದೇಶದ ಮತದಾರರ ಮೇಲೆ ಗ್ಯಾನೇಶ್ ಕುಮಾರ್ (ಚುನಾವಣಾ ಆಯೋಗ) ಹೇರಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣವೇ ರದ್ದುಗೊಳಿಸಬೇಕು, ಮತಪಟ್ಟಿ ಪರಿಷ್ಕರಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬೆಂಗಳೂರಿನಲ್ಲಿ ವಿವಿಧ ಜನಪರ ಸಂಘಟನೆಗಳು ಜಂಟಿಯಾಗಿ ಬೃಹತ್ ಪ್ರತಿಭಟನೆ ನಡೆಸಿವೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ಮತ್ತು ಹೋರಾಟಗಳಿಗೆ ನಿಷೇಧ ಹೇರಿರುವುದನ್ನು ತೀವ್ರವಾಗಿ ಖಂಡಿಸಿರುವ ಪ್ರತಿಭಟನಾಕಾರರು, ಎಲ್ಲೆಲ್ಲೂ ಜಂತರ್ ಮಂತರ್ ಘೋಷಣೆಯ ಅಡಿಯಲ್ಲಿ ಬೆಂಗಳೂರಿನ ಟೌನ್‌ಹಾಲ್‌ನಿಂದ ಫ್ರೀಡಂ ಪಾರ್ಕ್‌ವರೆಗೆ ಜನತಾ ಮೆರವಣಿಗೆ ನಡೆಸಿದ್ದಾರೆ. ಈ ಐಕ್ಯ ಹೋರಾಟದಲ್ಲಿ ದಲಿತ, ರೈತ, ಕಾರ್ಮಿಕ, ವಿದ್ಯಾರ್ಥಿ, ಮಹಿಳಾ, ಅಲ್ಪಸಂಖ್ಯಾತ ಹಾಗೂ ಪ್ರಗತಿಪರ ಸಂಘಟನೆಗಳ ನೂರಾರು ಕಾರ್ಯ ಕರ್ತರು ಕೈಯಲ್ಲಿ ರಾಷ್ಟ್ರಧ್ವಜಗಳನ್ನು ಹಿಡಿದು ಹೆಜ್ಜೆ ಹಾಕಿದ್ದಾರೆ. ಎಸ್‌ಐಆರ್ ಪ್ರಕ್ರಿಯೆಯು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಕಂಟಕವಾಗಿದೆ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗದಲ್ಲಿ ನಡೆದಿರುವ ಅಕ್ರಮಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಮತ್ತು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವ ಹೊಸ ಚುನಾವಣಾ ಆಯೋಗವನ್ನು ಮರುರಚನೆ ಮಾಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಪ್ರಸ್ತುತ ದೆಹಲಿ ಸೇರಿದಂತೆ ದೇಶದ ನಾನಾ ಭಾಗಗಳಲ್ಲಿ ಎಸ್‌ಐಆರ್ ವಿರುದ್ಧ ಸೃಷ್ಟಿಯಾಗಿರುವ ಹೋರಾಟದ ಅಲೆಗೆ ಕರ್ನಾಟಕದ ಜನಪರ ಸಂಘಟನೆಗಳೂ ಕೈಜೋಡಿಸಿವೆ. ಚುನಾವಣಾ ಆಯೋಗದ ಪ್ರಸ್ತುತ ಕಾರ್ಯ ವೈಖರಿಯ ಬಗ್ಗೆ ಸಾರ್ವಜನಿಕವಾಗಿ ಎದ್ದಿರುವ ಗಂಭೀರ ಆರೋಪಗಳಿಗೆ ಸೂಕ್ತ ಸಮಜಾಯಿಷಿ ನೀಡಬೇಕು, ಗ್ಯಾನೇಶ್ ಕುಮಾರ್ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಹಾಗೂ ಪ್ರಜೆಗಳ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸಬೇಕು? ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ನನ್ನ ಮತ ನನ್ನ ಹಕ್ಕು ವೇದಿಕೆಯ ಕಾರ್ಯಕರ್ತರು ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳಾದ ಇನ್‌ಫ್ಯಾಂಟ್ರಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಯಲ್ಲಿರುವ ಯುದ್ಧ ಸ್ಮಾರಕದ ಬಳಿ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ಪ್ರಜೆಯ ಮತದಾನದ ಹಕ್ಕನ್ನು ರಕ್ಷಿಸುವುದು ಅತ್ಯಂತ ಅಗತ್ಯವಾಗಿದ್ದು,




ಸಂವಿಧಾನ ನೀಡಿರುವ ಶಾಂತಿಯುತ ಪ್ರತಿಭಟನೆಯ ಹಕ್ಕನ್ನು ಹತ್ತಿಕ್ಕುವುದು ಒಪ್ಪಿಕೊಳ್ಳಲಾಗದ ನಡವಳಿಕೆಯಾಗಿದೆ ಎಂದು ಹೋರಾಟಗಾರರು ಪ್ರತಿಪಾದಿಸಿದ್ದಾರೆ.

# ಕೇಂದ್ರ ಜನಗಣತಿ ಹಿನ್ನೆಲೆ: ಪಿಯುಸಿ, ಎಸ್.ಎಸ್.ಎಲ್.ಸಿ, ಪರೀಕ್ಷೆ ವಿಳಂಬ ಸಾಧ್ಯತೆ

**ರಾಜ್ಯ ಶಿಕ್ಷಣ ಇಲಾಖೆಗೆ ಕೇಂದ್ರ ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯ ಪತ್ರ**

**ಬೆಂಗಳೂರು, ಅ.23:** ಕೇಂದ್ರ ಸರ್ಕಾರದ ಜನಗಣತಿ ಕಾರ್ಯದ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಗಳ ವೇಳಾಪಟ್ಟಿಯಲ್ಲಿ ಬದಲಾವಣೆ ಯಾಗುವ ಸಾಧ್ಯತೆ ಇದೆ. ಫೆಬ್ರವರಿ–ಮಾರ್ಚ್ ಅವಧಿಯಲ್ಲಿ ನಡೆಯಲಿರುವ ಪರೀಕ್ಷೆಗಳನ್ನು ಮುಂದೂಡುವಂತೆ ಕೇಂದ್ರ ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯವು ರಾಜ್ಯದ ಶಾಲಾ ಶಿಕ್ಷಣ ಇಲಾಖೆಗೆ ಪತ್ರ ಬರೆದಿದೆ. ಆದರೆ, ಪರೀಕ್ಷೆಗಳ ಮುಂದೂಡಿಕೆ ಕುರಿತು ರಾಜ್ಯ ಸರ್ಕಾರ ಅಥವಾ ಪರೀಕ್ಷಾ ಮಂಡಳಿಯಿಂದ ಅಧಿಕೃತ ಅಂತಿಮ ನಿರ್ಧಾರ ಪ್ರಕಟವಾಗಿಲ್ಲ.

ಕೇಂದ್ರದ ಜನಗಣತಿ ಕಾರ್ಯದ ಎರಡನೇ ಹಂತವು 2027ರ ಜನವರಿ 25ರಿಂದ ಫೆಬ್ರವರಿ 28ರವರೆಗೆ ನಡೆಯಲಿದ್ದು, ಮಾರ್ಚ್ 1ರಿಂದ 5ರವರೆಗೆ ಪರಿಷ್ಕರಣಾ ಕಾರ್ಯ ಕೈಗೊಳ್ಳುವ ಉದ್ದೇಶವಿದೆ. ಈ ಸಂದರ್ಭದಲ್ಲಿ ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾಗಬಹುದು. ಇದರಿಂದ ಪರೀಕ್ಷೆಗಳ ಸಿದ್ಧತೆ, ಸಿಬ್ಬಂದಿಯ ನಿಯೋಜನೆ ಮತ್ತು ಪರೀಕ್ಷಾ ಕೇಂದ್ರಗಳ ನಿರ್ವಹಣೆಯಲ್ಲಿ ತೊಂದರೆ ಉಂಟಾಗುವ ಸಾಧ್ಯತೆಯನ್ನು ಪರಿಗಣಿಸಿ ವೇಳಾಪಟ್ಟಿ ಬದಲಾವಣೆಗೆ ಮನವಿ ಮಾಡಲಾಗಿದೆ.

ಜನಗಣತಿ ಕಾರ್ಯದ ಅಗತ್ಯತೆ ಮತ್ತು ಪರೀಕ್ಷೆಗಳ ಸುಗಮ ನಿರ್ವಹಣೆಯನ್ನು ಸಮನ್ವಯಗೊಳಿಸುವ ಉದ್ದೇಶದಿಂದ ವೇಳಾಪಟ್ಟಿ ಬದಲಾವಣೆಗೆ ಮನವಿ ಮಾಡಲಾಗಿದೆ. ಶಾಲಾ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಈ ಕುರಿತು ಪರಿಶೀಲನೆ ನಡೆಸಿ ಅಂತಿಮ ನಿರ್ಧಾರ ಕೈಗೊಂಡ ಬಳಿಕವೇ ಹೊಸ ವೇಳಾಪಟ್ಟಿ ಪ್ರಕಟವಾಗುವ ನಿರೀಕ್ಷೆಯಿದೆ.

ಜನಗಣತಿ ಕಾರ್ಯದ ಹಿನ್ನೆಲೆಯಲ್ಲಿ 2027ರ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳ ದಿನಾಂಕ ಬದಲಾಗುವ ಸಾಧ್ಯತೆ ಚರ್ಚೆಯಲ್ಲಿದ್ದರೂ, ಅಧಿಕೃತ ಆದೇಶ ಹೊರಬೀಳುವವರೆಗೆ ಪರೀಕ್ಷೆಗಳ ಮುಂದೂಡಿಕೆ ಖಚಿತವಾಗಿಲ್ಲ. ಪ್ರಸ್ತುತ ಜನಗಣತಿ ಕರ್ತವ್ಯಕ್ಕೆ ಶಿಕ್ಷಕರೇ ಪ್ರಮುಖ ಆಧಾರವಾಗಿರುವುದರಿಂದ, ಪರೀಕ್ಷೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗೆ ಯಾವುದೇ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಲು ಇಲಾಖೆ ಚಿಂತನೆ ನಡೆಸಿದೆ. ಶೀಘ್ರದಲ್ಲೇ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದ್ದು, ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪೋಷಕರು ಹೊಸ ಅಧಿಕೃತ ಪ್ರಕಟಣೆಗಾಗಿ ಎದುರು ನೋಡುತ್ತಿದ್ದಾರೆ.

**ಬೋರ್ಡ್ ಬಿಡುಗಡೆ ಮಾಡಿರುವ ತಾತ್ಕಾಲಿಕ ವೇಳಾಪಟ್ಟಿ:**

ಎಸ್‌ಎಸ್‌ಎಲ್‌ಸಿ ಪರೀಕ್ಷೆ 1– 2027 ಮಾರ್ಚ್ 22 ರಿಂದ ಏಪ್ರಿಲ್ 5ರವರೆಗೆ ಪರೀಕ್ಷೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ 2–2027 ಮೇ 24 ರಿಂದ ಮೇ 31ರವರೆಗೆ ಪರೀಕ್ಷೆ.

2ನೇ ಪಿಯುಸಿ ಪರೀಕ್ಷೆ 1– 2027 ಫೆಬ್ರವರಿ 27 ರಿಂದ ಮಾರ್ಚ್ 17.

2ನೇ ಪಿಯುಸಿ ಪರೀಕ್ಷೆ 2– 2027 ಮೇ 3 ರಿಂದ ಮೇ 15.




### ಬೀದರ್ ಹಿರೇಮಠ ಸಂಸ್ಥಾನದಲ್ಲಿ ಮರಣವೇ ಮಹಾ ನವಮಿ

# ಶರಣರ ತ್ಯಾಗ, ಬಲಿದಾನ ಮರೆಯಲು ಅಸಾಧ್ಯ: ಡಾ.ಬಸವಲಿಂಗ ಪಟ್ಟದ್ದೇವರು

**ಬೀದರ, ಅ. 23:** ವಚನ ಸಾಹಿತ್ಯ ರಕ್ಷಣೆಗೆ ಶರಣರು ತಮ್ಮ ಪ್ರಾಣ ಸಮರ್ಪಿಸಿದ್ದಾರೆ. ಕಲ್ಯಾಣದಿಂದ ಉಳವಿಯವರೆಗೆ ವಚನ ಕಟ್ಟುಗಳು ಹೊತ್ತುಕೊಂಡು ಹೋರಾಡಿ ವಚನ ಸಾಹಿತ್ಯ ಉಳಿಸಿದ ಶರಣರ ತ್ಯಾಗ, ಬಲಿದಾನ ಮರೆಯಲು ಸಾಧ್ಯವಿಲ್ಲ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ನಾಡೋಜ ಡಾ.ಬಸವ ಲಿಂಗ ಪಟ್ಟದ್ದೇವರು ಹೇಳಿದರು.

ಹಿರೇಮಠ ಸಂಸ್ಥಾನದಲ್ಲಿ ಮರಣವೇ ಮಹಾನವಮಿ, ಕಲ್ಯಾಣ ಕ್ರಾಂತಿ ವಿಜಯೋತ್ಸವ ನಿಮಿತ್ತ ನಡೆದ ವಚನ ಸಾಹಿತ್ಯ ಪಲ್ಲಕ್ಕಿ ಪೂಜೆಯ ಸಾನ್ನಿಧ್ಯ ವಹಿಸಿ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಮಹಾಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಸಿದ್ಧಬಸವ



ಸ್ವಾಮೀಜಿ, ಸುಭಾಷ ಕಾರಾಮುಂಗೆ, ಕಿರಣ ಖಂಡ್ರೆ, ಬಸವರಾಜ ಮರೆ, ರಾಜಕುಮಾರ ಹೊಸದೊಡ್ಡೆ, ಸಂತೋಷ ಬಿ.ಜಿ.ಪಾಟೀಲ, ಮಲ್ಲಮ್ಮ ಆರ್.ಪಾಟೀಲ, ಸುನೀಲ ಹೊನ್ನಾಳೆ, ರಾಜು ಜುಬರೆ, ದೀಪಕ ಠಮಕೆ ಸೇರಿದಂತೆ ಇತರರು ಇದ್ದರು.

ಕಮಲನಗರ ತಾಲ್ಲೂಕಿನ ಡಿಗ್ಗಿ ಗ್ರಾಮದಲ್ಲಿ ಮಂಗಳವಾರ ಬನ್ನಿ ವಿನಿಮಯ ಮಾಡಿಕೊಳ್ಳುವ ಮೂಲಕ ವಿಜಯದಶಮಿ ಹಬ್ಬ ಸಂಭ್ರಮದಿಂದ ಆಚರಿಸಲಾಯಿತು.

ಮಡಿವಾಳೇಶ್ವರ ದೇವಸ್ಥಾನದಿಂದ ಆರಂಭಗೊಂಡ ಸಿಲಂಗಡಿ ಮೆರವಣಿಗೆಗೆ ಮುಖಂಡ ವಿಜಯಕುಮಾರ ಪಾಟೀಲ ಚಾಲನೆ ನೀಡಿದರು.

ನಂತರ ಗ್ರಾಮದ ಹೊರವಲಯದ ಸಿದ್ದೇಶ್ವರ ದೇವಸ್ಥಾನದ ಸಮೀಪವಿರುವ ಬಾಬುರಾವ್ ಹರಪಾಳೆ ಅವರ ಜಮೀನಿನಲ್ಲಿಯ ಬನ್ನಿಗಿಡಕ್ಕೆ ಪೂಜೆ ಸಲ್ಲಿಸಿ, ಪರಸ್ಪರ ಬನ್ನಿ ವಿನಿಮಯ ಮಾಡಿಕೊಳ್ಳಲಾಯಿತು.

ಮಕ್ಕಳು ಹೊಸ ಉಡುಪು ಧರಿಸಿ ಪರಸ್ಪರ ಶುಭ ಕೋರಿದರು. ರಾತ್ರಿ ವೇಳೆ ಬಂಧು–ಮಿತ್ರರ ಮನೆಗೆ ತೆರಳಿ ಬನ್ನಿ ನೀಡಿ ಆಶೀರ್ವಾದ ಪಡೆದರು.



ಯುನೆಸ್ಕೋದ ಉನ್ನತಮಟ್ಟದ ಪರಿಶೀಲನಾ ತಂಡವು ಶನಿವಾರ ಹಂಪಿಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಸ್ವಚ್ಛತಾ ಕಾರ್ಯ ನಡೆಯುತ್ತಿದೆ ಜಾಗತಿಕ ಪರಂಪರೆ ತಜ್ಞರು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಒಳಗೊಂಡ 30 ಸದಸ್ಯರ ಈ ನಿಯೋಗವು, ಅಕ್ಟೋಬರ್ 29 ರವರೆಗೆ ಈ ಐತಿಹಾಸಿಕ ತಾಣದ ಸಮಗ್ರ ಮೌಲ್ಯಮಾಪನ ನಡೆಸಲಿದೆ.

# ಗ್ರಾಮೀಣ ಸೊಗಡಿನ ಗಾಯಕನಿಗೆ ಜಾನಪದ ಅಕಾಡೆಮಿ ಗರಿ

**ಬೀದರ್, ಅ. 23:** ಗ್ರಾಮೀಣ ಸೊಗಡಿನ ಗಾಯಕ, ಸುಗ್ಗಿ ಕುಣಿತವನ್ನು ಜೀವಂತವಾಗಿರಿಸಲು ಅವಿರತ ಶ್ರಮಿಸುತ್ತಿರುವ ದೇವದಾಸ ಚಿಮಕೋಡ್ ಅವರು ಕರ್ನಾಟಕ ಜಾನಪದ ಅಕಾಡೆಮಿಯ ಪ್ರಸಕ್ತ ಸಾಲಿನ ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಅಂದಹಾಗೆ, ದೇವದಾಸ ಅವರಿಗೆ ಪ್ರಶಸ್ತಿ ಹೊಸತಲ್ಲ. ಈಗಾಗಲೇ ಅವರ ಜೋಳಿಗೆಯಲ್ಲಿ ಅನೇಕ ಪ್ರಶಸ್ತಿಗಳಿವೆ. ಅದರಲ್ಲಿ ಅಕಾಡೆಮಿ ಪ್ರಶಸ್ತಿ ಹೊಸತು ಸೇರ್ಪಡೆ.

1970ರ ಜೂನ್ 1ರಂದು ಹಣಮಂತ ಮತ್ತು ನರಸಮ್ಮ ಎಂಬ ಕೃಷಿಕರ ಊರಾದ ತಾಲ್ಲೂಕಿನ ಚಿಮಕೋಡ್ ಗ್ರಾಮದಲ್ಲಿ ಜನಿಸಿದ ದೇವದಾಸ, ಅವರ ಸುತ್ತಮುತ್ತಲಿನ ಪರಿಸರದ ಮೂಲಕ ಜಾನಪದ ಹಾಡುಗಳ ಗಾಯನ ಕರಗತ ಮಾಡಿಕೊಂಡರು. ಅದರಲ್ಲೇ ಹೆಚ್ಚು ಆಸಕ್ತಿ, ಸಮಯ ವ್ಯಯಿಸಿ ತೊಡಗಿಸಿಕೊಂಡಿದ್ದರಿಂದ ಗಾಯಕರಾದರು.

ಜಾನಪದ ಗೀತೆಗಳ ಗಾಯನದೊಂದಿಗೆ ಸುಗ್ಗಿ ಕುಣಿತ, ತಮಟೆ, ಹಲಗೆ ಬಾರಿಸುವ ಕಲೆ ಕರಗತ ಮಾಡಿಕೊಂಡಿದ್ದಾರೆ. ರಾಜ್ಯ, ರಾಷ್ಟ್ರಾದ್ಯಂತ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜಾನಪದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವ ಹಿರಿಮೆ ದೇವದಾಸ ಅವರಿಗಿದೆ. ಅನೇಕ ತಮಟೆ, ಹಲಗೆ ಬಾರಿಸುವ ತರಬೇತಿಯೂ ನೀಡಿದ್ದಾರೆ.ಹೆಸರಾಂತ ಜಾನಪದ ಕಲಾವಿದರಾದ ಅಪ್ಪಗೆರೆ ತಿಮ್ಮರಾಜು, ಪಿಚ್ಚಳ್ಳಿ ಶ್ರೀನಿವಾಸ, ಮಂಜಮ್ಮ ಜೋಗತಿ, ಗೊಲ್ಲಹಳ್ಳಿ ಶಿವಪ್ರಸಾದ, ಟಾಕಪ್ಪ ಟೂಕಪ್ಪಾ



ಸೇರಿದಂತೆ ಅನೇಕರೊಂದಿಗೆ ವೇದಿಕೆ ಹಂಚಿಕೊಂಡು, ಕಲೆ ಪ್ರದರ್ಶಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ತೆಲಂಗಾಣದ ಹೈದರಾಬಾದ್ ನಿವಾಸದಲ್ಲಿ ಏರ್ಪಡಿಸಿದ್ದ ಜಾನಪದ ಉತ್ಸವದಲ್ಲೂ ಕಲೆ ಪ್ರಸ್ತುತಪಡಿಸಿ, ಸೈ ಅನಿಸಿಕೊಂಡಿದ್ದಾರೆ. ಆರಂಭದಲ್ಲಿ ಇವರು ಸಂಪೂರ್ಣ ಸಾಕ್ಷರತಾ ಕಲಾಜಾಥಾ ತಂಡದೊಂದಿಗೆ ನಾಡಿನಾದ್ಯಂತ ಸಂಚರಿಸಿದ್ದರು. ಆನಂತರ ಕಲಾಸೇವೆಗೆ ಹೊರಳಿದರು. ಈಗಲೂ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರ ಶ್ರಮಕ್ಕೆ ಫಲವೂ ಸಿಕ್ಕಿದೆ. ಸಾಕ್ಷರತಾ ಅನುಷ್ಠಾನ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಸಂಗೀತರತ್ನ ಪ್ರಶಸ್ತಿ, ಸಂಗೀತ ಗಂಗೋತ್ರಿ ಸೇರಿದಂತೆ ಅನೇಕ ಪ್ರಶಸ್ತಿಗಳು ಒಲಿದಿವೆ. ಈಗ ಜಾನಪದ ಅಕಾಡೆಮಿಯ ಗರಿ.

**ಮಂಡ್ಯದಲ್ಲಿ ಪ್ರಶಸ್ತಿ ಪ್ರದಾನ:** ಮಂಡ್ಯದಲ್ಲಿ ಅಕ್ಟೋಬರ್ ತಿಂಗಳಾಂತ್ಯದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದ್ದು, ಅಲ್ಲಿ ದೇವದಾಸ ಚಿಮಕೋಡ್ ಅವರಿಗೂ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿಯು 25 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಮಾಣಪತ್ರ ಒಳಗೊಂಡಿದೆ ಎಂದು ಅಕಾಡೆಮಿ ಮೂಲಗಳು ತಿಳಿಸಿವೆ.

ವಿಜಯಕುಮಾರ ಸೋನಾರೆ ಸದಸ್ಯ, ಕರ್ನಾಟಕ ಜಾನಪದ ಅಕಾಡೆಮಿ 35 ವರ್ಷಗಳಿಂದ ನಿರಂತರ ವಾಗಿ ಜಾನಪದ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ದೇವದಾಸ ಚಿಮಕೋಡ್ ಅವರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ ಸಂದಿರುವುದು ಖುಷಿಯ ವಿಚಾರ.

ನಿಜವಾದ ಪ್ರತಿಭೆಗೆ ಒಲಿದ ಬಹುಮಾನ ಇದು ದೇವದಾಸ ಚಿಮಕೋಡ್‌ಜಾನಪದ ಗಾಯಕಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಜಾನಪದ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಿಷ್ಠಾವಂತ ನಿಜ ಕಲಾವಿದರಿಗೆ ಇಂದಿನ ಕಾಲದಲ್ಲಿ ಪ್ರಶಸ್ತಿ ಸಿಗುವುದು ಕಷ್ಟ. ನನ್ನನ್ನು ಗುರುತಿಸಿರುವುದಕ್ಕೆ ಬಹಳ ಖುಷಿಯಾಗಿದೆ.

### ಕೆಇಎ ಪರೀಕ್ಷೆ: ಬಳ್ಳಾರಿಯಲ್ಲಿ ಕೇಂದ್ರಗಳ ಸುತ್ತ ಕಣ್ಗಾವಲು

# 200 ಮೀಟರ್ ನಿಷೇಧಾಜ್ಞೆ ಜಾರಿ- ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್

**ಬಳ್ಳಾರಿ,ಅ.23.**ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಲಿರುವ ವಿವಿಧ ಇಲಾಖೆಗಳ ನೇಮಕಾತಿ ಪರೀಕ್ಷೆಗಳ ಹಿನ್ನೆಲೆಯಲ್ಲಿ, ಬಳ್ಳಾರಿ ನಗರದ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಅವರು ಆದೇಶ ಹೊರಡಿಸಿದ್ದಾರೆ.

ಅಕ್ಟೋಬರ್ 24 ರಿಂದ 27 ರವರೆಗೆ ಸಮಾಜ ಕಲ್ಯಾಣ ಇಲಾಖೆ, ಇಎಸ್‌ಐಸಿ ವೈದ್ಯಕೀಯ ಸೇವೆಗಳ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿನ ವಿವಿಧ ಹುದ್ದೆಗಳ ನೇರ ನೇಮಕಾತಿ



ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷೆಗಳು ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ನಡೆಯಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ರ ಕಲಂ 163 ರ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳು ಹಾಗೂ ಸೈಬರ್ ಕೆಫೆ / ಇಂಟರ್‌ನೆಟ್ ಸೆಂಟರ್‌ಗಳನ್ನು ಕಡ್ಡಾಯವಾಗಿ ಮುಚ್ಚಲು ಆದೇಶಿಸಲಾಗಿದೆ.

ನಿಷೇಧಿತ ವ್ಯಾಪ್ತಿಯಲ್ಲಿ ಅನಧಿಕೃತ ವ್ಯಕ್ತಿಗಳು ಹಾಗೂ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ನಿಯಮಗಳು ಪರೀಕ್ಷಾ ಕಾರ್ಯದಲ್ಲಿ ನಿಯೋಜನೆಗೊಂಡಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

# ಗೃಹ ಸಚಿವರ ತವರಲ್ಲಿ ರಸ್ತೆ ಕಾಮಗಾರಿಗಾಗಿ ಎರಡು ಗುಂಪುಗಳ ಮಾರಾಮಾರಿ, ಹಲವರಿಗೆ ಗಾಯ



**ಕಲಬುರಗಿ, ಅ. 23:** ರಸ್ತೆ ಕಾಮಗಾರಿ ವಿಚಾರವಾಗಿ ಉಂಟಾದ ಜಗಳ ಮಾತಿಗೆ ಮಾತು ಬೆಳೆದು ಎರಡು ಗುಂಪುಗಳ ನಡುವೆ ಮಾರಾಮಾರಿಗೆ ಕಾರಣವಾದ ಘಟನೆ ರಾಜ್ಯದ ಗೃಹ ಸಚಿವರ ತವರು ಕ್ಷೇತ್ರ ಚಿತ್ತಾಪುರ ತಾಲೂಕಿನ ರಾಂಪುರಹಳ್ಳಿಯಲ್ಲಿ ನಡೆದಿರುವುದು ವರದಿಯಾಗಿದೆ. ಎರಡು–ಮೂರು ದಿನಗಳ ಹಿಂದೆ ನಡೆದ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಗಲಾಟೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ರಸ್ತೆ ಕಾಮಗಾರಿ ಕುರಿತು ಎರಡು ಗುಂಪುಗಳ ನಡುವೆ ಆರಂಭವಾದ ವಾಗ್ವಾದ ಬಳಿಕ ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಎರಡೂ ಗುಂಪಿನವರು ದೊಣ್ಣೆಗಳಿಂದ ಪರಸ್ಪರ ಹಲ್ಲೆ ನಡೆಸಿಕೊಂಡಿದ್ದಾರೆ. ಈ ವೇಳೆ ಹಲವರಿಗೆ ಗಾಯಗಳಾಗಿದ್ದು, ಗಾಯಾಳುಗಳನ್ನು ಕಲಬುರಗಿಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ವೇಳೆ ಸ್ಥಳೀಯರು ತಮ್ಮ ಮೊಬೈಲ್‌ನಲ್ಲಿ ದೃಶ್ಯಗಳನ್ನು ಸೆರೆ ಹಿಡಿದಿದ್ದು, ಇದೀಗ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಘಟನೆಗೆ ಸಂಬಂಧಿಸಿದಂತೆ ವಾಡಿ ಪೊಲೀಸ್ ಠಾಣೆಯಲ್ಲಿ ಎರಡೂ ಗುಂಪುಗಳ ಪರವಾಗಿ ದೂರು ಹಾಗೂ ಪ್ರತಿದೂರು ದಾಖಲಾಗಿದ್ದು, ಪೊಲೀಸರು ಪ್ರಕರಣದ ಕುರಿತು ತನಿಖೆ ನಡೆಸುತ್ತಿದ್ದಾರೆ.

# ಸುರಕ್ಷಿತ ಚಾಲನೆ: ವಾಹನ ಸವಾರರಿಗೆ ಸಾರಿಗೆ ಅಧಿಕಾರಿ ಕರೆ



**ಬೀದರ್, ಅ. 23:** ಅತಿವೇಗದಿಂದ ವಾಹನಗಳನ್ನು ಓಡಿಸುವುದರಿಂದಲೇ ಅಪಘಾತಗಳು ಸಂಭವಿಸುತ್ತಿವೆ. ಕಡಿಮೆ ವೇಗದಲ್ಲಿ ಸುರಕ್ಷಿತವಾಗಿ ವಾಹನಗಳನ್ನು ಓಡಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎಂ.ಡಿ. ಜಾಫರ್ ಸಾದಿಕ್ ಸಲಹೆ ನೀಡಿದ್ದಾರೆ.

ವಾಹನ ಚಾಲನೆ ಮಾಡುವಾಗ ರಸ್ತೆ ಅಪಘಾತವಾದಲ್ಲಿ ಬಸ್ ಚಾಲಕನ ಡ್ರೈವಿಂಗ್ ಲೈಸನ್ಸ್ 90 ದಿನಗಳವರೆಗೆ ಅಮಾನತು ಮಾಡಬಹುದು. ರಸ್ತೆ ಅಪಘಾತದಲ್ಲಿ ಗಾಯಾಳು ವ್ಯಕ್ತಿ ಆಸ್ಪತ್ರೆಗೆ ದಾಖಲಾದರೆ ರಾಹವೀರ ಸ್ಕೀಮ್ ನಲ್ಲಿ 25,000 ನಗದು ನೀಡಲಾಗುವುದು. ಆಸ್ಪತ್ರೆಗೆ ಸೇರಿಸಿದವರ ವಿರುದ್ಧ ಯಾವುದೇ ಪ್ರಕರಣ ದಾಖಲಿಸುವುದಿಲ್ಲ. ತನಿಖೆಯೂ ನಡೆಯುವುದಿಲ್ಲ. ಸಾರ್ವಜನಿಕರು ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲು ಹಿಂದೇಟು ಹಾಕಬಾರದು. ನಿಗದಿತ ಸ್ಥಳದಲ್ಲಿ ಬಸ್‌ಗಳನ್ನು ನಿಲ್ಲಿಸಬೇಕು. ರಸ್ತೆಯ ಮೇಲೆ ಒಂದು ವೇಳೆ ಬಸ್ ನಿಲ್ಲಿಸಿದರೆ ಅರ್ಧಬಸ್ ರಸ್ತೆಯ ಕೆಳಗಡೆ ನಿಲ್ಲಿಸಬೇಕು. ವಾಹನವನ್ನು ರಾಂಗ್ ಸೈಡ್ ಚಲಾಯಿಸುವುದರಿಂದ ಅಪಘಾತಗಳಾಗುತ್ತವೆ.

ಮೋಟಾರು ವಾಹನ ನಿರೀಕ್ಷಕ ಟಿ. ಪುರಂದರದಾಸ ಮಾತನಾಡಿ, ಬಸ್ ಚಾಲಕರು 30 ನಿಮಿಷ ಮುಂಚಿತವಾಗಿ ಕೆಲಸಕ್ಕೆ ಹಾಜರಾಗ ಬೇಕು. ವಾಹನ ತೆಗೆಯುವ ಮೊದಲು ವಾಹನದ ಲೈಟು, ಎಂಜಿನ್ ಆಯಿಲ್, ಕುಲೆಂಟ್ ಸೇರಿದಂತೆ ಎಲ್ಲವನ್ನೂ ಪರಿಶೀಲಿಸಿ ವಾಹನವನ್ನು ರಸ್ತೆಗೆ ಇಳಿಸಬೇಕು ಎಂದು ಸಲಹೆ ನೀಡಿದರು. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಂದ್ರ ಜಾಧವ್ ಮಾತನಾಡಿ, ರಸ್ತೆಯ ಮೇಲೆ ಕಾಣುವ ಸಂಚಾರ ಚಿಹ್ನೆಗಳನ್ನು ನೋಡಿ ವಾಹನ ನಡೆಸುವ ಹವ್ಯಾಸ ಬೆಳಸಿಕೊಳ್ಳಬೇಕು ಎಂದರು.

# ಸಿಎಂ ಪತ್ನಿ ಪುಷ್ಪಾರ್ಚನೆ ಮಾಡಿದ್ದರಲ್ಲಿ ತಪ್ಪೇನಿಲ್ಲ: ಸಚಿವ ಯತೀಂದ್ರ ಸಿದ್ದರಾಮಯ್ಯ

**ಮೈಸೂರು, ಅ.23:** ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಅವರು ಮೊದಲ ಬಾರಿಗೆ ಜಂಜೂಸವಾರಿಗೆ ಪುಷ್ಪಾರ್ಚನೆ ಮಾಡಿದ್ದು, ದಸರಾ ಕೂಡ ಯಶಸ್ವಿಯಾಗಿ ನೆರವೇರಿದೆ. ದಸರಾ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಿಎಂ ಪತ್ನಿ ಪುಷ್ಪಾರ್ಚನೆ ಮಾಡಿದ್ದು, ಇದು ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಎಂಬ ಆರೋಪ ಕೇಳಿಬಂದಿದೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ಯತೀಂದ್ರ ಸಿದ್ದರಾಮಯ್ಯ, ಶಿಷ್ಟಾಚಾರ ಪಟ್ಟಿಯಲ್ಲಿ ಮುಖ್ಯಮಂತ್ರಿಗಳ ಪತ್ನಿ ಹೆಸರು ಇರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶಿಷ್ಟಾಚಾರ ಪಟ್ಟಿಯಲ್ಲಿ ಸಿಎಂ ಪತ್ನಿ ಹೆಸರು ಇರಲಿಲ್ಲ. ಆದ್ರೂ ಸಿಎಂ ಪತ್ನಿ ಉಷಾ ಶಿವಕುಮಾರ್ ಪುಷ್ಪಾರ್ಚನೆ ಮಾಡಿದ್ದು ತಪ್ಪೇನಿಲ್ಲ. ಅವರು ದೇವಿಗೆ ಪುಷ್ಪಾರ್ಚನೆ ಮಾಡಿದ್ದಾರೆ ಅಷ್ಟೇ. ಸರ್ಕಾರದ ಕೆಲಸವನ್ನೇನು ಮಾಡಿಲ್ವಲ್ಲ? ಹೀಗಾಗಿ ಶಿಷ್ಟಾಚಾರ ಉಲ್ಲಂಘನೆಯಾದ್ರೂ ತಪ್ಪೇನಿಲ್ಲ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ.

ಇನ್ನೂ ನಂದಿಕಂಬ ಪೂಜೆ ವೇಳೆ ಸಚಿವರನ್ನು ತಡೆದ ವಿಚಾರ ಕುರಿತು ಮಾತನಾಡಿ, ಸಚಿವರನ್ನು ತಡೆಯಬಾರದಿತ್ತು. ಐಜಿಪಿ ದರ್ಜೆಯ ಅಧಿಕಾರಿ ಯಾಕೆ ಈ ರೀತಿ ಮಾಡಿದ್ರು ಗೊತ್ತಿಲ್ಲ. ಪೊಲೀಸರು ಓವರ್ ಬೋರ್ಡ್ ಆಗಿ ವರ್ತಿದ್ದಾರೆ. ಸರ್ಕಾರ ತನಿಖೆಗೆ ಸೂಚನೆ ನೀಡಿದೆ, ತನಿಖೆ ನಡೆಯುತ್ತಿದೆ. ಶಿಷ್ಟಾಚಾರದ ಪ್ರಕಾರ ಮಂತ್ರಿಗಳನ್ನ ತಡೆಯಬಾರದಿತ್ತು ಎಂದಿದ್ದಾರೆ.

ಸಚಿವರನ್ನ ತಡೆಯಲು ಯಾರಾದರೂ ಸೂಚನೆ ಕೊಟಿದ್ರಾ



ಎಂಬ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ನಮಗೆ ಗೊತ್ತಿಲ್ಲ. ಈ ವಿಚಾರವಾಗಿಯೇ ತನಿಖೆ ನಡೆಯುತ್ತಿದೆ.

ತನಿಖಾ ತಂಡದ ಮುಂದೆ ಅಧಿಕಾರಿ ಉತ್ತರ ಕೊಡುತ್ತಾರೆ. ಮೂವರು ಕೂಡ ದಲಿತ ಸಚಿವರು. ಸಚಿವರಾದ ಬಾಲಕೃಷ್ಣ, ಪುಟ್ಟರಂಗಶೆಟ್ಟಿ ಅವರನ್ನೂ ತಡೆದಿದ್ದರು. ನಾನೇ ಸಿಎಂಗೆ ಹೇಳಿ ಬಿಡಿಸಿದ್ದೇನೆ ಎಂದು ಹೇಳಿದ್ದಾರೆ.

# ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಲಘು ಭೂಕಂಪ: ತಿಮ್ಮೋಜನಹಳ್ಳಿ ಸಮೀಪ ಕೇಂದ್ರಬಿಂದು ಪತ್ತೆ

**ದೊಡ್ಡಬಳ್ಳಾಪುರ, ಅ.23:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಇಂದು ಬೆಳಗ್ಗೆ 9 ಗಂಟೆ 1 ನಿಮಿಷ 59 ಸೆಕೆಂಡಿಗೆ ಲಘು ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮತ್ತು ರಾಷ್ಟ್ರೀಯ ಭೂಕಂಪನ ಕೇಂದ್ರವು ಈ ಬಗ್ಗೆ ಅಧಿಕೃತವಾಗಿ ವರದಿಯ ಪ್ರಕಟಿಸಿದೆ. KSNDMC, NCS ಕೇಂದ್ರದ ಪ್ರಕಾರ, ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಮ್ಮೋಜನಹಳ್ಳಿ ಗ್ರಾಮದಿಂದ ಸುಮಾರು 500 ಮೀ ಉತ್ತರಕ್ಕೆ ಭೂಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ. ಇದರ ಆಸುಪಾಸಿನಲ್ಲಿ ನರಗಾನಹಳ್ಳಿ ಮತ್ತು ಕರ್ನಾಲ ಗ್ರಾಮಗಳಿವೆ. ಅದರಂತೆ, ಭೂಮಿಯ ಮೇಲ್ಮೈನಿಂದ ಸುಮಾರು 10 ಕಿಲೋಮೀಟರ್ ಆಳದಲ್ಲಿ ಈ ಭೂಕಂಪನ ಸಂಭವಿಸಿದ್ದು, ಕೇಂದ್ರ ಬಿಂದುವಿನಿಂದ 20 ರಿಂದ 30 ಕಿಲೋಮೀಟರ್ ವ್ಯಾಪ್ತಿಯಲ್ಲಿ ಲಘು ಕಂಪನದ ಅನುಭವವಾಗಿದೆ. ಕೆಲವೇ ಸೆಕೆಂಡುಗಳ ಕಾಲ ಸ್ಥಳೀಯವಾಗಿ ಸಣ್ಣ ಪ್ರಮಾಣದ ನಡುಕ ಉಂಟಾಗಿದ್ದರಿಂದ ನಿವಾಸಿಗಳಲ್ಲಿ ಕೆಲಕಾಲ ಆತಂಕ ಮೂಡಿತ್ತು. ಅದೃಷ್ಟವಶಾತ್, ಈ ಭೂಕಂಪನದ ತೀವ್ರತೆ ತೀರಾ ಕಡಿಮೆಯಾಗಿದ್ದರಿಂದ ಯಾವುದೇ ಪ್ರಾಣಹಾನಿ ಅಥವಾ ಆಸ್ತಿಪಾಸ್ತಿ ನಷ್ಟ ಸಂಭವಿಸಿಲ್ಲ.ಮುಂದುವರೆದು, ಈ ಪ್ರದೇಶವು ಅತ್ಯಂತ ಕಡಿಮೆ ಭೂಕಂಪನ ಅಪಾಯವಿರುವ ಭೂಕಂಪ ವಲಯ–2 ವ್ಯಾಪ್ತಿಗೆ ಬರುವುದರಿಂದ ಹಾಗೂ ಯಾವುದೇ ಆಂತರಿಕ ಭೂವೈಜ್ಞಾನಿಕ ತೊಂದರೆ ಕಂಡುಬರದೇ ಇರುವುದರಿಂದ ಸಾರ್ವಜನಿಕರು ಯಾವುದೇ ರೀತಿಯ ವದಂತಿಗಳಿಗೆ ಕಿವಿಗೊಡದೆ ಧೈರ್ಯವಾಗಿರಬೇಕು ಎಂದು KSNDMC ಸ್ಪಷ್ಟಪಡಿಸಿದೆ.

# ಸಾಹಿತ್ಯದ ಮರುಪರಿಶೀಲನೆಗೆ ಹೊಸ ದಾರಿ ತೋರಿಸಲಿ: ಪ್ರೊ. ಸಬಿಹಾ ಭೂಮಿಗೌಡ



ಕಲಬುರಗಿ ಹೊರವಲಯದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ವಿಮರ್ಶೆಯ ತಾತ್ವೀಕರಣ' ವಿಷಯದ ಕುರಿತು ಮೂರು ದಿನಗಳ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಸಬೀಹಾ ಭೂಮಿಗೌಡ ಮಾತನಾಡಿದರು.

**ಕಲಬುರಗಿ, ಅ. 23:** ಕೃತಿ ವಿಮರ್ಶೆ ವೈಯಕ್ತಿಕ ನೆಲೆಯಲ್ಲಿ ಮಾಡುವುದಕ್ಕಿಂತ ಸಂಘಟಿತ ನೆಲೆಯಲ್ಲಿ ಮಂಥನ ಮತ್ತು ವಿಚಾರ ವಿನಿಮಯದ ಮೂಲಕ ನಡೆಸಿದಾಗ ಮಾತ್ರ ಸಾಹಿತ್ಯದ ಬಹುಸಾಧ್ಯತೆಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ ಹೇಳಿದರು.

ಕಲಬುರಗಿ ನಗರದ ಹೊರವಲಯದಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ವಿಮರ್ಶೆಯ ತಾತ್ವೀಕರಣ' ವಿಷಯದ ಕುರಿತು ಮೂರು ದಿನಗಳ ಕಮ್ಮಟದ ಸಮಾರೋಪ ಸಮಾರಂಭ ಅವರು ಮಾತನಾಡಿದರು.

ವೈಯಕ್ತಿಕ ಇಚ್ಛಾಶಕ್ತಿ, ಗುರಿ ಮತ್ತು ಆಸಕ್ತಿಯ ಆಧಾರದ ಮೇಲೆ ಸಂಶೋಧನೆ ಹಾಗೂ ಕೃತಿ ವಿಮರ್ಶೆ ಮೊದಲಿನಿಂದಲೂ ನಡೆಯುತ್ತಿವೆ. ಆದರೆ, ಅವುಗಳ ಪ್ರಮಾಣ ಸೀಮಿತವಾಗಿದೆ. ಸಾಂಸ್ಥಿಕ ನೆಲೆಯಲ್ಲಿ ಇಂತಹ ಪ್ರಯತ್ನಗಳಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನ ದೊರೆತಾಗ ಅವುಗಳ ಪರಿಣಾಮಕಾರಿತ್ವ ಹೆಚ್ಚುತ್ತದೆ. ವಿಮರ್ಶೆ ಮತ್ತು ಸೃಜನಶೀಲ ಬರವಣಿಗೆಯ ಚುರುಕುತನವನ್ನು ಬೆಳೆಸಲು ಇಂತಹ ಕಮ್ಮಟಗಳು ಸಹಕಾರಿಯಾಗುತ್ತವೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ನಿರ್ದೇಶಕ ಪ್ರೊ. ಬಸವರಾಜ ಎಂ. ಕೋಡಗುಂಟಿ ಹಾಗೂ ಹೊಸಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ರಾಮಲಿಂಗಪ್ಪ ಟಿ. ಬೇಗೂರು ಮಾತನಾಡಿದರು.

ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ಶಿವಗಂಗಾ ರುಮ್ಮಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೂರು ದಿನಗಳ ಕಮ್ಮಟದಲ್ಲಿ ಹತ್ತು ಗೋಷ್ಠಿಗಳು, ಚರ್ಚೆಗಳು ಹಾಗೂ ಸಂವಾದ ಕಾರ್ಯಕ್ರಮಗಳು ನಡೆದವು. ರಾಜ್ಯದ ವಿವಿಧ ಭಾಗಗಳ ಸಾಹಿತಿಗಳು, ವಿದ್ವಾಂಸರು ಮತ್ತು ಚಿಂತಕರು ಭಾಗವಹಿಸಿ ಕನ್ನಡ ಸಾಹಿತ್ಯ ವಿಮರ್ಶೆಯ ವಿವಿಧ ಆಯಾಮಗಳ ಕುರಿತು ವಿಚಾರ ವಿನಿಮಯ ನಡೆಸಿದರು.

# ಧೈರ್ಯ, ಶೌರ್ಯ, ಸ್ವಾಭಿಮಾನ ಮತ್ತು ಸಾಹಸದ ಪ್ರತೀಕ: ಇತಿಹಾಸಕಾರ ಪ್ರೊ.ಬಸವರಾಜ ಕುಪ್ಪಸಗೌಡರ

**ಬೆಳಗಾವಿ, ಅ.23:** ವೀರರಾಣಿ ಕಿತ್ತೂರು ಚೆನ್ನಮ್ಮ ಕುದುರೆ ಏರಿ ರಣಾಂಗಣದಲ್ಲಿ ಶತ್ರುಗಳೊಡನೆ ಕಾದಾಡುವ ಬಗ್ಗೆ ಎಲ್ಲರೂ ಕೇಳಿದ್ದೀರಿ. ಇದರಿಂದಾಗಿಯೇ ಅವರು ಧೈರ್ಯ, ಶೌರ್ಯ, ಸ್ವಾಭಿಮಾನ ಮತ್ತು ಸಾಹಸದ ಪ್ರತೀಕವಾಗಿದ್ದರು ಎಂದು ಇತಿಹಾಸಕಾರ ಪ್ರೊ. ಬಸವರಾಜ ಕುಪ್ಪಸಗೌಡರ ಬಣ್ಣಿಸಿದ್ದಾರೆ.

ಇದರೊಟ್ಟಿಗೆ ಪ್ರೀತಿ, ವಾತ್ಸಲ್ಯ, ತಾಯಿ ಹೃದಯದಿಂದಲೂ ಗುರುತಿಸಿ ಕೊಂಡಿದ್ದರು, ಬ್ರಿಟಿಷ್ ಅಧಿಕಾರಿಗಳ ಮಕ್ಕಳನ್ನು ಬಂಧನದಲ್ಲಿ ಇರಿಸಿದಾಗ, ವೈರಿಯ ಮಕ್ಕಳು ವೈರಿಗಳಲ್ಲ ಎಂಬ ಸಂದೇಶ ಸಾರಿ, ಆ ಮಕ್ಕಳಿಗೆ ತಾಯಿ ಪ್ರೀತಿ ತೋರಿಸಿದ ಮಹಾತಾಯಿ ಆಗಿದ್ದರು ಎಂಬುದನ್ನೂ ಇತಿಹಾಸದಲ್ಲಿ ಕಾಣಬಹುದಾಗಿದೆ.

ಬ್ರಿಟಿಷರ ವಿರುದ್ಧ ನಡೆದ ಮೊದಲ ಯುದ್ಧದಲ್ಲಿ ಅಂದಿನ ಧಾರವಾಡ ಕಲೆಕ್ಟರ್ ಥ್ಯಾಕರೆಯ ರುಂಡ ಚೆಂಡಾಡುವ ಮೂಲಕ ಕಿತ್ತೂರು ಸಂಸ್ಥಾನ ದಿಗ್ವಿಜಯ ಸಾಧಿಸುತ್ತದೆ. ಈ ವೇಳೆ ಹಲವು ಬ್ರಿಟಿಷ್ ಅಧಿಕಾರಿಗಳು, ಸಾಕಷ್ಟು ಸೈನಿಕರು ಸೆರೆ ಸಿಗುತ್ತಾರೆ. ಅವರ ಜೊತೆಗೆ ಅವರ ಪತ್ನಿಯರು ಮತ್ತು ಮಕ್ಕಳನ್ನು ಬಂಧನದಲ್ಲಿ ಇರಿಸಲಾಗಿ ರುತ್ತದೆ. ಇದು ರಾಣಿ ಚೆನ್ನಮ್ಮನವರಿಗೆ ಗೊತ್ತಾಗಿ, ಮಮ್ಮಲ ಮರಗುತ್ತಾರೆ. ತಕ್ಷಣ ಮಹಿಳೆಯರು ಮತ್ತು ಮಕ್ಕಳನ್ನು ಅಲ್ಲಿಂದ ಬಿಡುಗಡೆಗೊಳಿಸಿ, ತಮ್ಮ ಬಳಿ ಇರಿಸಿಕೊಳ್ಳುತ್ತಾರೆ. ಜೊತೆಗೆ ಆ ಮಕ್ಕಳ ಜೊತೆಗೆ ಆಟ ಆಡುತ್ತಾ, ಕೆಲ ಸಮಯ ಕಳೆಯುತ್ತಾರೆ. ಆ ದೃಶ್ಯವನ್ನು ಕಟ್ಟಿಕೊಡುವ ಫೋಟೋ ಕಿತ್ತೂರು ಕೋಟೆ ಆವರಣ ದಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದಾಗಿದೆ.

ಈ ಮೂಲಕ ವೈರಿಯ ಮಕ್ಕಳು ವೈರಿಗಳಲ್ಲ ಎಂಬ ದಿವ್ಯ ಸಂದೇಶವನ್ನು ಜಗತ್ತಿಗೆ ಸಾರಿದ ಕರುಣಾಮಯಿ. ವೈರತ್ವ ತೋರುವಾಗ ವೈರತ್ವ ತೋರುವುದು. ಇನ್ನುಳಿದಂತೆ ಸ್ನೇಹ, ಪ್ರೀತಿ, ವಾತ್ಸಲ್ಯದಿಂದ ವರ್ತಿಸಬೇಕು ಎಂಬುದನ್ನು ನಿರೂಪಿಸಿದ ಮಹಾತಾಯಿ ಚೆನ್ನಮ್ಮ ಇತಿಹಾಸಕಾರ ಪ್ರೊ. ಬಸವರಾಜ ಕುಪ್ಪಸಗೌಡರ ವಿವರಿಸಿದರು.: ರಾಣಿ ಚೆನ್ನಮ್ಮನವರ ಗುಣ ವಿಶೇಷತೆ ಕುರಿತು ಮುಂದು ವರಿದು ಮಾತನಾಡಿದ ಅವರು, "ಚನ್ನಮ್ಮ ಸರ್ವ ಗುಣ ಸಂಪನ್ನೆ ಆಗಿದ್ದರು. ತಂದೆ ಧೂಳಪ್ಪಗೌಡ ದೇಸಾಯಿ, ತಾಯಿ ಪದ್ಮಾವತಿ. ಚೆನ್ನಮ್ಮನನ್ನು ಗಂಡು ಮಗನಂತೆ ಬೆಳೆಸಿದ್ದರು.

ಅಂತೆಯೇ ಚನ್ನಮ್ಮ ಕುದುರೆ ಸವಾರಿ, ಕತ್ತಿವರಸೆ ಸೇರಿ ಸಕಲ ವಿದ್ಯಾ ಪಾರಂಗತಳಾ ಗಿದ್ದರು. ಈಗಾಗಲೇ ಮಲ್ಲಸರ್ಜ ದೊರೆಗೆ ರುದ್ರಮ್ಮ ಎನ್ನುವ ಓರ್ವ ರಾಣಿ ಇರುವುದು ಗೊತ್ತಿದ್ದರೂ ಎರಡನೇ ಪತ್ನಿ ಆಗಿ ಬರುತ್ತಾರೆ. ಇದರಿಂದ ತ್ಯಾಗಿ ಅನಿಸಿಕೊಳ್ಳುತ್ತಾರೆ. ಲೋಕಾ ಬಿರೂಢಿಯಲ್ಲಿ ನೋಡುವಂತೆ ಸವತಿ ಮತ್ಸರ ಗುಣ ಚೆನ್ನಮ್ಮನಲ್ಲಿ ಎಳ್ಳಷ್ಟು ಇರಲಿಲ್ಲ. ಒಡಹುಟ್ಟಿದ ಅಕ್ಕನಂತೆ ರುದ್ರಮ್ಮನ ಜೊತೆ ಸಂಬಂಧ ಹೊಂದಿದ್ದರು" ಎಂದರು.

# ಕಿತ್ತೂರು ಚೆನ್ನಮ್ಮ ಧೈರ್ಯ, ಶೌರ್ಯ ಮಹಿಳೆಯರಿಗೆ ಸ್ಫೂರ್ತಿಯಾಗಲಿ



**ವಿಜಯಪುರ,ಅ.23–** ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಧೈರ್ಯ, ಶೌರ್ಯ, ದೇಶಪ್ರೇಮ ಹಾಗೂ ಆಡಳಿತ ವೈಖರಿಯನ್ನು ಇಂದಿನ ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಹೇಳಿದರು.

ಅಂತ ವೀರರಾಣಿ ಕಿತ್ತೂರು ಚೆನ್ನಮ್ಮ ಅವರ ಜೀವನ ಸಾಧನೆಗಳು ಹಾಗೂ ಹೋರಾಟದ ಬದುಕನ್ನು ಯುವಪೀಳಿಗೆ ಅರಿತುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಕಿತ್ತೂರು ರಾಣಿ ಚೆನ್ನಮ್ಮ ಅವರು ತಮ್ಮ ನಾಡಿನ ನೆಲ,ಜಲ ಹಾಗೂ ಸ್ವಾಭಿಮಾನಕ್ಕಾಗಿ ದಿಟ್ಟತನದಿಂದ ಹೋರಾಡಿದ ವೀರ ಮಹಿಳೆ. ಅಂದಿನ ಕಾಲದಲ್ಲಿಯೇ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ತಮ್ಮ ನಾಯಕತ್ವದ ಗುಣವನ್ನು ಮೆರೆದಿದ್ದರು. ಅವರ ಧೈರ್ಯ, ಶೌರ್ಯ, ದೇಶಪ್ರೇಮ ಹಾಗೂ ಆಡಳಿತದ ಕೌಶಲ್ಯ ಇಂದಿನ ಮಹಿಳೆಯರಿಗೆ ಸ್ಫೂರ್ತಿಯಾಗಿವೆ. ಅವರ ಜೀವನಾದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ದೇಶಪ್ರೇಮ ಮತ್ತು ಸ್ವಾಭಿಮಾನದ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂದರು.

ಮಹಾನಗರ ಪಾಲಿಕೆಯ ಮೇಯರ್ ಮಡಿವಾಳಪ್ಪ ಕರಡಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಹಾಗೂ ಸಮಾಜದ ಮುಖಂಡ ಬಿ.ಎಂ. ಪಾಟೀಲ ಅವರು ಮಾತನಾಡಿದರು.

ಉಪನ್ಯಾಸ ನೀಡಿದ ಶರಣಗೌಡ ಪಾಟೀಲ ಅವರು ಮಾತನಾಡಿ, ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಕೊಡುಗೆ ಸ್ಮರಣೀಯವಾಗಿದೆ.

ತಮ್ಮ ಕಾಲದಲ್ಲಿಯೇ ಯುದ್ಧತಂತ್ರಗಳನ್ನು ಕರಗತ ಮಾಡಿಕೊಂಡು, ಶತ್ರುಗಳ ವಿರುದ್ಧ ಧೈರ್ಯದಿಂದ ಹೋರಾಡಿದ ಅವರು ಅಪ್ರತಿಮ ವೀರ ಮಹಿಳೆ ಯಾಗಿದ್ದಾರೆ. ಅವರ ತ್ಯಾಗ, ಸಾಹಸ ಹಾಗೂ ಅಪ್ಪಟ ದೇಶಪ್ರೇಮದ ಕಿಚ್ಚನ್ನು ಮಕ್ಕಳಲ್ಲಿ ಬೆಳೆಸಬೇಕು. ಕಿತ್ತೂರು ರಾಣಿ ಚೆನ್ನಮ್ಮ ಅವರ ಜೀವನಾನುಭವಗಳು ಮತ್ತು ಆದರ್ಶಗಳನ್ನು ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಸದಸ್ಯೆ ಭಾರತಿ ಕಣಮುಚನಾಳ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ, ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣನವರ, ಸಿ.ಬಿ. ಕುಂಬಾರ, ಸಂತೋಷ್ ಭೋವಿ, ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ, ಆಯುಷ್ ಅಧಿಕಾರಿ ಡಾ. ವಿದ್ಯಾವತಿ ಅಥಣಿ, ಗಿರೀಶ ಕುಲಕರ್ಣಿ, ವಿ.ಸಿ. ನಾಗಠಾಣ, ಬಿ.ಎಂ. ಬಿರಾದಾರ ಹಾಗೂ ದಾನೇಶ ಅವಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಪರಿಷತ್‌ನ ನಾಲ್ಕೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು

# 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ: ರವಿಕುಮಾರ್




ಕಲಬುರಗಿ, ಅ. 23: ಈಶಾನ್ಯ ಶಿಕ್ಷಕರ ಮತಕ್ಷೇತ್ರವೂ ಸೇರಿದಂತೆ ರಾಜ್ಯದ ನಾಲ್ಕು ವಿಧಾನ ಪರಿಷತ್‌ನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಹಾಗೆಯೇ 2028ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ರಾಜ್ಯ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ನಾಲ್ಕು ಬಾರಿ ಆಯ್ಕೆಯಾಗಿರುವ ಶಶಿಲ್ ನಮೋಶಿ ಅವರು ಈಶಾನ್ಯ ಶಿಕ್ಷಕರ ಕ್ಷೇತ್ರದ ರಾಜ್ಯ ವಿಧಾನ ಪರಿಷತ್‌ಗೆ ಐದನೇ ಬಾರಿಗೆ ಆಯ್ಕೆಯಾಗಲಿದ್ದಾರೆ. ಅದೇ ರೀತಿ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಎಸ್.ವಿ. ಸಂಕನೂರ್, ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಕೆ.ಎಂ. ಸುರೇಶ್ (ಸೋಮೇಶ್ವರ), ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಎ.ಪಿ. ರಂಗನಾಥ ಅವರು ಆಯ್ಕೆಯಾಗಲಿದ್ದಾರೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರವು ರೈತ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ವಿರೋಧಿಯಾಗಿದೆ. ಕೇವಲ ತಮ್ಮ ಕಲ್ಯಾಣಕ್ಕೆ ಆದ್ಯತೆ ಕೊಡುತ್ತಿರುವ ಕಾಂಗ್ರೆಸ್ಸಿಗರ ಕುರಿತು ಶಿಕ್ಷಕರು ಭ್ರಮನಿರಸನಗೊಂಡಿದ್ದಾರೆ. ರಾಜ್ಯ ದಲ್ಲಿ ಸುಮಾರು 2,84881 ಹುದ್ದೆ ಗಳು ಖಾಲಿ ಇವೆ. ಕೇವಲ 79694 ಶಿಕ್ಷಕರ ಹುದ್ದೆಗಳಿಗೆ ಮಾತ್ರ ಕರೆಯಲಾ ಗಿದೆ. ಶಿಕ್ಷಕರಿಲ್ಲದ ಶಾಲೆಗಳು ಖಾಲಿಯಾಗಿವೆ. ಉನ್ನತ ಶಿಕ್ಷಣದಲ್ಲಿಯೂ ಸಹ 13599 ಹುದ್ದೆಗಳು ಖಾಲಿ ಇವೆ. ಕುಲಪತಿ ಗಳ ಹುದ್ದೆಗಳೂ ಸಹ ಪ್ರಭಾರಿಯಾಗಿವೆ. ಕಾಯಂ ಉಪನ್ಯಾಸಕರು ಇಲ್ಲದೇ ಅತಿಥಿ ಉಪನ್ಯಾಸಕರಿಂದ ವಿಶ್ವವಿದ್ಯಾಲಯಗಳು ಹಾಗೂ ಪದವಿ ಕಾಲೇಜುಗಳು ನಡೆಯು ತ್ತಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಗುಲಬರ್ಗಾ ವಿಶ್ವವಿದ್ಯಾಲಯ, ಕೊಪ್ಪಳ ವಿಶ್ವವಿದ್ಯಾಲಯ ಮತ್ತು ಬೀದರ್ ಹಾಗೂ ರಾಯಚೂರು ವಿಶ್ವವಿದ್ಯಾಲಯಗಳ ಸ್ಥಿತಿಯನ್ನು ನೋಡಿದರೆ ಕಣ್ಣೀರು ಬರುತ್ತದೆ. ಶೇ. 40ರಷ್ಟು ಸರ್ಕಾ ರಿ ಶಾಲೆಗಳಲ್ಲಿ ಶೌಚಾಲಯಗಳ ಸೌಲಭ್ಯ ವೇ ಇಲ್ಲ. 14000 ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿವೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರವು ಮಹಿಳಾ ವಿರೋಧಿ ನೀತಿ ಯನ್ನು ಹೊಂದಿವೆ. ಅನೇಕ ಕಡೆಗ ಳಲ್ಲಿ ಬಸ್‌ಗಳು ಪ್ರಯಾಣಿಕರಿಂದ ತುಂಬಿ ಹೋಗಿದ್ದು, ಶಿಕ್ಷಕಿಯರು ತಮ್ಮ ಶಾಲೆಗಳಿಗೆ ಹೋಗಲು ಸಾಕಷ್ಟು ಪ್ರಯಾಸಪಡ ಬೇಕಾಗಿದೆ. ಎಲ್ಲಕ್ಕೂ ಮುಖ್ಯವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಮಹಿಳಾ ಸಚಿವರೇ ಇಲ್ಲ ಎಂದು ಕಿಡಿಕಾರಿದರು.

ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ವರ್ಗದವರ ವಿರೋಧಿ ನೀತಿಯನ್ನೂ ಸಹ ರಾಜ್ಯ ಸರ್ಕಾರವು ಜಾರಿ ಮಾಡಿದೆ. ಎಸ್‌ಸಿಪಿ, ಟಿಪಿಎಸ್‌ನ ಸುಮಾರು 53000 ಕೋಟಿ ರೂ.ಗಳನ್ನು ಪರಿಶಿಷ್ಟರಿಗೆ ಬಳಕೆ ಮಾಡದೇ ಅನ್ಯ ಯೋಜನೆಗಳಿಗೆ ಬಳಕೆ ಮಾಡಲಾಗಿದೆ. ನಮ್ಮ ಬಿಜೆಪಿ ಸರ್ಕಾರ ಇದ್ದಾಗ ಶೇ.56ರಷ್ಟು ಮೀಸಲಾತಿಯನ್ನು ಹೆಚ್ಚಿಸಲಾಗಿತ್ತು. ಕಾಂಗ್ರೆಸ್ ಸರ್ಕಾರವು ಸೂಕ್ತ ರೀತಿಯಲ್ಲಿ ವಾದ ಮಾಡದೇ ಇದ್ದುದರಿಂದ ಆ ಮೀಸಲಾತಿ ಮತ್ತೆ 50ಕ್ಕೆ ಕಡಿತಗೊಂಡಿದೆ ಎಂದು ಅವರು ದೂರಿದರು.

ರೈತರ ಮಕ್ಕಳಿಗೆ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿನ ಬಿಜೆಪಿ ಸರ್ಕಾರವು ಶಿಷ್ಯವೇತನ ಜಾರಿಗೆ ತಂದಿದ್ದನ್ನು ರಾಜ್ಯ ಕಾಂಗ್ರೆಸ್ ಸರ್ಕಾರವು ಸ್ಥಗಿತಗೊಳಿಸಿದೆ. ಬರದ ಈ ಸಂದರ್ಭದಲ್ಲಿ ರೈತರ ಮಕ್ಕಳಿಗೆ ಶಿಷ್ಯವೇತನವು ಅನುಕೂಲ ವಾಗುತ್ತಿತ್ತು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬಿಟ್ಟು ರಾಜ್ಯ ಶಿಕ್ಷಣ ನೀತಿಯನ್ನೂ ಸಹ ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿದೆ. ಅತಿಥಿ ಶಿಕ್ಷಕರಿಗೆ ಸೂಕ್ತ ಗೌರವಧನ ಕೊಡುತ್ತಿಲ್ಲ. ಓಪಿಎಸ್ ಜಾರಿಗೆ ಮಾಡುವುದಾಗಿ ಕಾಂಗ್ರೆಸ್ ಸರ್ಕಾರವು ಹೇಳಿ, ಮೂರು ವರ್ಷಗಳು ಕಳೆದರೂ ಸಹ ಜಾರಿ ಮಾಡುತ್ತಿಲ್ಲ. ಹೀಗಾಗಿ ನಮ್ಮ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದ್ದು, ಓಪಿಎಸ್ ಜಾರಿಗೆ ತರುತ್ತೇವೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಕೇವಲ 141 ಸರ್ಕಾರಿ ಪದವಿ ಕಾಲೇಜುಗಳಿದ್ದವು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹಾಗೂ ಡಿ.ಎಚ್. ಶಂಕರಮೂರ್ತಿ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ 181 ಸರ್ಕಾರಿ ಪದವಿ ಕಾಲೇಜುಗಳನ್ನು ಆರಂಭಿಸಲಾಯಿತು. ಪ್ರತಿ ಪದವಿ ಕಾಲೇಜಿಗೆ ಒಂದು ಕೋಟಿ ರೂ. ಅನುದಾನ ನೀಡಲಾಯಿತು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿ ಶಶಿಲ್ ನಮೋಶಿ, ಶಾಸಕ ಬಸವ ರಾಜ್ ಮತ್ತಿಮೂಡ್, ಮಾಜಿ ಸಂಸದ ಡಾ. ಉಮೇಶ್ ಜಾಧವ್, ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಮಾಜಿ ಶಾಸಕರಾದ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ರಾಜಕುಮಾರ್ ಪಾಟೀಲ್ ತೇಲ್ಕೂರ್, ದತ್ತಾತ್ರೇಯ ಪಾಟೀಲ್, ಕೃಷ್ಣಾರೆಡ್ಡಿ, ಶರಣಪ್ಪ ತಳವಾರ್, ಲಿಂಗರಾಜ್ ಬಿರಾದಾರ್ ಮುಂತಾದವರು ಉಪಸ್ಥಿತರಿದ್ದರು.

# ನ.21ರಂದು ನವದೆಹಲಿಯಲ್ಲಿ ಹಾರಕೂಡ ಶ್ರೀಗಳ ಜನ್ಮ ದಿನಾಚರಣೆ ಬೀದರ್‌ನಿಂದ ವಿಶೇಷ ರೈಲು

**ಕಲಬುರಗಿ, ಅ.23–:** ಹಾರಕೂಡ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಡಾ. ಚನ್ನವೀರ ಶಿವಾಚಾರ್ಯರ 64ನೇ ಹುಟ್ಟುಹಬ್ಬವನ್ನು ಈ ಬಾರಿ ನವೆಂಬರ್ 21ರಂದು ಶನಿವಾರ ನವದೆಹಲಿಯಲ್ಲಿ ಆಚರಿಸಲಾಗುವುದು ಭಕ್ತರ ಪಾಲ್ಗೊಳ್ಳುವಿಕೆಗೆ ಅನುಕೂಲ ವಾಗುವಂತೆ ಬೀದರ್ ನಿಂದ ದೆಹಲಿಯವರೆಗೆ ವಿಶೇಷ ರೈಲು ವ್ಯವಸ್ಥೆ ಮಾಡಲಾಗುವುದು ಎಂದು ಮಾಜಿ ಲೋಕಸಭಾ ಸದಸ್ಯರಾದ ಡಾ. ಉಮೇಶ್ ಜಾಧವ್ ಹೇಳಿದರು.

ಹಾರಕೂಡದಲ್ಲಿ ನವರಾತ್ರಿ ಹಬ್ಬದ ನಿಮಿತ್ತ ಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಗಳ ಜೊತೆ ಎರಡನೇ ಸುತ್ತಿನ ಚರ್ಚೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿ ನವದೆಹಲಿಯ ಜನಪಥ ರಸ್ತೆಯ ಅಂಬೇಡ್ಕರ್ ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಶ್ರೀಗಳ ಹುಟ್ಟುಹಬ್ಬ ಹಾಗೂ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು ದೇಶದಿಂದ ಸುಮಾರು ಸಾವಿರಕ್ಕೂ ಹೆಚ್ಚು ಭಕ್ತರು ಮತ್ತು ಅಭಿಮಾನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಇದಕ್ಕಾಗಿ ಬೀದರ್ ನಿಂದ ನವಂಬರ್ 19 ರಂದು ವಿಶೇಷ ರೈಲು ನವದೆಹಲಿಗೆ ಹೊರಡಲಿದ್ದು ನವೆಂಬರ್ 20ರಂದು ರಾತ್ರಿ ದೆಹಲಿಗೆ ತಲುಪಲಿದೆ. ದೆಹಲಿಯಿಂದ ನವೆಂಬರ್ 21ರ ರಾತ್ರಿ ಅಥವಾ 22ರ ಬೆಳಿಗ್ಗೆ ವಾಪಸ್ ಬೀದರ್ ಗೆ ಹೊರಡಲಿದ್ದು ರೈಲ್ವೆ ಇಲಾಖೆಯ ಅಧಿಕಾರಿಗಳ ಜೊತೆ ಮಾತುಕತೆ ನಡೆಸಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಭಕ್ತರ ಅನುಕೂಲಕ್ಕಾಗಿ ದೆಹಲಿಯಲ್ಲಿ ಪ್ರತ್ಯೇಕ ದೂರವಾಣಿ ಸಂಖ್ಯೆಯನ್ನು ತೆರೆದು ಮಾಹಿತಿ ಕೇಂದ್ರ

### ಹತ್ತು ವರ್ಷಗಳ ನಂತರ ಒಲಿದ ಭಾಗ್ಯ

ಹಾರಕೂಡ ಪೂಜ್ಯರಾದ ಡಾ. ಚೆನ್ನವೀರ ಶಿವಾಚಾರ್ಯರ 54ನೇ ಹುಟ್ಟುಹಬ್ಬದನ್ನು ಚಿಂಚೋಳಿಯಲ್ಲಿ ಆಚರಿಸುವ ಅವಕಾಶ ಸಿಕ್ಕಿತ್ತು. ಇದೀಗ 10 ವರ್ಷಗಳ ನಂತರ 64ನೇ ಹುಟ್ಟುಹಬ್ಬವನ್ನು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಆಚರಿಸಲು ಅವಕಾಶ ಸಿಕ್ಕಿರುವುದು ದೊಡ್ಡ ಭಾಗ್ಯ. ಪೂಜ್ಯರ ಮೇಲೆ ಭಕ್ತರ ಮತ್ತು ಮಠದ ಅಭಿಮಾನಿಗಳ ಅಪಾರ ಭಕ್ತಿ ಕಂಡು ಆಶ್ಚರ್ಯ ಚಕಿತನಾಗಿದ್ದೇನೆ. ಈ ಅಪೂರ್ವ ಕಾರ್ಯಕ್ರಮ ಆಯೋಜಿಸಲು ಅವಕಾಶ ನೀಡಿದ ಪೂಜ್ಯ ಮಠಾಧೀಶರಿಗೆ ಅಭಿನಂದನೆಗಳು ಮತ್ತು ಕಾರ್ಯಕ್ರಮದ ಯಶಸ್ವಿಗೆ ಸಕಲ ಸಿದ್ಧತೆ ಭರದಿಂದ ನಡೆದಿದೆ.

–ಡಾ. ಉಮೇಶ್ ಜಾಧವ್,
ಮಾಜಿ ಲೋಕಸಭಾ ಸದಸ್ಯರು ಕಲಬುರಗಿ.



ಆರಂಭಿಸಲಾಗುವುದು. 500 ಜನರಿಗೆ ವಾಸ್ತವ್ಯದ ವ್ಯವಸ್ಥೆ ಕಲ್ಪಿಸಲಾಗುವುದು. ಇನ್ನು ಅಗತ್ಯ ಉಳ್ಳವರಿಗೆ ರಿಯಾಯಿತಿ ದರದಲ್ಲಿ ವಸತಿ ವ್ಯವಸ್ಥೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಿದ್ಧತೆ ನಡೆಸಲು 25 ಜನ ಸ್ವಯಂಸೇವಕರನ್ನು ನಿಯೋಜಿಸಲಾಗುವುದು ಎಂದರು.

ಜನ್ಮೋತ್ಸವ ಐತಿಹಾಸಿಕ ಕಾರ್ಯಕ್ರಮವಾಗಲಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಹಾರಕೂಡ ಮಠಾಧೀಶರಾದ ಡಾ. ಚೆನ್ನವೀರ ಶಿವಾಚಾರ್ಯರು ಉಪಸ್ಥಿತರಿದ್ದರು.




ಬೆಳಗಾವಿಯಲ್ಲಿ ಶುಕ್ರವಾರ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ಅಂಗವಾಗಿ ನಡೆದ ಮೆರವಣಿಗೆ ಜನರ ಗಮನ ಸೆಳೆಯಿತು.

# ಅನುವಾದದಿಂದಲೇ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಲು ಸಾಧ್ಯ ಡಾ. ಚನ್ನಪ್ಪ ಕಟ್ಟಿ



**ವಿಜಯಪುರ,ಅ.22–**ಕನ್ನಡ ಸಾಹಿತ್ಯ, ಭಾಷೆ ಹಾಗೂ ಸಂಸ್ಕೃತಿಯನ್ನು ದೇಶ–ವಿದೇಶಗಳಲ್ಲಿ ಪರಿಚಯಿಸುವಲ್ಲಿ ಅನುವಾದ ಕಾರ್ಯ ಪ್ರಮುಖ ಪಾತ್ರ ವಹಿಸಿದೆ ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ. ಚನ್ನಪ್ಪ ಕಟ್ಟಿ ಹೇಳಿದರು.

ಗುರುವಾರ ಆಯೋಜಿಸಿದ್ದ 2026ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಹಾಗೂ 2025ನೇ ಸಾಲಿನ ಪುಸ್ತಕ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು. ವಿವಿಧ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಕನ್ನಡಕ್ಕೆ ಹಾಗೂ ಕನ್ನಡದ ಕೃತಿಗಳನ್ನು ಇತರ ಭಾಷೆಗಳಿಗೆ ಅನುವಾದಿಸುವ ಮೂಲಕ ಭಾಷೆಗಳ ನಡುವಿನ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸಬಹುದಾಗಿದೆ ಎಂದು ಹೇಳಿದರು.

## ಅಂಗಡಿ ಮಾಲೀಕರ ಬಿಲ್‌ಗಳಲ್ಲಿ ತಿದ್ದುಪಡಿ ಮಾಡಿ ವ್ಯವಹಾರ ಹೆಚ್ಚಿಸಿ ತೋರಿಸಿದ ಆರೋಪ; ಸೈಬರ್ ಪೊಲೀಸರ ಪರಿಶೀಲನೆ



**ಬಳ್ಳಾರಿ ಅ 23.** ನಗರದ ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದ ಲೆಕ್ಕಪತ್ರ ನಿರ್ವಹಣೆ ಹಾಗೂ ಜಿಎಸ್‌ಟಿ ಸಲ್ಲಿಕೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಚಾರ್ಟರ್ಡ್ ಅಕೌಂಟೆಂಟ್ ಪ್ರವೀಣ್

ಮತ್ತು ಅವರ ಪತ್ನಿ ನಿರ್ಮಲಾದೇವಿ ವಿರುದ್ಧ ಅಂದಾಜು 70 ಲಕ್ಷದಷ್ಟು ಹಣಕಾಸು ಅವ್ಯವಹಾರ (ತೆರಿಗೆ) ವಂಚನೆ ಆರೋಪ ಕೇಳಿಬಂದಿದೆ.

ಈ ಸಂಬಂಧ ಸೈಬರ್ ಪೊಲೀಸ್ ಅಧಿಕಾರಿಗಳು ಪ್ರಕರಣ ವಿವಿಧ ಆಯಾಮಗಳನ್ನು ಪರಿಶೀಲಿಸುತ್ತಿದ್ದಾರೆ ಎನ್ನಲಾಗಿದೆ. ಪ್ರವೀಣ್ ಅವರು ಶ್ರೀ ಜೇ ಟ್ರೇಡರ್ಸ್ ಹೆಸರಿನ ಸಂಸ್ಥೆಯೊಂದಿಗೆ ಸಂಬಂಧ ಹೊಂದಿದ್ದು, ಹಲವು ಅಂಗಡಿ ಮಾಲೀಕರ ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದರು.

ಇವರ ಮೇಲಿನ ನಂಬಿಕೆಯಿಂದ ಕೆಲವು ಅಂಗಡಿ ಮಾಲೀಕರು ತಮ್ಮ ಅಂಗಡಿಗಳ ಸಂಪೂರ್ಣ ವ್ಯವಹಾರ ದಾಖಲೆಗಳು, ಬಿಲ್‌ಗಳು ಹಾಗೂ ಜಿಎಸ್‌ಟಿ ಸಂಬಂಧಿತ ವ್ಯವಹಾರ ಅವರಿಗೆ ಒಪ್ಪಿಸಿದ್ದರು. ಇವರ ಬ್ಯಾಂಕ್ ಚೆಕ್ ಬುಕ್ ದಿಂದ ಹಿಡಿದು ಏಟಿಎಂ ಪಾನ್ ಕಾರ್ಡ ಎಲ್ಲವು ಪ್ರವೀಣ್ ಬಳಿ ಇರುತ್ತವೆ ಎಂದು ತಿಳಿದುಬಂದಿದೆ.

**ಬಿಲ್‌ಗಳ ಮೊತ್ತದಲ್ಲಿ ತಿದ್ದುಪಡಿ ಆರೋಪ!!** ಅಂಗಡಿ ಮಾಲೀಕರು ಮೂಲ ಬಿಲ್‌ಗಳಲ್ಲಿ ನಮೂದಿಸಿದ್ದ ವಹಿವಾಟು ಮೊತ್ತವನ್ನು ಬದಲಾಯಿಸಿ ಕಡಿಮೆ ಮೊತ್ತದ ಬಿಲ್‌ಗಳನ್ನು ಹೆಚ್ಚಿನ ಮೊತ್ತದ ವಹಿವಾಟಿನಂತೆ ತೋರಿಸಲಾಗಿದೆ ಎಂದು ಗಂಭೀರ ಆರೋಪದಲ್ಲಿ ಅಂಗಡಿ ಮಾಲೀಕರ ಬಿಲ್ ಗಳು, ನಕಲಿ ಮಾಡಿದ ಧಾಖಲೆ ಗಳು ತೋರಿಸುತ್ತೆ.

**ಅಂಗಡಿ ಮಾಲೀಕರಲ್ಲಿ ಆತಂಕ.**

ತಮ್ಮ ವ್ಯವಹಾರದ ದಾಖಲೆಗಳನ್ನು ನಂಬಿಕೆಯಿಂದ ಒಪ್ಪಿಸಿದ್ದ ಅಂಗಡಿ ಮಾಲೀಕರ ಲೆಕ್ಕಪತ್ರಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಕಂಡುಬಂದಿದ್ದು, ಅವರಿಗೂ "ತೆರಿಗೆ ಸಂಬಂಧಿತ ಬಾಕಿ ಇದೆ ಎಂದು ತೆರಿಗೆ ಇಲಾಖೆದಿಂದ ನೋಟೀಸ್ ಗಳು ಆರಂಭ ಆಗಿದ್ದಾವೆ.

ಮುಂದೆ ಕಾನೂನಿನ ಸಮಸ್ಯೆಗಳು ಎದುರಾಗುವ ಸಾಧ್ಯತೆಯಿದೆ. ಈ ರೀತಿ ಪ್ರವೀಣ್ ಕುಮಾರ್ ತುಂಬಾ ಮಾಲೀಕರಿಗೆ ವಂಚನೆ ಮಾಡಿದ್ದಾರೆ, ಇದರಲ್ಲಿ 13 ಜನ ಮಾಲೀಕರು ಅಇಓ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ.

ಇದು ಬಳ್ಳಾರಿ ನಗರದಲ್ಲಿ ಹಲವಾರು ವರ್ಷಗಳಿಂದ ಇತರ ವಂಚಿನ ಪ್ರಕರಣಗಳು ಬೆಳಕಿಗೆ ಬರುತ್ತಿದ್ದರು ಯಾರು ಹೊರಗೆ ಬಂದು ಹೇಳುವ ಸ್ಥಿತಿ ಆಗಿರಲಿಲ್ಲ ಆದರೆ ಪ್ರವೀಣ್ ಕುಮಾರ್ ತುಂಬಾ ಹೈಟೆಕ್ ಮೈಂಡ್ ಅನ್ನು ಬಳಸಿ ಯಾವುದೇ ಗೂಡ್ಸ್ ಖರೀದಿಯನ್ನು ಇ–ವೇ ಬಿಲ್ಲುಗಳನ್ನು ತೋರಿಸದೆ ಇವರನ್ನು ನಂಬಿಕೊಂಡ ಮಾಲೀಕರ ಅಂಗಡಿಗಳ ಬಿಲ್ಲುಗಳನ್ನು ತಿರುಚಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ತೆರಿಗೆಗಳನ್ನು ವಂಚನೆ ರೂಪದಿಂದ ಪಡೆದು ಮಾಲೀಕರಿಗೆ ತೆರಿಗೆ ಅಧಿಕಾರಿಗಳಿಗೆ ಬಹುದೊಡ್ಡ ಪಂಗನಾಮ ಹಾಕಿದ್ದಾನೆ ಇದು ಸಣ್ಣ ಪುಟ್ಟ ಪ್ರಕರಣವಲ್ಲವೆಂದು ಹಿರಿಯ ಚಾರ್ಟೆಡ್ ಅಕೌಂಟ್ ಅಧಿಕಾರಿಗಳು, ಮೌಕಿಕವಾಗಿ ಹೇಳುತ್ತಿದ್ದಾರೆ.

ಈ ಪ್ರವೀಣ್ ಕುಮಾರ್ ಬಳ್ಳಾರಿಯ ಮೂಲದ ರಾಜ್ಯದಿಂದ ಬಂದಿರುವ ರಾಜಸ್ಥಾನ್ ಯು ಪಿ, ಮೂಲದ ಅಂಗಡಿ ಮಾಲೀಕರುಗಳ ವ್ಯಾಪಾರ ವಹಿವಾಟುಗಳನ್ನು ನೋಡುತ್ತಾ ಇದ್ದರು ಇದರಲ್ಲಿ ಸ್ನೇಹದಿಂದ ಒಂದಿಷ್ಟು ಸ್ಥಳೀಯ ಅಂಗಡಿ ಮಾಲೀಕರಿಗೆ ಕೂಡ ಪ್ರವೀಣ್ ಪಂಗನಾಮ ಹಾಕಿದ್ದಾರೆ ಎನ್ನುವುದು ಕೇಳಿ ಬರ್ತಾ ಇದೆ. ಈ ಪ್ರವೀಣ್ ಕುಮಾರ್ ಈ ತರಹ ಮೂಲ ಅಂಗಡಿಯ ವಹಿವಾಟು ಬಿಲ್ಲಗಳನ್ನು ತಿರುಚಿ ದೇಶದ ಮೂಲ ಮೂಲೆಗಳಲ್ಲಿ ಶ್ರೀ ಜೆ ಟ್ರೇಡರ್ಸ್ ಮೂಲಕ ಕಳಪೆ ವಹಿವಾಟುಗಳನ್ನು ದೊಡ್ಡಮಟ್ಟದಲ್ಲಿ ಮಾಡಿದ್ದಾರೆ ಎನ್ನುವುದು ಅನುಭವಿಗಳ ಮಾತಾಗಿದೆ.

ಈ ಪ್ರವೀಣ್ ಕುಮಾರ್ ಈ ತರಹ ಕಳಪೆ ವಹಿವಾಟುಗಳನ್ನು ತೆರಿಗೆ ರೂಪದಲ್ಲಿ ಮಾಡಿಕೊಂಡು ಅದನ್ನು ರಾಜ್ಯ, ದೇಶದ ಮಟ್ಟದಲ್ಲಿ ಬ್ಲಾಕ್ ಆರ್ಥಿಕ ದಂಧೆಯನ್ನು ವೈಟ್ ರೂಪದಲ್ಲಿ ಪರಿವರ್ತನೆ ಮಾಡಲು ಮಾಡಿದ ಬಹುದೊಡ್ಡ ವಂಚನೆ ಎಂದು ಈ ದಂಧೆ ಇನ್ ಕಮ್ ಟ್ಯಾಕ್ಸ್ ಬಾಗಿಲುಗಳಿಗೆ ಲಿಂಕ್ ಇದೆ ಎನ್ನುವ ಆಧಾರಗಳು ದಾಖಲಾತಿಗಳು ತೋರಿಸುತ್ತಿವೆ. ಇದರ ಹಿಂದೆ ಬಹುದೊಡ್ಡ ಜಾಲವಿದೆ ಎನ್ನುವುದು ಕೇಳಿಬರುತ್ತದೆ.

ಜೆ ಟ್ರೇಡರ್ಸ್ ಮಾಡಿರುವ ವಹಿವಾಟು ನೂರಾರು ಸಾವಿರಾರು ಜಿಎಸ್‌ಟಿ ಅಂಗಡಿಗಳ ಮೂಲಕ ಈ ದಂದೆ ನಡೆದಿದೆ ಎನ್ನುವುದು ಅವರು ಎಲ್ಲರೂ ಕೂಡ ಹೊರಗೆ ಬರುವ ಸಾಧ್ಯತೆ ಇದೆ ಎನ್ನುವುದು, ಕೇಳಿ ಬರುತ್ತಿದೆ. ಪ್ರವೀಣ್ ಕುಮಾರ್ ನಿರ್ಮಲಾದೇವಿ ಇವರ ವಹಿವಾಟು ಇಂದೇ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಮತ್ತು ಇನ್ಕಮ್ ಟ್ಯಾಕ್ಸ್ ಅಧಿಕಾರಿಗಳ ಪಾತ್ರ ಏನು ಎನ್ನುವುದು ಗುಪ್ತವಾಗಿ ಉಳಿದಿದೆ.

## ಮುಶ್ರೀಪ್‌ರಿಂದ ಬನ್ನಿ ವಿನಿಮಯ



ವಿಜಯಪುರ : ನಗರದ ಗೃಹ ಕಚೇರಿಯಲ್ಲಿ ಬುಧವಾರ ದಸರಾ, ವಿಜಯದಶಮಿ ಅಂಗವಾಗಿ ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರಾದ ಅಬ್ದುಲ್ ಹಮೀದ್ ಮುಶ್ರೀಪ್ ಅವರು ಸಾರ್ವಜನಿಕರೊಂದಿಗೆ ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡರು.

ನಗರವೂ ಸೇರಿದಂತೆ ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಮುಖಂಡರು, ಗಣ್ಯರು, ಅಭಿಮಾನಿಗಳು, ಕಾರ್ಯಕರ್ತರು ಸೇರಿ ಆಪ್ತರು ಹಾಗೂ ಸ್ನೇಹಿತರೊಂದಿಗೆ ಪರಸ್ಪರ ಬನ್ನಿ ವಿನಿಮಯ ಮಾಡಿಕೊಂಡು ಶುಭ ಕೋರಿದರು.

ಈ ಸಂದರ್ಭದಲ್ಲಿ ಜನರ ಉಭಯ ಕುಶಲೋಪರಿ ವಿಚಾರಿಸಿದ ಅವರು ದಸರಾ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಈ ವರ್ಷ ಮಳೆ ಕೊರತೆ ಹಿನ್ನೆಲೆ ಎಲ್ಲರೂ ಹೆಚ್ಚೆಚ್ಚು ಗಿಡಗಳನ್ನು ನೆಡಬೇಕು. ನೀರನ್ನು ಹಿತಮಿತವಾಗಿ ಬಳಸಬೇಕು ಎಂದು ಸಲಹೆ ನೀಡಿದರು.

# ಕೆಇಆರ್‌ಸಿ ಅಹವಾಲು ಸಭೆ: ರೈತರು, ಕೈಗಾರಿಕೋದ್ಯಮಿಗಳಿಂದ ಸಮಸ್ಯೆಗಳ ಸುರಿಮಳೆ

**ಕಲಬುರಗಿ, ಅ. 23:** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸಿದ್ಧಪಡಿಸಿದ ಕರ್ನಾಟಕ ವಿದ್ಯುಚ್ಛಕ್ತಿ ಸರಬರಾಜು ನಿಯಮಾವಳಿ (ಇಎಸ್‌ಆರ್)–2026 ಕರಡು ಪ್ರತಿ ಕುರಿತು ಡಿಸಿ ಕಚೇರಿ ಸಭಾಂಗಣದಲ್ಲಿ ಜರುಗಿದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ ಸಂಬಂಧಿಸಿದ ಸಾರ್ವಜನಿಕ ವಿಚಾರಣಾ ಸಭೆಯಲ್ಲಿ ರೈತರು, ಗ್ರಾಹಕರು, ಕೈಗಾರಿಕೋದ್ಯಮಿಗಳು ಸಮಸ್ಯೆಗಳ ಸರಮಾಲೆಯೊಂದಿಗೆ ಜೆಸ್ಕಾಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರೈತರು ತಮ್ಮ ಸಮಸ್ಯೆ ಹೇಳಿಕೊಂಡರು. ಸಂಘ–ಸಂಸ್ಥೆ ಪ್ರತಿನಿಧಿಗಳು ದೂರು ಕುರಿತು ಪತ್ರ ಸಲ್ಲಿಸಿದರು. ಇನ್ನೂ ಕೆಲವರು ಮೌಖಿಕವಾಗಿ ದೂರಿದರು. ಕೆಕೆಸಿಸಿಐ ಅಧ್ಯಕ್ಷ ಶರಣಬಸಪ್ಪ ಪಪ್ಪಾ ನೇತೃತ್ವದಲ್ಲಿ ಬೇಡಿಕೆಗಳ ಪಟ್ಟಿ ಸಲ್ಲಿಸಲಾಯಿತು.



ರಾಜ್ಯವ್ಯಾಪಿ ಬರುವ ಎಲ್ಲ ಅಹವಾಲುಗಳ ಕೂಲಂಕಷ ಪರಿಶೀಲನೆ ನಡೆಸಿ ಸಾರ್ವಜನಿಕರ ಹಿತ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಬದಲಾವಣೆಗಳೊಂದಿಗೆ ಅಂತಿಮ ನಿಯಮಾವಳಿ ರೂಪಿಸಲಾಗುವುದು.

– ಪಿ.ರವಿಕುಮಾರ್
ಕೆಇಆರ್‌ಸಿ ಅಧ್ಯಕರು.

ವಿದ್ಯುತ್ ಬಳಕೆ ರಸೀದಿಯಲ್ಲಿ ಗ್ರಾಹಕ ಹೊಂದಿರುವ ಭದ್ರತಾ ಠೇವಣಿ, ಅದರ ಮೇಲಿನ ಬಡ್ಡಿ, ವಿದ್ಯುತ್ ಮೀಟರ್ ಸ್ಥಿತಿಗತಿ, ಯಾವ ಟಿಸಿಯಿಂದ ವಿದ್ಯುತ್ ಪೂರೈಸಲಾಗುತ್ತಿದೆ, ಯಾವ ಫೀಡರ್ ವ್ಯಾಪ್ತಿಗೆ ಟಿಸಿ ಒಳಪಟ್ಟಿದೆ ಎಂಬ ವಿಷಯ ಸೇರ್ಪಡೆ ಮಾಡಬೇಕು.

– ದೀಪಕ್ ಗಾಲಾ ಸಾಮಾಜಿಕ ಹೋರಾಟಗಾರ.

ಸಾಮಾಜಿಕ ಹೋರಾಟಗಾರ ದೀಪಕ್ ಗಾಲಾ ಮಾತನಾಡಿ, ಇಎಸ್‌ಆರ್‌ನಲ್ಲಿ ಗ್ರಾಹಕ–ಉತ್ಪಾದಕ, ಅಭಿವೃದ್ಧಿದಾರ, ಕಂಟೋನ್ಮೆಂಟ್ ಪ್ರಾಧಿಕಾರ, ಕೈಗಾರಿಕಾ ಎಸ್ಟೇಟ್, ಕೈಗಾರಿಕಾ ಪಾರ್ಕ್, ಟೌನ್‌ಶಿಪ್ ಪ್ರದೇಶ, ವಿದ್ಯುದ್ದೀಕರಣ ಪ್ರದೇಶ ಎಂಬ ಪದ ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿದರು.

ಕಾಳಗಿ ತಾಲೂಕು ಕುಳಗೇರಾ ರೈತ ಮಲ್ಲಿಕಾರ್ಜುನ ಪಾಟೀಲ್? ಮಾತನಾಡಿ, ಒಂದು ತಿಂಗಳಲ್ಲಿ ಒಂದೇ ಟಿ.ಸಿ ನಾಲ್ಕು ಸಲ ಸುಟ್ಟುಹೋಗಿದೆ. ಪ್ರತಿ ಬಾರಿ ಟಿಸಿ ಕೂಡಿಸಲು ಒಂದು ವಾರ ಹಿಡಿಯುತ್ತದೆ. ಕಳೆದ ಬಾರಿ ಟಿ.ಸಿ ಕೂಡಿಸುವಾಗ ಸ್ಫೋಟಗೊಂಡಿದೆ. ಇದಕ್ಕೆ ಯಾರು ಹೊಣೆ? ಹೀಗೆ ನಡೆದರೆ ನಮ್ಮ ಪರಿಸ್ಥಿತಿ ಏನು? ಯಾರಿಗೆ ಹೇಳಬೇಕು? ಜೆಸ್ಕಾಂ ಅಧಿಕಾರಿಗಳು ಹಣ ಪಡೆದು ಟಿಸಿಗಳ ಸಾಮರ್ಥ್ಯ ಮೀರಿ ಹೆಚ್ಚುವರಿಯಾಗಿ ಸಂಪರ್ಕ ಕಲ್ಪಿಸುತ್ತಾರೆ. ಇದರಿಂದ ಟಿ.ಸಿ ಸುಟ್ಟರೆ ಬದಲಿಸಲು ವಾರಗಟ್ಟಲೆ ಬೇಕಾಗುತ್ತದೆ. ಈಗ ಬರ ಇದೆ. ಬಿಸಿಲಿಗೆ ಬೆಳೆ ಒಣಗುತ್ತಿದೆ. ಈ ಸಂದರ್ಭದಲ್ಲಿ ಜೆಸ್ಕಾಂ ಚೆಲ್ಲಾಟವಾಡುತ್ತಿದೆ ಎಂದು ಕಿಡಿಕಾರಿದರು.

ಅಹವಾಲು ಆಲಿಸಿದ ಆಯೋಗದ ಅಧ್ಯಕ್ಷ ಪಿ. ರವಿಕುಮಾರ್ ಅವರು ಮಾತನಾಡಿ, ಇಎಸ್‌ಆರ್ ಕರಡು ಪ್ರತಿ ಇನ್ನೂ ಅಂತಿಮವಾಗಿಲ್ಲ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಾರ್ವಜನಿಕ ಅಹವಾಲು, ವಿಚಾರಣೆ ನಡೆಸಿ ಸಂಗ್ರಹಿಸುವ ಅಭಿಪ್ರಾಯ, ಸಲಹೆ ಮತ್ತು ಆಕಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಆಯೋಗದ ಸದಸ್ಯ ಎಚ್.ಕೆ. ಜಗದೀಶ, ಜಾವೇದ್ ಅಖ್ತರ್, ಪಿ.ಆರ್. ಗೋಪಿನಾಥ ಇತರರಿದ್ದರು.

# ಟಿಬೆಟ್‌ನಲ್ಲಿ ಪ್ರಬಲ ಭೂಕಂಪ: ಕನಿಷ್ಠ 16 ಮಂದಿ ಸಾವು, ಧರೆಗುರುಳಿದ ಮನೆಗಳು

**ಲಹಾಸಾ (ಟಿಬೆಟ್), ಅ.23:** ಟಿಬೆಟ್‌ನ ಉತ್ತರದ ಪರ್ವತ ಪ್ರದೇಶದಲ್ಲಿ ಗುರುವಾರ ತಡರಾತ್ರಿ ಸಂಭವಿಸಿದ ಭೀಕರ ಭೂಕಂಪಕ್ಕೆ ಕನಿಷ್ಠ 16 ಜನರು ಸಾವನ್ನಪ್ಪಿದ್ದು, 54ಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ರಿಕ್ಟರ್ ಮಾಪಕದಲ್ಲಿ 7.0 ತೀವ್ರತೆ ದಾಖಲಾಗಿದ್ದು, ನೂರಾರು ಮನೆಗಳು ನೆಲಸಮಗೊಂಡಿವೆ.

ಭೂಕಂಪದಿಂದ ಕನಿಷ್ಠ 339 ಮನೆಗಳು ಹಾಗೂ ಜಾನುವಾರುಗಳಿಗಾಗಿ ನಿರ್ಮಿಸಿದ್ದ 20 ಕೊಟ್ಟಿಗೆಗಳು ಕುಸಿದಿದ್ದು, ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ಮುಂದುವರಿದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆಗಾಗಿ ಸ್ಥಳೀಯ ಜಿಲ್ಲೆಯಿಂದ 1,600ಕ್ಕೂ ಹೆಚ್ಚು ಮಂದಿಯನ್ನು ನಿಯೋಜಿಸಲಾಗಿದೆ. ಸಂತ್ರಸ್ತರ ನೆರವಿಗಾಗಿ 1,000 ತಾತ್ಕಾಲಿಕ ವಸತಿ ಘಟಕಗಳು, ಸುಮಾರು 3,000 ಡೇರೆಗಳು, ಮಡಚಬಹುದಾದ ಹಾಸಿಗೆಗಳು, ಕೈದೀಪಗಳು ಹಾಗೂ ಚಳಿಗಾಲಕ್ಕೆ ಅಗತ್ಯವಾದ ಉಡುಪುಗಳನ್ನು ಪ್ರದೇಶಕ್ಕೆ ರವಾನಿಸಲಾಗಿದೆ.

ಸ್ಥಳೀಯ ಕಾಲಮಾನ ರಾತ್ರಿ 10.33ಕ್ಕೆ ಭೂಕಂಪ ಸಂಭವಿಸಿದೆ. ಟಿಬೆಟ್‌ನ ಉತ್ತರ ಭಾಗದಲ್ಲಿರುವ ಕಡಿಮೆ ಜನಸಂಖ್ಯೆಯ, ಎತ್ತರದ ಪ್ರದೇಶದಲ್ಲಿ ನಾಗ್ಚು ನಗರದ ಪೂರ್ವ–ಈಶಾನ್ಯಕ್ಕೆ 191 ಕಿಲೋಮೀಟರ್ ದೂರದಲ್ಲಿ ಭೂಕಂಪದ ಕೇಂದ್ರಬಿಂದು ಪತ್ತೆಯಾಗಿದೆ. ಭೂಮಿಯ ಮೇಲ್ಮೈಯಿಂದ ಸುಮಾರು 18 ಕಿಲೋಮೀಟರ್ ಆಳದಲ್ಲಿ ಕಂಪನ ಸಂಭವಿಸಿದೆ ಎಂದು ತಿಳಿಸಿದೆ.

ಭೂಕಂಪದ ಬಳಿಕ 4.3ರಿಂದ 5.2 ತೀವ್ರತೆಯ ಕನಿಷ್ಠ ಏಳು ಭೂಕಂಪನಗಳು ಸಂಭವಿಸಿರುವುದನ್ನು ಅಮೆರಿಕದ ಸಂಸ್ಥೆ ದಾಖಲಿಸಿದೆ. ಈ ಎಲ್ಲ ಕಂಪನಗಳ ಕೇಂದ್ರಗಳು ಭೂಮಿಯ ಮೇಲ್ಮೈಯಿಂದ ಸುಮಾರು 10 ಕಿಲೋಮೀಟರ್ ಆಳದಲ್ಲಿದ್ದವು ಎಂದು ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಚೀನಾದ ಅಧಿಕೃತ ಸುದ್ದಿಸಂಸ್ಥೆ ಕ್ಸಿನ್‌ಹುವಾ ಪ್ರಕಾರ, ಪ್ರದೇಶದ ಕೆಲವು ಭಾಗಗಳಲ್ಲಿ ದೂರಸಂಪರ್ಕ ವ್ಯವಸ್ಥೆ ಸ್ಥಗಿತಗೊಂಡಿದೆ. ಭೂಕಂಪ ಪೀಡಿತ ಪ್ರದೇಶದ ಮೂಲಕ ಹಾದುಹೋಗುವ ರೈಲುಗಳ ಸಂಚಾರವನ್ನು



ತಾತ್ಕಾಲಿಕವಾಗಿ ನಿಲ್ಲಿಸಲು ಸ್ಥಳೀಯ ರೈಲ್ವೆ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡಿದ್ದಾರೆ. ಭೂಕಂಪದಿಂದ ಬಂಡೆಗಳು ಉರುಳಿಬಿದ್ದ ಪರಿಣಾಮ ರಾಷ್ಟ್ರೀಯ ಹೆದ್ದಾರಿ 317ರ ಒಂದು ಭಾಗದಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ. ಅವಶೇಷಗಳನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದ್ದು, ತುರ್ತು ಸೇವೆ, ರಕ್ಷಣಾ ಕಾರ್ಯಾಚರಣೆ ಮತ್ತು ಅಧಿಕೃತ ಪರಿಹಾರ ಕಾರ್ಯಗಳಿಗೆ ಸಂಬಂಧಿಸಿದ ವಾಹನಗಳಿಗೆ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಎಂದು ವರದಿ ಮಾಡಿದೆ.

ಮುಂದಿನ ಮೂರು ದಿನಗಳಲ್ಲಿ ಭೂಕಂಪ ಪೀಡಿತ ಪ್ರದೇಶದಲ್ಲಿ ಆಗಾಗ ಹಿಮಪಾತವಾಗುವ ನಿರೀಕ್ಷೆಯಿದೆ ಎಂದೂ ಸುದ್ದಿಸಂಸ್ಥೆ ತಿಳಿಸಿದೆ. ಇದು ಕಳೆದ ಐದು ವರ್ಷಗಳಲ್ಲಿ ಈ ಪ್ರದೇಶದಲ್ಲಿ ಸಂಭವಿಸಿದ ಅತ್ಯಂತ ಪ್ರಬಲ ಭೂಕಂಪವಾಗಿದೆ ಎಂದು ಚೀನಾದ ಸರ್ಕಾರಿ ಪ್ರಸಾರ ಸಂಸ್ಥೆ ಸಿಸಿಟಿವಿ ವರದಿ ಮಾಡಿದೆ.

ರಕ್ಷಣಾ ಕಾರ್ಯಾಚರಣೆ ಹಾಗೂ ವೈದ್ಯಕೀಯ ನೆರವಿಗೆ ಎಲ್ಲ ರೀತಿಯ ಪ್ರಯತ್ನಗಳನ್ನು ಕೈಗೊಳ್ಳುವಂತೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಭೂ ಕಂಪನಗಳು 300 ಕಿಲೋಮೀಟರ್ ದೂರದಲ್ಲಿರುವ ಟಿಬೆಟ್‌ನ ರಾಜಧಾನಿ ಲಹಾಸಾದಲ್ಲೂ ವರದಿಯಾಗಿವೆ.

**ಸಮರ ಸಜ್ಜಿನಂತೆ ರಕ್ಷಣಾ ಕಾರ್ಯ**

ಘಟನಾ ಸ್ಥಳದಲ್ಲಿ ಸದ್ಯ 1,600 ಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ, ಪೊಲೀಸರು ಮತ್ತು ಅಗ್ನಿಶಾಮಕ ದಳದವರು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅವಶೇಷಗಳ ಅಡಿಯಲ್ಲಿ ಸಿಲುಕಿರುವವರನ್ನು ಹೊರತೆಗೆಯುವ ಕೆಲಸ ಮುಂದುವರಿದಿದೆ. ಸಂತ್ರಸ್ತರಿಗಾಗಿ ಚಳಿಗಾಲದ ಬಟ್ಟೆಗಳು, 3,000 ಟೆಂಟ್‌ಗಳು ಮತ್ತು 1,000 ತಾತ್ಕಾಲಿಕ ವಸತಿ ಸಾಮಗ್ರಿಗಳನ್ನು ತುರ್ತಾಗಿ ರವಾನಿಸಲಾಗುತ್ತಿದೆ.

**ಹಿಮಪಾತದ ಮುನ್ಸೂಚನೆ:** ಹೆಚ್ಚಿದ ಆತಂಕ

ಈ ನಡುವೆ ದುರಂತ ಪೀಡಿತ ಪ್ರದೇಶದಲ್ಲಿ ಮುಂದಿನ ಮೂರು ದಿನಗಳ ಕಾಲ ಧಾರಾಕಾರ ಹಿಮಪಾತವಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತೀವ್ರ ಚಳಿ ಮತ್ತು ಹಿಮಪಾತವು ರಕ್ಷಣಾ ಕಾರ್ಯಾಚರಣೆಗೆ ದೊಡ್ಡ ಸವಾಲಾಗಿ ಪರಿಣಮಿಸಿದ್ದು, ನಿರಾಶ್ರಿತರಾಗಿರುವ ಜನರ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

## ಬಿಬಿಸಿ ದಾವೆ: ಡಿಸೆಂಬರ್ 11ರೊಳಗೆ ಸಾಕ್ಷ್ಯ ನೀಡಲು ಟ್ರಂಪ್‌ಗೆ ಆದೇಶ

**ನ್ಯೂಯಾರ್ಕ್, ಅ.23:** ಬಿಬಿಸಿ ವಿರುದ್ಧದ ತಮ್ಮ 10 ಶತಕೋಟಿ ಡಾಲರ್ ಮಾನನಷ್ಟ ಮೊಕದ್ದಮೆಯಲ್ಲಿ ಡಿಸೆಂಬರ್ 11 ರೊಳಗೆ ನ್ಯಾಯಾಲಯಕ್ಕೆ ಪುರಾವೆ ಒದಗಿಸುವಂತೆ ಅಮೆರಿಕದ ನ್ಯಾಯಾಧೀಶರು ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಆದೇಶಿಸಿದ್ದಾರೆ. ಹಾಜರಾಗಲು ವಿಫಲವಾದರೆ ಪ್ರಕರಣವನ್ನು ವಜಾಗೊಳಿಸುವುದು ಸೇರಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.



ಅಕ್ಟೋಬರ್ 16ರಂದು ನಿಗದಿಯಾಗಿದ್ದ ವಿಚಾರಣೆಗೆ ಹಾಜರಾಗಲು ಟ್ರಂಪ್ ನಿರಾಕರಿಸಿದ್ದಾರೆ ಎಂದು ಬ್ರಿಟಿಷ್ ಪ್ರಸಾರ ಸಂಸ್ಥೆ ಬಿಬಿಸಿ ದೂರು ನೀಡಿದ ನಂತರ, ಮಿಯಾಮಿಯ ನ್ಯಾಯಾಧೀಶರು ಈ ಆದೇಶ ಹೊರಡಿಸಿದ್ದಾರೆ. **ಬಿಬಿಸಿಯು 'ಟ್ರಂಪ್:** ಎ ಸೆಕೆಂಡ್ ಚಾನ್ಸ್' ಎಂಬ ಸಾಕ್ಷ್ಯಚಿತ್ರವನ್ನು ವಂಚನೆಯಿಂದ ಎಡಿಟ್ ಮಾಡಿ, ಜನವರಿ 6, 2021ರಂದು ಯುಎಸ್ ಕ್ಯಾಪಿಟಲ್ ಮೇಲಿನ ದಾಳಿಗೆ ತಾವು ಹಿಂಸಾಚಾರವನ್ನು ಪ್ರಚೋದಿಸಿದಂತೆ ಬಿಂಬಿಸಿದೆ ಎಂದು ಟ್ರಂಪ್ ಆರೋಪಿಸಿ ಡಿಸೆಂಬರ್ 2025ರಲ್ಲಿ ಈ ಪ್ರಕರಣವನ್ನು ದಾಖಲಿಸಿದ್ದಾರೆ. ಬಿಬಿಸಿ ಈ ಎಡಿಟಿಂಗ್‌ಗಾಗಿ ಕ್ಷಮೆಯಾಚಿಸಿದ್ದು, ಇದರ ಪರಿಣಾಮವಾಗಿ ಸಂಸ್ಥೆಯ ಹಲವು ಹಿರಿಯ ಅಧಿಕಾರಿಗಳು ರಾಜೀನಾಮೆ ನೀಡಿದ್ದಾರೆ. ಆದರೆ, ಸಾಕ್ಷ್ಯಚಿತ್ರವು ಟ್ರಂಪ್ ಅವರಿಗೆ ಯಾವುದೇ ನೈಜ ಹಾನಿಯನ್ನುಂಟು ಮಾಡಿದೆ ಎಂಬುದನ್ನು ನಿರಾಕರಿಸಿದೆ ಮತ್ತು ಮೊಕದ್ದಮೆಯನ್ನು ವಜಾಗೊಳಿಸುವಂತೆ ಕೋರಿದೆ.

## ಜೋರ್ಡಾನ್‌ನ ಚರ್ಚ್‌ನಲ್ಲಿ ಗುಂಡಿನ ದಾಳಿಗೆ 7 ಜನರು ಬಲಿ




**ಅಮ್ಮಾನ್, ಅ.23:** ದಕ್ಷಿಣ ಜೋರ್ಡಾನ್‌ನ ಚರ್ಚ್ ಒಂದರಲ್ಲಿ ಶುಕ್ರವಾರ ಅಂತ್ಯಕ್ರಿಯೆಯ ಸಂದರ್ಭದಲ್ಲಿ ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ ಏಳು ಜನರು ಮೃತಪಟ್ಟಿದ್ದಾರೆ ಮತ್ತು 10 ಜನರು ಗಾಯಗೊಂಡಿದ್ದಾರೆ.

ಕರಾಕ್ ಪ್ರಾಂತದ ಹಮ್ಮೌದ್ ಚರ್ಚ್‌ನಲ್ಲಿ ಈ ದಾಳಿ ನಡೆದಿದೆ ಎಂದು ಸರಕಾರಿ ಸ್ವಾಮ್ಯದ ಸುದ್ದಿಸಂಸ್ಥೆ ತಿಳಿಸಿದೆ. ಬಂದೂಕುಧಾರಿಗಳು ವಾಹನದಲ್ಲಿ ಆಗಮಿಸಿ, ಪಲಾಯನ ಮಾಡುವ ಮುನ್ನ ಸತತ ಐದು ನಿಮಿಷಗಳ ಕಾಲ ಗುಂಡಿನ ದಾಳಿ ನಡೆಸಿದ್ದಾರೆ. ದಾಳಿಯ ಸಮಯದಲ್ಲಿ ಸುಮಾರು 150 ರಿಂದ 200 ಜನರು ಚರ್ಚ್‌ನ ಒಳಗೆ ಮತ್ತು ಸುತ್ತಮುತ್ತ ಇದ್ದರು ಎಂದು ಪ್ರತ್ಯಕ್ಷದರ್ಶಿಯನ್ನು ಉಲ್ಲೇಖಿಸಿದ ವರದಿ ತಿಳಿಸಿದೆ.

**ನ್ಯೂಯಾರ್ಕ್‌ನತ್ತ ಹೊರಟ 40 ಸಾವಿರ ಟನ್ ಡೀಸೆಲ್ ಹೊತ್ತ ಹಡಗು**

## ಅಮೆರಿಕಕ್ಕೆ ಮೊದಲ ಕಂತಿನ ಡೀಸೆಲ್ ರವಾನಿಸಿದ ರಷ್ಯಾ

**ಮಾಸ್ಕೊ, ಅ.23:** ರಷ್ಯ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವೆ ಈ ತಿಂಗಳು ನಡೆದ ಒಪ್ಪಂದದ ನಂತರ, 40,000 ಮೆಟ್ರಿಕ್ ಟನ್ ರಷ್ಯಾದ ಡೀಸೆಲ್ ಹೊತ್ತ ಟ್ಯಾಂಕರ್ ಹಡಗು ನ್ಯೂಯಾರ್ಕ್‌ನತ್ತ ಪ್ರಯಾಣಿಸುತ್ತಿದೆ ಎಂದು ಹಡಗು ಟ್ರ್ಯಾಕಿಂಗ್ ಡೇಟಾ 'ಎಲ್‌ಎಸ್‌ಇಜಿ' ಶುಕ್ರವಾರ ಮಾಹಿತಿ ನೀಡಿದೆ.

ನವೆಂಬರ್ 3ರಂದು ನಡೆಯಲಿರುವ ಅಮೆರಿಕದ ಮಧ್ಯಂತರ ಅವಧಿಯ ಚುನಾವಣೆಗೂ ಮುನ್ನ, ಗಗನಕ್ಕೇರುತ್ತಿರುವ ಡೀಸೆಲ್ ಬೆಲೆಗಳನ್ನು ಇಳಿಸುವ ತಮ್ಮ ಪ್ರಯತ್ನಗಳ ಭಾಗವಾಗಿ ರಷ್ಯದ ಡೀಸೆಲ್ ಆಮದು ಮಾಡಿಕೊಳ್ಳುವ ಈ ಅನಿರೀಕ್ಷಿತ ಒಪ್ಪಂದವನ್ನು ಟ್ರಂಪ್ ಘೋಷಿಸಿದ್ದರು.

ಶಿಪ್ಪಿಂಗ್ ಡೇಟಾ ಪ್ರಕಾರ, ಮಾಲ್ಟಾ ಧ್ವಜವನ್ನು ಹೊಂದಿರುವ ಮಧ್ಯಮ ಗಾತ್ರದ 'ಅಜಿಯೊಯ್ ಫರ್ನೆಂಡೆಸ್' ಎಂಬ ಟ್ಯಾಂಕರ್ ಹಡಗಿಗೆ ಅಕ್ಟೋಬರ್ 22ರಂದು ರಶ್ಯದ ಬಾಲ್ಟಿಕ್ ಬಂದರು ಪ್ರಿಮೊಸ್ರ್ಕ್‌ನಲ್ಲಿ 40,000 ಮೆಟ್ರಿಕ್ ಟನ್ 'ಅಲ್ಟ್ರಾ–ಲೋ ಸಲ್ಫರ್' ಡೀಸೆಲ್ ಅನ್ನು ಲೋಡ್ ಮಾಡಲಾಗಿದೆ. ಇದು



ನವೆಂಬರ್ 7ರಂದು ಅಮೆರಿಕ ತಲುಪುವ ನಿರೀಕ್ಷೆಯಿದೆ. 40,000 ಟನ್‌ಗಳ ಡೀಸೆಲ್ ಸುಮಾರು 3 ಲಕ್ಷ ಬ್ಯಾರಲ್‌ಗಳಿಗೆ ಸಮನಾಗಿರುತ್ತದೆ. ಇದು ಅಮೆರಿಕದ ಅರ್ಥವ್ಯವಸ್ಥೆಯು ಒಂದೇ ದಿನದಲ್ಲಿ ಬಳಸುವ ಸುಮಾರು 40 ಲಕ್ಷ ಬ್ಯಾರಲ್ ಡೀಸೆಲ್‌ನ ಶೇಕಡಾ 7ರಷ್ಟಾಗಿದೆ.

ಮಾಜಿ ಅಧ್ಯಕ್ಷ ಜೋ ಬೈಡನ್ 2022ರಲ್ಲಿ ರಷ್ಯದ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಅಮೆರಿಕ ಆಮದಿನ ಮೇಲೆ ನಿಷೇಧ ಘೋಷಿಸಿದ ನಂತರ, ಅಮೆರಿಕ ಆಮದು ಮಾಡಿಕೊಳ್ಳುತ್ತಿರುವ ಮೊದಲ ಸರಕು ಇದಾಗಿದೆ. ರಷ್ಯ ಮತ್ತು ಅಮೆರಿಕದ ಕಂಪನಿಗಳು ವಿತರಣೆಗಾಗಿ ಒಪ್ಪಂದಗಳನ್ನು ರೂಪಿಸುತ್ತಿರುವುದರಿಂದ ಹೆಚ್ಚುವರಿ ರವಾನೆಗಳು ಕೂಡ ಮುಂದುವರಿಯಲಿವೆ ಎಂದು ರಶ್ಯದ ಉಪ ಪ್ರಧಾನಮಂತ್ರಿ ಅಲೆಕ್ಸಾಂಡರ್ ನೊವಾಕ್ ಹೇಳಿದ್ದಾರೆ. ಒಪ್ಪಂದಕ್ಕೆ ಸಂಬಂಧಿಸಿದ ಕಷ್ಟಕರವಾದ ಪಾವತಿ ಸಮಸ್ಯೆಗಳನ್ನು ಬಗೆಹರಿಸಲು ಸಹಾಯ ಮಾಡುವಂತೆ ಅಮೆರಿಕದ ಖಜಾನೆ ಇಲಾಖೆಯು ಕೇಳಿದೆ ಎಂದು ರಶ್ಯದ ಹಣಕಾಸು ಇಲಾಖೆಯ ಅಧೀನದ 'ಸಾರ್ವಭೌಮ ಸಂಪತ್ತು ನಿಧಿ'ಯ ಮುಖ್ಯಸ್ಥ ಹಾಗೂ ಪುಟಿನ್ ರಾಯಭಾರಿ ಕಿರಿಲ್ ಡಿಮಿಟ್ರೆವ್ ತಿಳಿಸಿದ್ದಾರೆ.

## ಪ್ಯಾರಾ ಏಷ್ಯನ್ ಗೇಮ್ಸ್: ಭಾರತಕ್ಕೆ ಸಾರ್ವಕಾಲಿಕ ಗರಿಷ್ಠ ಚಿನ್ನ

**ಐಚಿ ನಾಗೋಯಾ, ಅ.23:** ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತದ ಪದಕ ಬೇಟೆ ಮುಂದುವರಿದಿದ್ದು, ಶುಕ್ರವಾರ ಪ್ಯಾರಾ ಬ್ಯಾಡ್ಮಿಂಟನ್‌ನ ಮಹಿಳಾ ಡಬಲ್ಸ್ ಎಸ್‌ಎಲ್ 3–ಎಸ್‌ಯು 5 ವಿಭಾಗದಲ್ಲಿ ತುಳಸಿಮತಿ ಮುರುಗೇಶನ್ ಮತ್ತು ಮಾನಸಿ ಗಿರೀಶ್ಚಂದ್ರ ಜೋಶಿ ಚಿನ್ನದ ಪದಕ ಗೆದ್ದರು.

ಚೀನಾದ ಯಾಂಗ್ ಕಿಯುಕ್ಸಿಯಾ–ಶಿಯಾವೋ ಜುಕ್ಸಿಯಾನ್ ಜೋಡಿಯನ್ನು 21–16, 21–13 ಅಂಕಗಳಿಂದ 34 ನಿಮಿಷಗಳಲ್ಲಿ ಮಣಿಸಿದ ಭಾರತೀಯ ಜೋಡಿ ಪ್ರಶಸ್ತಿ ಗೆದ್ದಿತು.

**28 ಚಿನ್ನ; ಹಿಂದಿನ ದಾಖಲೆ ಮುರಿದ ಭಾರತ:** ಈ ಗೆಲುವಿನೊಂದಿಗೆ ಭಾರತವು ಕ್ರೀಡಾಕೂಟದಲ್ಲಿ 28 ಚಿನ್ನದ ಪದಕಗಳನ್ನು ಗೆದ್ದಂತಾಗಿದೆ. 2023ರ ಹ್ಯಾಂಗ್‌ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತ ಗೆದ್ದಿದ್ದ 27 ಚಿನ್ನದ ಪದಕಗಳ ದಾಖಲೆಯನ್ನು ಇದು ಮೀರಿಸಿದೆ. ಫೈನಲ್‌ನಲ್ಲಿ ಆರಂಭದಿಂದಲೇ ಮೇಲುಗೈ ಸಾಧಿಸಿದ ತುಳಸಿಮತಿ–ಮಾನಸಿ ಜೋಡಿ ಎರಡೂ ಪಂದ್ಯಗಳಲ್ಲಿ ಮುನ್ನಡೆ ಕಾಯ್ದುಕೊಂಡಿತು. ಎರಡನೇ ಗೇಮ್‌ನಲ್ಲಿ ಚೀನಾದ ಜೋಡಿ ಪ್ರತಿರೋಧ ತೋರಿದರೂ ಭಾರತೀಯ ಆಟಗಾರ್ತಿಯರು ಸುಲಭವಾಗಿ



ಗೆಲುವು ದಾಖಲಿಸಿದರು.

**ಹಿಂದಿನ ಸೋಲಿಗೆ ಸೇಡು:** 2023ರ ಹ್ಯಾಂಗ್‌ಝೌ ಕ್ರೀಡಾಕೂಟದಲ್ಲಿ ಇದೇ ವಿಭಾಗದಲ್ಲಿ ತುಳಸಿಮತಿ ಮತ್ತು ಮಾನಸಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿದ್ದರು. ಇದೀಗ ನಾಗೋಯಾದಲ್ಲಿ ಚಿನ್ನ ಗೆಲ್ಲುವ ಮೂಲಕ ಬಹುಕಾಲದ ಕಾಯುವಿಕೆಗೆ ತೆರೆ ಎಳೆದಿದ್ದಾರೆ. 2025ರ ಏಷ್ಯನ್ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಇದೇ ಚೀನಾದ ಜೋಡಿಯ ವಿರುದ್ಧ ಅನುಭವಿಸಿದ್ದ ಸೋಲಿಗೂ ಈ ಗೆಲುವಿನ ಮೂಲಕ ಸೇಡು ತೀರಿಸಿಕೊಂಡಂತಾಗಿದೆ.

**ಭಾರತದ ಪದಕ ಗಳಿಕೆ 108ಕ್ಕೆ:** ಶುಕ್ರವಾರದ ಬ್ಯಾಡ್ಮಿಂಟನ್ ಗೆಲುವಿನ ಬಳಿಕ ಭಾರತದ ಒಟ್ಟು ಪದಕಗಳ ಸಂಖ್ಯೆ 108ಕ್ಕೆ ಏರಿಕೆಯಾಗಿದೆ. ಇದರಲ್ಲಿ 28 ಚಿನ್ನ, 34 ಬೆಳ್ಳಿ ಮತ್ತು 46 ಕಂಚಿನ ಪದಕಗಳು ಸೇರಿವೆ.

ಶನಿವಾರ ಕ್ರೀಡಾಕೂಟ ಮುಕ್ತಾಯಗೊಳ್ಳಲಿದ್ದು, ಈ ಬಾರಿ ಭಾರತ ಅತ್ಯಂತ ಯಶಸ್ವಿ ಅಭಿಯಾನ ನಡೆಸಿದೆ.

**ತುಳಸಿಮತಿಗೆ 3ನೇ ಪದಕ:** ತುಳಸಿಮತಿ ಮುರುಗೇಶನ್ ಅವರಿಗೆ ಇದು ಕ್ರೀಡಾಕೂಟದಲ್ಲಿ ಮೂರನೇ ಪದಕವಾಗಿದೆ. ನಿತೇಶ್ ಕುಮಾರ್ ಜತೆಗೂಡಿ ಮಿಶ್ರ ಡಬಲ್ಸ್ ಎಸ್‌ಎಲ್ 3–ಎಸ್ ಯು 5 ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಮಹಿಳೆಯರ ಸಿಂಗಲ್ಸ್ ಎಸ್ ಯು 5 ವಿಭಾಗದಲ್ಲೂ ಬೆಳ್ಳಿ ಪದಕ ಪಡೆದಿದ್ದ ತುಳಸಿಮತಿ, ಫೈನಲ್‌ನಲ್ಲಿ ಚೀನಾದ ಯಾಂಗ್ ಕಿಯುಕ್ಸಿಯಾ ವಿರುದ್ಧ ಸೋತಿದ್ದರು.

**ಬ್ಯಾಡ್ಮಿಂಟನ್‌ನಲ್ಲಿ 16 ಪದಕ:** ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಬ್ಯಾಡ್ಮಿಂಟನ್ ಆಟಗಾರರು ಒಟ್ಟಾರೆ 16 ಪದಕಗಳನ್ನು ಗೆದ್ದಿದ್ದಾರೆ. ಇದರಲ್ಲಿ ಮೂರು ಚಿನ್ನ, ಐದು ಬೆಳ್ಳಿ ಮತ್ತು ಎಂಟು ಕಂಚಿನ ಪದಕಗಳಿವೆ. ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ನಿತೇಶ್ ಕುಮಾರ್, ಪುರುಷರ ಸಿಂಗಲ್ಸ್ ಖಐ3 ವಿಭಾಗದಲ್ಲಿ ಸಹ ಆಟಗಾರ ಪ್ರಮೋದ್ ಭಗತ್ ಅವರನ್ನು ಮಣಿಸಿ ಚಿನ್ನ ಗೆದ್ದಿದ್ದರು. ನವೀನ್ ಶಿವಕುಮಾರ್ ಪುರುಷರ ಸಿಂಗಲ್ಸ್ ಎಸ್ ಎಲ್ 4 ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

## ಸ್ಕೇಟಿಂಗ್‌ನಲ್ಲಿ ಅಂಜನಾ ಆನಂದ್‌ಗೆ ಚಿನ್ನ, ಬೆಳ್ಳಿ ಪದಕಗಳ ಸಾಧನೆ

**ಬೆಂಗಳೂರು, ಅ. 23:** ಬೆಂಗಳೂರಿನ ಬಸವೇಶ್ವರನಗರದ ಕಾರ್ಮೆಲ್ ಹೈಸ್ಕೂಲ್‌ನ ವಿದ್ಯಾರ್ಥಿನಿ ಅಂಜನಾ ಆನಂದ್ ಅವರು 7ನೇ ಸಿಐಎಸ್‌ಸಿಇ ರಾಷ್ಟ್ರೀಯ ಕ್ರೀಡಾಕೂಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದು ಗಮನಾರ್ಹ ಸಾಧನೆ ಮಾಡಿದ್ದಾರೆ. ಮುಂಬೈನ ವಿರಾರ್‌ನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಅಂಡರ್–17 ಬಾಲಕಿಯರ ವಿಭಾಗದಲ್ಲಿ ಸ್ಪರ್ಧಿಸಿದ ಅಂಜನಾ, 500 ಮೀಟರ್ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಹಾಗೂ 1,000 ಮೀಟರ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ ಸಿಐಎಸ್‌ಸಿಇ ರಾಷ್ಟ್ರೀಯ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಸತತ ಐದನೇ ವರ್ಷವೂ ಪದಕ ಗೆದ್ದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಅಂಜನಾ ಅವರು ತಮ್ಮ ಐದನೇ ವಯಸ್ಸಿನಿಂದಲೇ ಸ್ಕೇಟಿಂಗ್ ಅಭ್ಯಾಸ ಆರಂಭಿಸಿದ್ದು, ಬೆಂಗಳೂರಿನ ಕೆ.ಜಿ. ಸ್ಕೇಟರ್ಸ್ ಕ್ಲಬ್‌ನ ತರಬೇತುದಾರ ಶ್ರೀನಿವಾಸ್ ಜಿ.ಕೆ. ಅವರ ಮಾರ್ಗದರ್ಶನದಲ್ಲಿ ನಿರಂತರ ತರಬೇತಿ ಪಡೆಯುತ್ತಿದ್ದಾರೆ. ತರಬೇತುದಾರರ ಮಾರ್ಗದರ್ಶನ, ಕಠಿಣ ಪರಿಶ್ರಮ, ಶಿಸ್ತು ಮತ್ತು ಕ್ರೀಡೆಯ ಮೇಲಿನ ಬದ್ಧತೆ ಅವರ ಈ ಸಾಧನೆಗೆ ಪ್ರಮುಖ ಕಾರಣಗಳಾಗಿವೆ.

ಕಾರ್ಮೆಲ್ ಹೈಸ್ಕೂಲ್ ಅನ್ನು ಪ್ರತಿನಿಧಿಸಿ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವ ಅನ್ಜನಾ ಅವರ



ಯಶಸ್ಸು ಶಾಲೆ, ತರಬೇತುದಾರರು ಹಾಗೂ ಕುಟುಂಬದವರಿಗೆ ಹೆಮ್ಮೆ ತಂದಿದೆ. ಕ್ರೀಡಾಭ್ಯಾಸದ ಜತೆಗೆ ಶೈಕ್ಷಣಿಕ ಚಟುವಟಿಕೆಗಳನ್ನೂ ಸಮತೋಲನದಿಂದ ನಿರ್ವಹಿಸುತ್ತಿರುವ ಅವರು, ತಮ್ಮ ನಿರಂತರ ಪ್ರಯತ್ನ ಮತ್ತು ದೃಢಸಂಕಲ್ಪದ ಮೂಲಕ ಇತರ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಿದ್ದಾರೆ.

ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಮತ್ತೊಮ್ಮೆ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿರುವ ಅಂಜನಾ, ಮುಂದಿನ ದಿನಗಳಲ್ಲಿ ಸ್ಕೇಟಿಂಗ್ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆಗಳನ್ನು ಮಾಡುವ ಭರವಸೆ ಮೂಡಿಸಿದ್ದಾರೆ.

## ನವದೆಹಲಿಯ ಸಂಸತ್ ಆವರಣದ ಪ್ರೇರಣಾ ಸ್ಥಳದಲ್ಲಿ ರಾಣಿ ಚೆನ್ನಮ್ಮನವರ ಜಯಂತಿ ಮತ್ತು 202ನೇ ವಿಜಯೋತ್ಸವ ವಿಜೃಂಭಣೆಯಿಂದ ಆಚರಣೆ





ರಾಣಿ ಚೆನ್ನಮ್ಮನವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ಸಂಸದ ಪಿ.ಸಿ.ಮೋಹನ್, ಡಾ.ಸುಧಾಕರ್, ಮಾಜಿ ಸಚಿವ ಮುರುಗೇಶ್ ನಿರಾಣಿ, ಬಸನಗೌಡ ಪಾಟೀಲ್ ಯತ್ನಾಳ್, ಕರ್ನಾಟಕ ರಾಜ್ಯದ ಮಾಜಿ ನವದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ್, ಕೂಡಲಸಂಗಮದ ಬಸವ ಮೃತ್ಯುಂಜಯ ಸ್ವಾಮೀಜಿ, ಶಂಕರಾನಂದ ಸ್ವಾಮೀಜಿ, ಸಿದ್ದಾರೂಢರ ಮಠ, ಆಳೂರು, ಬೀದರ್, ಆತ್ಮಾರಾಮ ಸ್ವಾಮೀಜಿ, ಗುರುದೇವ ಆಶ್ರಮ, ಕಕ್ಕಮರಿ, ವಿನಾಯಕ ಸ್ವಾಮೀಜಿ, ಸಿದ್ದಾರೂಢ ಮಠ, ಚಳಕಾಪುರ ಹಾಗೂ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ಕನ್ನಡಿಗರು ಮತ್ತು ದೆಹಲಿಯ ಅಪಾರ ಸಂಖ್ಯೆಯ ಕನ್ನಡಿಗರು ಹಾಜರಿದ್ದರು.













